
ಗೌರಿ ಲಂಕೇಶರ

ಲಂಕೇಶ್

ಅಕ್ಟೋಬರ್ 4, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಪೊಲೀಸ್ ವಿರುದ್ಧ ಸಿಡಿದೆದ್ದ ಆಟೋಚಾಲಕ!



ಸ್ವತಂತ್ರ ಕರ್ನಾಟಕದ ಹರಿಕಾರ




ಸಿಎಂ ಬಂಟ ಕಬಡ್ಡಿ ಬಾಬು ಅಟ್ಟಹಾಸ

ಳಗಾವಿ ಅಧಿವೇಶನವೆಂಬ ಬಡಾ ತಮಾಷ



ಮಕ್ಕಳ ಭವಿಷ್ಯದೊಂದಿಗೆ ಹುಡುಗಾಟ!

ಬ್ರಾಹ್ಮಣ ಕಮ್ಯುನಿಷ್ಟ್ ಮತ್ತು ಬಂಡವಾಳಶಾಹಿ ಕಮ್ಯುನಿಸಂ..!



ಕಾಮ್ರೇಡರ ಬಗ್ಗೆ ಎಷ್ಟೆಂದು ಬರೆಯುವುದು..? ಈ ಅಂಕಣದ ಕೆಲವು ಖಾಯಂ ಓದುಗರು ಏಕೆ ಯಾವಾಗಲೂ ನಿಮ್ಮ ಒಂದು ಕಣ್ಣು ಬಂಗಾಳದ ಕಮ್ಯುನಿಷ್ಟರ ಮೇಲೆ ಇರುತ್ತದೆ..ಎಂದು ಕರೆ ಮಾಡಿ ಕೇಳುತ್ತಿರುತ್ತಾರೆ..ಬಂಗಾಳದಲ್ಲಿ ಒಂದು ಬಗೆಯ ಹೊಸ ಪ್ರಯೋಗ ನಡೆಯುತ್ತಿದೆ. ಈ ದೇಶವನ್ನು ನೇರವಾಗಿ ಲೂಟಿ ಹೊಡೆಯಲು ಆಂಧ್ರ ಪ್ರದೇಶ ವಿಶ್ವಬ್ಯಾಂಕಿನ ಪ್ರಯೋಗ ಕ್ಷೇತ್ರವಾಗಿದ್ದರೆ ಗುಜರಾತ್ ಹಿಂದುತ್ವದ ಪ್ರಯೋಗ ಶಾಲೆಯಾಗಿದೆ. ಅದೇ ರೀತಿ ಬಂಗಾಳ ಸಮಾಜವಾದದ ಹೆಸರಿನಲ್ಲಿ ಹೇಗೆ ಬಂಡವಾಳಶಾಹಿಯನ್ನು ಸಹನೀಯವಾಗಿ ಜಾರಿಗೆ ತರಬಹುದೆನ್ನುವುದಕ್ಕೆ ಪ್ರಯೋಗ ಶಾಲೆಯಾಗಿದೆ. ಅದರ ಫಲಿತಾಂಶಗಳನ್ನು ವಿಶ್ವಬ್ಯಾಂಕೇ ಕುತೂಹಲದಿಂದ ನೋಡುತ್ತಿದೆ. ಇದು ಯಶಸ್ವಿಯಾದಲ್ಲಿ ಸಮಾಜವಾದವನ್ನು ಪಠಿಸುತ್ತಲೇ ಹೇಗೆ ಯಶಸ್ವಿಯಾಗಿ ಜಾಗತೀಕರಣವನ್ನು ಸಂಸದೀಯ ಪ್ರಜಾತಂತ್ರದ ನಾಟಕ ವಾಡುವ ದೇಶಗಳಲ್ಲಿ ಜಾರಿಗೆ ತರಬಹುದೆನ್ನುವುದಕ್ಕೆ ಬಂಗಾಳ ಇಡಿ ಪ್ರಪಂಚಕ್ಕೆ ಒಂದು ದೊಡ್ಡ ಮಾಡೆಲ್ ಆಗುವುದರಲ್ಲಿ ಸಂಶಯವಿಲ್ಲ. ಜೊತೆಗೆ ಭಾರತಕ್ಕೆ ಕೀರ್ತಿಯೂ ದಕ್ಕಲಿದೆ. ಆದ್ದರಿಂದ ಆ ಪ್ರಯೋಗ ಶಾಲೆಯಲ್ಲಿ ನಡೆಯುವ ಎಲ್ಲಾ ಪ್ರಯೊಗಗಳನು ನಮ್ಮ ಓದುಗರಿಗೆ ತಿಳಿಸಲೇಬೇಕಲ್ಲವೆ..?

ಇದರಲ್ಲಿ ಇತ್ತೀಚಿನದು ಬ್ರಾಹ್ಮಣವಾದದ ಜೊತೆ ಮಾರ್ಕ್ಸ್ ವಾದವನ್ನು ಬೆಸೆಯುವ ಹೊಸ ಕಸಿ ಪ್ರಯತ್ನ. ಬಂಗಾಳದ ಸಾರಿಗೆಮಂತ್ರಿ CPM ಪಕ್ಷದ ಸುಭಾಷ್ ಚಕ್ರವರ್ತಿ ಬಹಳ ಹಳೆಯ ಕಾಮ್ರೇಡ್. ಮಾರ್ಕ್ಸ್‌ವಾದದ ನಿಷ್ಠಾವಂತ ಅನುಚರ. ಆದರೆ ಮೊನ್ನೆ ಅವರು " ನಾನು ಮೊದಲು ಹಿಂದು, ಆಮೇಲೆ ಬ್ರಾಹ್ಮಣ. ನಂತರವಷ್ಟೇ ಕಮ್ಯುನಿಸ್ಟ್" ಎಂದು ಹೇಳಿಕೆ ಇತ್ತಿದ್ದಾರೆ. ಅದರ ಬಗ್ಗೆ ಪ್ರಶ್ನಿಸಿದಾಗ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿಯವರು ನಮ್ಮ ಪಕ್ಷಕ್ಕೆ ಸೇರಲು ಬಯಸುವವರು ನಾಸ್ತಿಕರಾಗ ಬೇಕೆನ್ನುವ ಕಡ್ಡಾಯವಿಲ್ಲವೆಂದು ಸಮರ್ಥಿಸಿಕೊಂಡಿದ್ದಾರೆ. ಇರಲಿ ಅವರ ರಾಜಕೀಯ ಅನಿವಾರ್ಯತೆಗಳಿರಬಹುದೇನೋ? ಆದರೆ ಪ್ರಶ್ನೆ ಸುಭಾಶ್ ಚಕ್ರವರ್ತಿಯಂತಹ ಹಳೆಯ ಕಾಮ್ರೇಡ್ ತಲೆಯಲ್ಲೂ ಇನ್ನೂ ಬ್ರಾಹ್ಮಣ್ಯವಿದೆಯೆಂದರೆ ಬಂಗಾಳದ ಕಮ್ಯುನಿಸ್ಟರ ಬಗ್ಗೆ ಪ್ರಶ್ನೆ ಬರಲೇಬೇಕಲ್ಲವೆ? ಮೊನ್ನೆ ಯಾವುದೋ ಜಾತಿ ಕುರಿತಾದಂತಹ ಸಭೆಯಲ್ಲಿ ಅದೇ ಪಕ್ಷದ ಕರ್ನಾಟಕದ ಮುಖ್ಯಸ್ಥರು ಬಂಗಾಳದಲ್ಲಿ ಮತ್ತು ಕೇರಳದಲ್ಲಿ ಜಾತಿ ನಾಶವಾಗಿ ಬಿಟ್ಟದೆ ಎಂದು ಹೇಳಿಕೆ ಇತ್ತಿದ್ದರು. ಇರಲಿ ಬಿಡಿ. ಬಂಡವಾಳದೊಂದಿಗೆ ಕಮ್ಯುನಿಸಂ ಕಸಿಯಾಗುವುದಾದರೆ ಬ್ರಾಹ್ಮಣವಾದದೊಂದಿಗೆ ಮಾರ್ಕ್ಸ್ ವಾದವೂ ಕಸಿಯಾಗಲೇ ಬೇಕಲ್ಲವೇ? ಬಂಡವಾಳ ದೊಂದಿಗೆ ಕಮ್ಯುನಿಸಂ ಬೆರೆಯುವುದಿಲ್ಲ. ಬದಲಿಗೆ ಕಮ್ಯುನಿಸಂ ಹೆಸರಿನಲ್ಲಿ ಬಂಡವಾಳವಾದ ಮುಂದುವರೆ ಯುತ್ತದೆ. ಅದೇ ರೀತಿ ಬ್ರಾಹ್ಮಣ್ಯವನ್ನು ಮಾರ್ಕ್ಸ್ ವಾದದೊಂದಿಗೆ ಬೆರೆಸಲು ಸಾಧ್ಯವಿಲ್ಲ. ಅಲ್ಲಿ ಮಾರ್ಕ್ಸ್‌ವಾದದ ಮುಸುಕಿನಲ್ಲಿ ಬ್ರಾಹ್ಮಣ್ಯ ಮುಂದುವರೆಯುತ್ತದೆ. ಜಾಗತಿಕ ಬಂಡವಾಳಕ್ಕೆ ಭಾರತದ ಬ್ರಾಹ್ಮಣ್ಯ ಸೈದ್ಧಾಂತಿಕ ಸಮರ್ಥನೆ ಒದಗಿಸುತ್ತಿರುವ ಹೊತ್ತಿನಲ್ಲಿ ಬಂಗಾಳ ದಲ್ಲಿನ ಬಂಡವಾಳಕ್ಕೆ ಬ್ರಾಹ್ಮಣ್ಯದ ಸಮರ್ಥನೆ ಅನಿವಾರ್ಯವಾಗಿರ ಬೇಕಲ್ಲವೇ?

ಚಾರ್ವಾಕ

- ಶಿವಸುಂದರ್-

ವಿಶೇಷ ಆರ್ಥಿಕ ವಲಯ (SEZ) ಗಳಿಗೆ ಅವಕಾಶ ಕೊಟ್ಟ ಸರ್ಕಾರವೇ ಈಗ ಅದರ ಬಗ್ಗೆ ಅಪಸ್ವರ ಎತ್ತುತ್ತಿರುವುದೇಕೆ..?

ಗುಟ್ಟು

ಕಳೆದ ಆರೆಂಟು ತಿಂಗಳಿಂದ ಸರ್ಕಾರದ ಎಲ್ಲಾ ಮಂತ್ರಿಗಳ ಭಾಷಣದಲ್ಲೂ ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರ ಮಾಡಿರುವ ಸಾಧನೆಗಳ ಪಟ್ಟಿಯಲ್ಲಿ ವಿಶೇಷ ಆರ್ಥಿಕ ವಲಯದ ಪ್ರಸ್ತಾಪವಿಲ್ಲದೇ ಇಲ್ಲ. ಅದರಿಂದ ವಿದೇಶಿ ಬಂಡವಾಳದ ಹರಿವು ಹೆಚ್ಚಾಗಿ ನಮ್ಮ ದೇಶ ಸೂಪರ್ ಪವರ್ ಆಗಿಬಿಡುತ್ತದೆ ಎನ್ನುವವರೆಗೆ ಎಲ್ಲರೂ ಕೊರೆದದ್ದೇ ಕೊರೆದದ್ದು.. ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬರುವ ವೇಳೆಗೆ ಕೇವಲ 50ರಷ್ಟಿದ್ದ ಈ ವಲಯಗಳು ಈಗ 300ರಷ್ಟಾಗಿವೆ. ಈ ವಿಶೇಷ ಆರ್ಥಿಕ ವಲಯಗಳು ವಿಶೇಷ ಏಕೆಂದರೆ ಇಲ್ಲಿ ಯಾವುದೇ ಕಾರ್ಮಿಕ ಕಾನೂನುಗಳು ಅನ್ವಯಿಸುವುದಿಲ್ಲ. ಹೆಚ್ಚು ಕಡಿಮೆ ಎಲ್ಲಾ ಬಗೆಯ ತೆರಿಗೆಗಳು ಮಾಫಿ ಆಗಿರುತ್ತವೆ. ಅಂತರರಾಷ್ಟ್ರೀಯ ಗುಣಮಟ್ಟದಲ್ಲಿ ಭೂಮಿ, ನೀರು , ವಿದ್ಯುತ್ತು ಇನ್ನಿತ್ಯಾದಿ ಸೌಲಭ್ಯಗಳು ಅತ್ಯಂತ ಕಡಿಮೆ ಬೆಲೆಗೆ ಲಭ್ಯವಾಗುತ್ತದೆ. ಮತ್ತು ಇತರ ಕಡೆ ಯಾವುದೇ ವಿದೇಶಿ ಕಂಪನಿ ಬಂಡವಾಳ ಹೂಡಿದಲ್ಲಿ ಸಂಸ್ಥೆಗೆ ಬರುವ ಲಾಭದಲ್ಲಿ ಒಂದಷ್ಟು ಪ್ರಮಾಣವನ್ನು ಭಾರತದಲ್ಲೇ ಮರು ಹೂಡಿಕೆ ಮಾಡಬೇಕಾಗುತ್ತಿತ್ತು. ಆದರೆ ಈ 'ವಿಶೇಷ' ವಲಯದಲ್ಲಿ ಆ ಬಗೆಯ ಯಾವ ಬಗೆಯ ಶರತ್ತುಗಳು ವಿದೇಶಿ ಬಂಡವಾಳಕ್ಕೆ ಅನ್ವಯಿಸುವುದಿಲ್ಲ. ಆ ಲೆಕ್ಕದಲ್ಲಿ ಈ ವಲಯಗಳನ್ನು ವಿದೇಶಿ ನೆಲವೆಂದೇ ಪರಿಗಣಿಸಲಾಗು ವುದು. ಹೀಗಾಗಿ ಒಂದರ್ಥದಲ್ಲಿ ಈ ವಿಶೇಷ ವಲಯಗಳೆಂದರೆ ಒಂದು ಬಗೆಯ ಹೊಸ ರೀತಿಯ ವಸಾಹತುಶಾಹಿ ಪಳೆಯುಳಿಕೆ ಎಂದರೂ ತಪ್ಪಾಗುವು ದಿಲ್ಲ.



ಆದರೆ ವಿಷಯವೇನೆಂದರೆ ಸರ್ಕಾರ ಈ ಬಗೆಯ ನೀತಿಯನ್ನು ಅತ್ಯಂತ ಉತ್ಸುಕತೆಯಿಂದ ಜಾರಿಗೆ ತರುತ್ತಿರುವ ಹೊತ್ತಿನಲ್ಲೇ ಇದೇ ಸರ್ಕಾರದ ಇತರ ಇಲಾಖೆಗಳು ಹಾಗೂ ಕೆಲವು ದೊಡ್ಡ ಉದ್ಯಮಿಗಳು ಈ ವಿಶೇಷ ಆರ್ಥಿಕ ವಲಯದ ಪರಿಕಲ್ಪನೆಯ ಬಗ್ಗೆ ಪ್ರಶ್ನೆ ಎತ್ತಲು ಪ್ರಾರಂಭಿಸಿದ್ದಾರೆ. ಸ್ವತಃ ಇಂತಹ ವಲಯಕ್ಕೆ ಆರ್ಥಿಕ ಮಂಜೂರಾತಿ ನೀಡಬೇಕಾದ ರಿಸರ್ವ್ ಬ್ಯಾಂಕ್‌ನ ಗವರ್ನರ್, ಹಾಗೂ ಕೇಂದ್ರ ಸರ್ಕಾರದ ಕೆಲವು ಮಂತ್ರಿಗಳು ಈ ವಿಶೇಷ ಆರ್ಥಿಕ ವಲಯದಿಂದ ಹೆಚ್ಚು ಪ್ರಯೋಜನವಿಲ್ಲ. ಇದರಲ್ಲಿ ಅಬ್ಬಬ್ಬಾ ಎಂದರೆ 90000 ಕೋಟಿ ಬಂಡವಾಳ ಬರಬಹುದು. ಆದರೆ ತೆರಿಗೆ ರಿಯಾಯತಿಯ ಹೆಸರಲ್ಲಿ 1ಲಕ್ಷ ಕೋಟಿಗೂ ಹೆಚ್ಚು ದೇಶದ ಬೊಕ್ಕಸಕ್ಕೆ ನಷ್ಟವಾಗಲಿದೆ ಎಂದು ಹೇಳಿಕೆ ಕೊಡುತ್ತಿದ್ದಾರೆ. ಅಲ್ಲದೆ ಈ ವಲಯದಲ್ಲಿ ನೀಡಲಾದ ಭೂಮಿಯಲ್ಲಿ ಶೇ.70ರಷ್ಟನ್ನು ರಸ್ತೆ ವಸತಿ ಇನ್ನಿತ್ಯಾದಿ ಮೂಲಭೂತ ಸೌಕರ್ಯಗಳಿಗಾಗಿ ಬಳಸಬಹು ದೆಂದು ತಿದ್ದುಪಡಿ ಮಾಡಿರುವು ದರಿಂದ ಅದು ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಇಳಿದುಬಿಡಬಹುದೇ ವಿನಃ ಆರ್ಥಿಕ ಪುನುಶ್ಚೇತನವಾಗು ವುದು ಕಷ್ಟವೆಂಬ ಆಶ್ಚರ್ಯದ ಆದರೆ ನಿಜವಾದ ಮಾತನ್ನೇ ಆಡಿದ್ದಾರೆ.

ಆದರೆ ಪ್ರಶ್ನೆಯೇನೆಂದರೆ ಈವರಗೆ ವಿಶೇಷ ಆರ್ಥಿಕ ವಲಯ ಗಳಿಲ್ಲದೆ ಈ ದೇಶದ ಉದ್ಧಾರವೇ ಸಾಧ್ಯವಿಲ್ಲವೆನ್ನುತ್ತಿದ್ದ ಸರ್ಕಾರವೇ ಈಗ ಅದರ ಬಗ್ಗೆ ನಿಜ ಹೇಳುತ್ತಿರುವುದೇಕೆ? ಅಪಸ್ವರವೆತ್ತುತ್ತಿರುವುದೇಕೆ? ಏನಿದರ ಗುಟ್ಟು...?

ದೇಶ ಸೂರೆಯಾಗುವುದಕ್ಕೆ ವಿರೋಧವಲ್ಲ.. ಅದರಲ್ಲಿ ತಮ್ಮ ಪಾಲು ಕಡಿಮೆಯಾಗುವುದಕ್ಕೆ ವಿರೋಧ..!

ರಟ್ಟು

ಈ ದೇಶದಲ್ಲಿ ಉದಾರೀಕರಣ, ಖಾಸಗೀಕರಣ ಇತ್ಯಾದಿಗಳು ಜಾರಿಯಾದ ಮೇಲೆ ಅದರ ಹೆಚ್ಚು ಲಾಭ ಪಡೆಯುತ್ತಿರುವುದು ಈದೇಶದ ಉದ್ಯಮಪತಿಗಳು ಮತ್ತು ಈ ದೇಶದ ಸಂಪತ್ತನ್ನೆಲ್ಲಾ ಸೂರೆ ಹೊಡೆಯಲು ಲಗ್ಗೆ ಹಾಕುತ್ತಿರುವ ಬಹು ರಾಷ್ಟ್ರೀಯ ಕಂಪನಿಗಳು. ಬಹುರಾಷ್ಟ್ರೀಯ ಕಂಪನಿಗಳು ಸಹಾ ಈ ದೇಶದ ಲೂಟಿಯಲ್ಲಿ ಒಂದು ಪಾಲು ಪಡೆಯುವುದರ ಬಗ್ಗೆ ಅಥವಾ ದೊಡ್ಡ ಪಾಲು ಕಬಳಿಸುವುದರ ಬಗ್ಗೆ ಈ ದೇಶದ ದೊಡ್ಡ ಉದ್ಯಮ ಪತಿಗಳಿಗೆ ಅಂತಹ ದೊಡ್ಡ ಆಕ್ಷೇಪವಿರಲಿಲ್ಲ. ಅವರ ಆಕ್ಷೇಪವೇನಾದರೂ ಇದ್ದಿದ್ದರೆ ಅದು ಆ ಬೃಹತ್ ಲೂಟಿಯಲ್ಲಿ ಯಥಾಶಕ್ತಿ ತಮಗೂ ಪಾಲಿರಬೇಕು ಎಂಬ ಬಗ್ಗೆ ಮಾತ್ರ. ಆದ್ದರಿಂದಲೇ ಈ ದೇಶದಲ್ಲಿ 91ರ ನಂತರದ ಆರ್ಥಿಕ ಸುಧಾರಣೆಯ ಬಗ್ಗೆ ಈ ದೇಶದ ದೊಡ ಉದ್ಯಮಪತಿಗಳು ಏನಾದರೂ ಆಕ್ಷೇಪವೆತ್ತಿದ್ದರೆ ಅದು ಶೇ.100ರಷ್ಟು ವಿದೇಶಿ ಬಂಡವಾಳದ ಬಗ್ಗೆ ಮಾತ್ರ ಅತ್ಯಂತ ಕ್ಷೀಣವಾಗಿ ಅಂದರೆ ಈ ದೇಶದಲ್ಲಿ ವಿದೇಶಿ ಬಂಡವಾಳ ಹರಿದು ಬರುವಾಗ ನೂರಕ್ಕೆ ನೂರರಷ್ಟು ಅವರದ್ದೇ ಆಗಿರದೆ ಈ ದೇಶದ ಉದ್ಯಮಪತಿಗಳ ಸಹಯೋಗ ದೊಂದಿಗೆ ಬರಲಿ. ಅಂದರೆ ನೂರರಲ್ಲಿ 75 ಭಾಗವೂ ವಿದೇಶಿ ಬಂಡವಾಳವೇ ಇರಲಿ. ಆದರೆ ಶೆ.25ರಷ್ಟು ಬಂಡವಾಳ ನಮ್ಮದೂ ಇರಲಿ. ಅರ್ಥಾತ್ ಶೆ. 75ರಷ್ಟು ಅವರು ಸೂರೆ ಹೊಡೆಯಲಿ. ಬೇಡವೆನ್ನುವುದಿಲ್ಲ, ಆದ್ರೆ ಶೇ.25ರಷ್ಟು ನಮಗೂ ಬಿಟ್ಟುಕೊಡಲಿ..ಈ ಚೌಕಾಸಿಯನ್ನೇ ಅವರು ದೇಶದ ಹಿತಾಸಕ್ತಿ ಎಂದೆಲ್ಲಾ ಕರೆದರು....!



ಈಗಲೂ ವಿಶೇಷ ಆರ್ಥಿಕ ವಲಯದ ಬಗ್ಗೆ ಅವರ ಆಕ್ಷೇಪವಿಷ್ಟೆ. ಅಲ್ಲಿ ನೂರಕ್ಕೆ ನೂರರಷ್ಟು ವಿದೇಶಿ ಬಂಡವಾಳ ತಮ್ಮ ದರ್ದಿಲ್ಲದೆ ಹರಿದು ಬಂದು ನೂರಕ್ಕೆ ನೂರರಷ್ಟು ಲಾಭ ಅವರಿಗೇ ಹರಿದು ಹೋದರೆ ನಮ್ಮ ಪಾಲೆಲ್ಲಿ ಎಂಬುದೇ ಅವರ ಕೊರಗು..ಅದೇ ಇದ್ದಕ್ಕಿದ್ದಂತೆ ಅವರಿಗೆ ಹರಿದು ಬಂದಿರುವ ದೇಶಭಕ್ತಿಯ ಹಿಂದಿನ ಹೂರಣ.. ಏಕೆಂದರೆ ಈ ವಲಯಗಳು ವಿದೇಶಿ ಬಂಡವಾಳಕ್ಕೆ ಸ್ಥಳೀಯ ಉದ್ಯಮಪತಿಗಳ ಜೊತೆಗೆ ಯಾವುದೇ ಒಪ್ಪಂದವಿಲ್ಲದೆ ಲೂಟಿ ಮಾಡುವ ಅವಕಾಶವನ್ನು ಕೊಡುತ್ತದೆ. ಮತ್ತು ಅಂತಹ ಬಂಡವಾಳಕ್ಕೆ ಹೆಚ್ಚಿನ ಮಣೆ ಹಾಕುತ್ತದೆ. ಈಗ ಪ್ರಭುತ್ವವೆಂದರೆ ಇದೇ ದೊಡ್ಡ ಬಂಡವಾಳಶಾಹಿಗಳೇ ಅಲ್ಲವೇ? ಅವರಲ್ಲಿ ಒಂದು ವಿಭಾಗ ನೂರಕ್ಕೆ ನೂರು ಬಂಡವಾಳದ ಪರವಿದ್ದಾರೆ. ಸ್ವಲ್ಪ ಆರ್ಥಿಕ ಚೈತನ್ಯ ಪಡೆದಿರುವ ಉದ್ಯಮಪತಿಗಳು ರಿಲೈಯನ್ಸ್, ಇನ್ಫೋಸಿಸ್‌ನಂತವರು ತಮ್ಮ ಪಾಲಿಸಿಯಲ್ಲಿ ಎಂದು ಕೇಳುತ್ತಿದ್ದಾರೆ. ಸರ್ಕಾರವೆಂದರೆ ಇವರೇ ಅಲ್ಲವೆ? ಅದಕ್ಕೆ ಸರ್ಕಾರದ ಒಂದು ವಿಭಾಗ ವಿಶೇಷ ವಲಯದ ನೀತಿ ಮಾಡಿದರೆ ಮತ್ತೊಂದು ವಲಯ ಆರ್ಥಿಕ ವಲಯಗಳ ಬಗ್ಗೆ ಇದ್ದಕ್ಕಿದ್ದ ಹಾಗೆ ಆಕ್ಷೇಪವೆತ್ತಿದೆ. ಇದೇ ಇದರ ಗುಟ್ಟು..

No Comments


"ವಿದೇಶಿ ಸಂಸ್ಥೆಗಳಿಗೂ ಮೀಸಲಾತಿ ಅನ್ವಯಿಸುತ್ತದೆ"

-ಅರ್ಜುನ್ ಸಿಂಗ್



"ಸಾರಾಯಿ ನಿಷೇಧಿಸುವುದು ಅಷ್ಟು ಸುಲಭವಲ್ಲ"

-ಯಡಿಯೂರಪ್ಪ



"ಪ್ರಭುತ್ವದ ರಹಸ್ಯಗಳು ಸೋರಿಕೆ ಆಗಬಾರದೆಂದೇ ಟಿಪ್ಪು ಪರ್ಷಿಯನ್ ಬಳಸಿದ್ದು"

-ಸೂರ್ಯನಾಥ್ ಕಾಮತ್

"ಟಿಪ್ಪುವಿನ ವಿಷಯದಲ್ಲಿ ಶಂಕರ ಮೂರ್ತಿ ಆಡಿದ ಬೇಜವಬ್ದಾರಿ ಮಾತಿಗೆ ನಾನು ಕ್ಷಮೆ ಕೋರುತ್ತೇನೆ"

-ದೇವೇಗೌಡ

" ಪೇಪ್ಸಿ ಮತ್ತು ಕೋಕೋ ಮೇಲಿನ ನಿಷೇಧ ರದ್ದು"

-ಕೇರಳ ಕೋರ್ಟಿನ ಆದೇಶ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ನಾನು ಹೃದಯದಿಂದ ಸಮಾಜವಾದಿ ಮತ್ತು ಬುದ್ಧಿಯಿಂದ ಬಂಡವಾಳಶಾಹಿ"

-ನಾರಾಯಣಮೂರ್ತಿ

"ಕೋರ್ಟ್ ಆದೇಶದ ಮಿತಿಯಲ್ಲಿ ದತ್ತಪೀಠದಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುವುದು"

-ಡಿ.ಹೆಚ್. ಶಂಕರಮೂರ್ತಿ



"ನನ್ನನ್ನು ಕನ್ನಡ ವಿರೋಧಿ ಎಂದು ಕರೆದಿರುವುದು ನನ್ನ ಮನಸ್ಸಿಗೆ ನೋವುಂಟು ಮಾಡಿದೆ"

-ವೆಂಕಯ್ಯನಾಯ್ಡು

" ಟಿಪ್ಪು ಹೇಳಿಕೆ ಪಕ್ಷದ್ದಲ್ಲ"

-ಸದಾನಂದ ಗೌಡ

" ಬಲೂಚಿಸ್ಥಾನದಲ್ಲಿ ನಕ್ಷತ್ರಕ್ಕೆ ಅರಿಲ್ ಎನ್ನುತ್ತಾರೆ. ಅದು ಅಚ್ಚ ಕನ್ನಡ ಪದ"

-ನಿಸಾರ್ ಅಹ್ಮದ್

ಸತ್ಯವಾಕ್ಯ



"ಪ್ರಪಂಚದ ಶ್ರೀಮಂತ ದೇಶಗಳೇ ಆಫ್ರಿಕಾದ ಬಡತನಕ್ಕೆ ಕಾರಣಕರ್ತರು"

-ಮಬೆಕಿ. ದಕ್ಷಿಣ ಆಫ್ರಿಕಾದ ಅಧ್ಯಕ್ಷ.

ವಾರದ ಘೋಷಣೆ



" ನೀನು ಅಪಾಯಕಾರಿ. ನೀನೊಂದು ಕತ್ತೆ, ನೀನು ಅಪಾಯಕಾರಿ, ಜಾರ್ಜ್ ಬುಷ್..!"

-ಶವೇಜ್. ವೆನಿಜುಯೇಲಾ ದೇಶದ ಅಧ್ಯಕ್ಷ



ಬಸವಣ್ಣನವರ ವಚನಸಾಗರದ ಅಲ್ಲಲ್ಲಿಯ ಕೆಲವು ಮಾತು ಗಳನ್ನು ಈ ಸಲದ ಸೂಕ್ತಿಗಳಾಗಿ ಕೊಡುತ್ತಿ ದ್ದೇವೆ. ವಚನಗಳನ್ನು ಪದ್ಯವಾಗಿಯೂ, ಗದ್ಯ ವಾಗಿಯೂ, ನುಡಿಮುತ್ತು ಗಳಾಗಿಯೂ ಓದಲು ಸಾಧ್ಯ. ಇದನ್ನು ವಚನ ಯುಗದ ಒಂದು ಸಾಂಸ್ಕೃತಿಕ/ಸಾಹಿತ್ಯಿಕ ರಾಜ ಕಾರಣದ ಭಾಗ ವಾಗಿಯೇ ನೋಡುವವ ರಿಗೆ ಇವು ಇಷ್ಟ ವಾಗುತ್ತವೆ. ಅಂತಲ್ಲದವ ರನ್ನು ಕೂಡ ನಮ್ಮ ಕೂಡಲ ಸಂಗಮದೇವ ಒಪ್ಪುತ್ತಾನೆ ಅಲ್ಲವೇ.

-ಮೂರ್ತಿ

ಸುಖ ಬಂದಡೆ ಪುಣ್ಯದ ಫಲವೆನ್ನೆನು; ದುಃಖ ಬಂದಡೆ ಪಾಪದ ಫಲವೆನ್ನೆನು


ಬುಷ್, ಶಂಕರಮೂರ್ತಿ ಎಂಬ ಸೈತಾನರು

"ನಿನ್ನೆ ಇದೇ ಜಾಗದಲ್ಲಿ ಸೈತಾನ ನಿಂತಿದ್ದ. ಈಗಲೂ ವನು ಸೂಸಿದ ಸಲ್ಫರ್ ವಾಸನೆ ಇಲ್ಲಿದೆ. ನಾನು ತಾನ ಎಂದು ಕರೆಯುತ್ತಿರುವುದು ಅಮೆರಿಕದ ಧ್ಯಕ್ಷನನ್ನು. ತಾನು ಜಗತ್ತನ್ನೇ ವಶಪಡಿಸಿಕೊಂಡಿರುವಂತೆ ಲ್ಲಿಗೆ ಬಂದಿದ್ದ ಆತ ಪ್ರಸ್ತುತ ದುರಾಡಳಿತ, ಶೋಷಣೆ ಮತ್ತು ಜಗತ್ತಿನ ಬಡವರ ಲೂಟಿಯನ್ನು ಮುಂದು ರಿಸಲು ನೋಡಿದ. 20 ನೇ ಶತಮಾನದಲ್ಲಿ ಜಗತ್ತಿನಲ್ಲಿ ನೇನಾಗಿದೆ ಎಂದು ಅರಿಯಬೇಕಾದರೆ, ಇವತ್ತು ನಾಗುತ್ತಿದೆ ಎಂದು ಗೊತ್ತಾಗಬೇಕಾದರೆ, ನಮ್ಮ ಇಡೀ ಗತ್ತನ್ನು ಭಯ ಆವರಿಸುವಂತೆ ಮಾಡಿರುವುದನ್ನು ರ್ಥ ಮಾಡಿಕೊಳ್ಳಬೇಕಾದರೆ, ಎಲ್ಲರೂ ಈ ಪುಸ್ತಕವನ್ನು ದಲೇಬೇಕು. ಜಗತ್ತಿನ ಮೇಲೆ ತನ್ನ ಹಿಡಿತವನ್ನು ಲಗೊಳಿಸಲು ಅಮೆರಿಕ ತನ್ನ ಕೈಲಾದದ್ದನ್ನೆಲ್ಲ ಾಡುತ್ತಿದೆ. ಆದರೆ ಅದು ಸಾಧ್ಯವಾಗದಂತೆ ನಾವು ೋಡಿಕೊಳ್ಳಬೇಕು. ಜಗತ್ತಿನ ಮೇಲೆ ಸರ್ವಾಧಿಕಾರಿಯ ಡಿತವನ್ನು ವಿರೋಧಿಸಬೇಕಿದೆ...." ಹೀಗೆಂದು ಮೊನ್ನೆ ಶ್ವಸಂಸ್ಥೆಯ ಶೃಂಗಸಭೆಯಲ್ಲಿ ಗುಡುಗಿದವರು ವೆನೆಜು ಲಾದ ಅಧ್ಯಕ್ಷ ಹ್ಯುಗೊ ಶವೇಜ್. ಆತ ಶಿಫಾರಸ್ಸು ಾಡಿದ ಪುಸ್ತಕ ಖ್ಯಾತ ವಿಮರ್ಶಕ ನೋಮ್ ೋಮ್‌ಸ್ಕಿಯವರು ಬರೆದಿರುವ **'Hegemony r survival'** (ಯಜಮಾನಿಕೆ ಅಥವಾ ಉಳಿವು).

ಶವೇಜ್‌ರವರು ಹೀಗೆ ಹೇಳುವ ಮುನ್ನ ಮೂರು ರ್ಷಗಳ ಹಿಂದೆ ಪ್ರಕಟವಾದ ಚೋಮ್‌ಸ್ಕಿಯವರ ುಸ್ತಕ ಮಂದಗತಿಯಲ್ಲಿ ಮಾರಾಟವಾಗುತ್ತಿತ್ತು. ಆದರೆ ಭಾಷಣದ ನಂತರ ಅದು ಎಲ್ಲ ಪುಸ್ತಕದ ಂಗಡಿಗಳಲ್ಲಿ ಒಂದೇ ಒಂದು ಪ್ರತಿಯೂ ಉಳಿಯದಂತೆ ಾರಾಟವಾಗಿದೆ. ಹಲವು ದಶಕಗಳಿಂದ ಅಮೆರಿಕಾದ ರೇ ಆದ ಚೋಮಸ್ಕಿಯವರು ತಮ್ಮ ದೇಶದ ವಿದೇಶಿ ೀತಿಯನ್ನು ಟೀಕಿಸುತ್ತಾ ಬಂದಿದ್ದರೂ, ಜನಸಾಮಾನ್ಯರಿಗೆ ವರ ಬಗ್ಗೆ ಗೊತ್ತೇ ಇರಲಿಲ್ಲ. ಆದರೆ ಈಗ ಅವರೆಲ್ಲ ವ್ಯಕ್ತಿ ಯಾರೆಂದು ಕುತೂಹಲಗೊಂಡಿದ್ದಾರೆ ಾತ್ರವಲ್ಲ, ತಮ್ಮ ದೇಶದ ಅಧ್ಯಕ್ಷ ಜಾರ್ಜ್ ಬುಷ್‌ನನ್ನು ಡುಕ', 'ರೋಗಗ್ರಸ್ಥ', 'ಸರ್ವಾಧಿಕಾರಿ' ಎಂದೆಲ್ಲಾ ರೆದ ಶವೇಜ್ ಕೂಡ ಯಾರೆಂದು ಹುಬ್ಬೇರಿಸಿದ್ದಾರೆ.

ಈ ಮಧ್ಯೆ, ಶವೇಜ್‌ರವರನ್ನು ಭೇಟಿಯಾಗುವ ಶೆ ವ್ಯಕ್ತಪಡಿಸಿರುವ ಚೋಮ್‌ಸ್ಕಿರವರು "ಆತ ಬುಷ್ ರವರನ್ನು ಬಣ್ಣಿಸಲು ಉಪಯೋಗಿಸಿರುವ ಪದಗಳನ್ನು ನಾನು ಬಳಸಲಾರೆ. ಆದರೆ ಶವೇಜ್‌ರವರ ಸರ್ಕಾರವನ್ನು ಉರುಳಿಸಲು ಅಮೆರಿಕ ಪ್ರಯತ್ನಿಸಿತ್ತು. ಅಕಸ್ಮಾತ್ ಅಮೆ ರಿಕ ಸರ್ಕಾರವನ್ನು ಉರುಳಿಸಲು ವೆನೆಜುಯೆಲಾ ಪ್ರಯತ್ನಿ ಸಿದ್ದರೆ ನಾವದನ್ನು ಒಂದು ಜೋಕ್ ರೀತಿ ನೋಡು ತ್ತಿದ್ದೆವೆ?" ಎಂದು ಅಮೆರಿಕನ್ನರಿಗೆ ಪ್ರಶ್ನೆ ಎಸೆದಿದ್ದಾರೆ.

ಪ್ರಸ್ತುತ ರಾಷ್ಟ್ರನಾಯಕರಲ್ಲಿ ವೆನಿಜುಯೆಲಾದ ಅಧ್ಯಕ್ಷ ಹ್ಯುಗೋ ಶವೇಜ್ ಅತಿ ಕುತೂಹಲಕಾರಿ ನಾಯಕ. ನವವಸಾಹತುಶಾಹಿ ಜಾಗತೀಕರಣ ಮತ್ತು



ಹ್ಯುಗೊ ಶವೇಜ್

ಅಮೆರಿಕದ ವಿದೇಶಿ ನೀತಿಯನ್ನು ತೀವ್ರವಾಗಿ ಟೀಕಿಸುವ ಶವೇಜ್ ಇವತ್ತು ಸಮಾಜವಾದಕ್ಕೆ ಹೊಸ ರೂಪವನ್ನು ನೀಡಿ ಅಮೆರಿಕದ ವಿರುದ್ಧ ದಕ್ಷಿಣ ಅಮೆರಿಕ ಖಂಡದ ಇತರೆ ದೇಶಗಳು ಮಾತ್ರವಲ್ಲ, ಏಷಿಯಾದ ಹಲವು ದೇಶಗಳೂ ಸೆಟೆದು ನಿಲ್ಲಲು ಪ್ರೋತ್ಸಾಹಿಸುತ್ತಿರುವ ನಾಯಕ. ಅದಕ್ಕೆ ಅವರನ್ನು ಮತ್ತು ಆತನ ಆಪ್ತಮಿತ್ರರಾದ ಫಿಡಲ್ ಕಾಸ್ಟ್ರೋ ಮತ್ತು ಯವ್ಹೊ ಮೊರಾಲೆಸ್‌ನನ್ನು ಕಂಡರೆ ಅಮೆರಿಕಾಗೆ ಹೊಟ್ಟೆ ಉರಿ!

* * * * * * * * * *

'ಉನ್ನತ ಶಿಕ್ಷಣ' ಎಂಬ ಖಾತೆಯ ಮಂತ್ರಿ ಸ್ಥಾನ ವನ್ನು ಅಲಂಕರಿಸಿರುವ ಡಿ.ಎಚ್. ಶಂಕರಮೂರ್ತಿ ಓರ್ವ ಅಜ್ಞಾನಿ ಎಂಬುದು ಅವರ ಟಿಪ್ಪು ಬಗೆಗಿನ ಹೇಳಿಕೆ ಜಗಜ್ಜಾಹೀರುಪಡಿಸಿದೆ.

"ಟಿಪ್ಪು ಕನ್ನಡದ್ರೋಹಿ ಆಗಿದ್ದ, ಅವನ ವೈಭವೀಕರಣ ಸಲ್ಲದು" ಎಂದು ಸಭೆಯೊಂದರಲ್ಲಿ ಬಾಯಿಬಡಿದು ಕೊಂಡ ಶಂಕರಮೂರ್ತಿ, "ಇದರ ಬಗ್ಗೆ ಯಾವ

ಕಂಡಹಾಗೆ



ಚರ್ಚೆಗೂ ಸಿದ್ಧ" ಎಂದೂ ಸೇರಿಸಿದ್ದರು. ಆದರೆ ಯಾವಾಗ ಇಕ್ಬಾಲ್ ಅನ್ಸಾರಿಯಿಂದ ಹಿಡಿದು ಬರಹ ಗಾರ ಗಿರೀಶ್ ಕಾರ್ನಾಡ್‌ರವರೂ ಚರ್ಚೆಗೆ ಆತನನ್ನು ಆಹ್ವಾನಿಸಿದರೋ, ಆಗ ಪ್ಲೇಟ್ ಬದಲಾಯಿಸಿದ ಶಂಕರ ಮೂರ್ತಿ "ಅದು ಇತಿಹಾಸದಲ್ಲಿ ದಾಖಲಾಗಿರುವ ವಿಷಯ. ಅದರ ಬಗ್ಗೆ ಯಾವ ಚರ್ಚೆಯೂ ಅಗತ್ಯವಿಲ್ಲ" ಎಂದು ಕಿಂಚಿತ್ತೂ ಮುಜುಗರವಿಲ್ಲದೆ ತಿಪ್ಪೆ ಸಾರಿಸಿದರು.

ಈ ಚೆಡ್ಡಿಗಳ ಜಾಯಮಾನವೇ ಇಷ್ಟು. ಮೊದಲು ಬಾಯಿಗೆ, ಮನಸ್ಸಿಗೆ, ಮೆದುಳಿಗೆ ಬಂದ ಕಾಲ್ಪನಿಕ ಇತಿಹಾಸ, ಮಾಹಿತಿ, ಇತ್ಯಾದಿಗಳನ್ನು ಬೊಗಳುವುದು. ಆದರೆ ಅವರ ಬಾಯಿಂದ ಹೊರಡಿದ ಮಾತುಗಳನ್ನೇ ಯಾರಾದರು ಚಾಲೆಂಜ್ ಮಾಡಿದರೆ, ಅದನ್ನು ಎದುರಿಸ ಲಾಗದೇ ಬಾಲ ಮುದುರಿಕೊಂಡು ಓಡಿ ಹೋಗು ವುದು. ಉದಾಹರಣೆಗೆ, ಬಾಬಾಬುಡನ್ ಗಿರಿ ವಿಷಯ ದಲ್ಲೂ ಇದೇ ನಡೆದಿತ್ತು. "ದತ್ತ ಪೀಠದಲ್ಲಿ ದತ್ತ ಜಯಂತಿ ಆಚರಿಸುವುದು ಹಲವಾರು ಶತಮಾನಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ" ಎಂದು ಅಬ್ಬರಿಸಿದರು ಯಡಿಯೂರಪ್ಪ, ವಿಧಾನಸೌಧದಲ್ಲಿ ನಡೆದ ಸರ್ವ ಪಕ್ಷ-ಸಂಘಟನೆಗಳ ಸಭೆಯಲ್ಲಿ. "ಎಷ್ಟು ವರ್ಷದಿಂದ ಈ ಜಯಂತಿಯನ್ನು ಆಚರಿಸಿದ್ದೀರಿ?" ಎಂದು ನಾವು ಪ್ರಶ್ನೆ ಹಾಕಿದ್ದಕ್ಕೆ "ಏಳು ವರ್ಷಗಳಿಂದ" ಎಂದು ಅವರೇ ಉತ್ತರಿಸಿದ್ದರು. "ಏಳು ವರ್ಷಗಳು ಹೇಗೆ ಶತಮಾನಗಳಾದವು? ಅದು ಹೇಗೆ ಸಂಪ್ರದಾಯ ವಾಯಿತು?" ಎಂದು ನಾವು ಮರುಪ್ರಶ್ನೆ ಹಾಕಿದಾಗ ಯಡಿಯೂರಪ್ಪ ತೆಪ್ಪಗಾಗಿದ್ದರು.


ಮೊದಲು ಚರ್ಚೆಯಿಂದ ಹಿಂದೆ ಸರಿದ ಶಂಕರ ಮೂರ್ತಿ, ಆನಂತರ ರಾಜ್ಯದೆಲ್ಲೆಡೆ ನಡೆದ ಪ್ರತಿಭಟನೆ ಗಳನ್ನು ಕಂಡು ಅರ್ಧಗೋಡೆ ಮೇಲಿನ ದೀಪದಂತಹ "ಕ್ಷಮೆ" ಕೇಳಿದ್ದಾರೆ. "ಯಾರ ಮನಸ್ಸಿಗಾದರೂ ನೋವಾ ಗಿದ್ದರೆ ಕ್ಷಮಿಸಿ, ಆದರೆ ಟಿಪ್ಪುವಿನ ಬಗ್ಗೆ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ" ಎಂದಿದ್ದಾರೆ.


ಶಂಕರಮೂರ್ತಿಯವರ ಹೇಳಿಕೆ ಕೇವಲ ಅಕಾಡೆ ಮಿಕ್ ವಿಷಯವಲ್ಲ, ಅದರ ಹಿಂದೆ ಸ್ಪಷ್ಟವಾದ ಕೋಮುವಾದಿ ಧೋರಣೆ ಇದೆ. ಈ ಸಂಚಿಕೆಯಲ್ಲಿ ಶಿವಸುಂದರ್‌ರವರು ತಮ್ಮ ಲೇಖನದಲ್ಲಿ ವಿವರಿಸಿರುವಂತೆ ಬ್ರಿಟಿಷರು ಮಾತ್ರ ಟಿಪ್ಪುವಿನ ವೈರಿಗಳಾಗಿರಲಿಲ್ಲ, ಅವ ರೊಂದಿಗೆ ಊಳಿಗಮಾನ್ಯ ವ್ಯವಸ್ಥೆ ಯನ್ನೇ ನಾಶ ಮಾಡಲು ಹೊರಟಿದ್ದ ಟಿಪ್ಪು ಬ್ರಾಹ್ಮಣ್ಯ ಶಾಹಿಗಳ ವಿರೋಧವನ್ನೂ ಕಟ್ಟಿಕೊಂಡಿದ್ದ. ಅಂದಿನ ಬ್ರಿಟಿಷರು ಮತ್ತು ಬ್ರಾಹ್ಮಣರು ಬರೆದ ಟಿಪ್ಪು ಕುರಿತ ಇತಿಹಾಸವೇ ಇವತ್ತು ಶಂಕರ ಮೂರ್ತಿ, ಚಿದಾನಂದಮೂರ್ತಿ ಮತ್ತು ಎಸ್.ಎಲ್. ಭೈರಪ್ಪನಂತಹವರ ಬಾಯಿಗಳಿಂದ ಪುನರುಚ್ಚರಿಸಲ್ಪಡುತ್ತಿದೆ....


ಅಯೋಧ್ಯೆಯಿಂದ ಹಿಡಿದು ಬಾಬಾಬುಡನ್‌ಗಿರಿಯ ದರ್ಗಾ ಸೇರಿದಂತೆ, ಟಿಪ್ಪು ಮತ್ತು ಮೈಸೂರು ಇತಿಹಾಸ ವನ್ನೇ ವಿಕೃತಿಗೊಳಿಸುತ್ತಿದ್ದಾರೆ ಸಂಘ ಪರಿವಾರಿಗಳು. ಈಗಂತೂ ಅವರದ್ದೇ ಬಿಜೆಪಿ ಪಕ್ಷ ಅಧಿಕಾರದಲ್ಲಿರು ವುದರಿಂದ ಇವರ ಉಪಟಳ ಬರುವ ತಿಂಗಳಲ್ಲಿ ಹೆಚ್ಚಾಗಲಿದೆ. ಇದೆಲ್ಲದರ ವಿರುದ್ಧ ನಮ್ಮ ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಹೋರಾಡುತ್ತಲೇ ಬಂದಿದೆ. ಅದರ ಅಂಗವಾಗಿ ಇದೇ ಸೆಪ್ಟೆಂಬರ್ 27 ರಂದು ರಾಜ್ಯದ ವಿವಿಧ ಜಿಲ್ಲೆ ಹಾಗು ತಾಲ್ಲೂಕುಗಳಲ್ಲಿ ಪ್ರತಿಭಟನೆ ಮತ್ತು ಮೆರವಣಿಗೆಯನ್ನು ಹಮ್ಮಿಕೊಂಡಿ ದ್ದೇವೆ.


ನಮ್ಮ ಕರ್ನಾಟಕ ರಾಜ್ಯ ಕೋಮುವಾದಿಗಳ ವಿಷಕ್ಕೆ ಬಲಿಯಾಗಬಾರದೆಂದಿದ್ದರೆ ದಯವಿಟ್ಟು ಎಲ್ಲರೂ ಈ ಪ್ರತಿಭಟನೆಗಳಲ್ಲಿ ಭಾಗವಹಿಸಿ... ಬಸವಣ್ಣ, ಕುವೆಂಪು ರವರ ಕರ್ನಾಟಕವನ್ನು, ಸೌಹಾರ್ದದ ಸಂಕೇತವಾದ ಬಾಬಾಬುಡನ್ ಗಿರಿಯನ್ನು, ವಸಾಹತುಶಾಹಿಗಳ ವಿರುದ್ಧ ಹೋರಾಡುತ್ತಲೇ ಈ ರಾಜ್ಯದ ರೈತರ, ದಲಿತರ ಆಶಾಕಿರಣವಾಗಿದ್ದ ಟಿಪ್ಪು ಸುಲ್ತಾನನೆಂಬ ಧೀರರನ್ನು ಉಳಿಸಿಕೊಳ್ಳಬೇಕಿರುವುದು ಪ್ರತಿ ಪ್ರಜ್ಞಾವಂತ ಕನ್ನಡಿಗರ ಜವಾಬ್ದಾರಿಯಾಗಿದೆ.

-ಗೌರಿ ಲಂಕೇಶ್










ಇಲ್ಲಿರುವ ಚಿತ್ರಗಳು ಈಗ ರಾಜ್ಯದಲ್ಲಿ ಸೂಪರ್ ಹಿಟ್ ಆಗಿರುವ 'ರಿಯಲ್ ಸಿನಿಮಾ'ಗಳ ಜಾಹೀರಾತುಗಳು. ಭರ್ಜರಿ ಪ್ರದರ್ಶನ ಕಾಣುತ್ತಿರುವ ಈ ಸಿನಿಮಾಗಳ ಜಾಹೀರಾತುಗಳನ್ನು ತಮ್ಮ ಕೈ ಚಳಕದಿಂದ ತಯಾರಿಸುವವರು ಪತ್ರಿಕೆಯ ಮಿತ್ರ ಮತ್ತು 'ಸ್ಲಂ ಜಗತ್ತು' ಪತ್ರಿಕೆಯ ಡಿಸೈನರ್ ಟಿ.ಕೆ. ದಯಾನಂದ್. ನೀವೂ enjoy ಮಾಡಿ.



ರಾಜಾಜಿನಗರಕ್ಕೊಬ್ಬಳೇ ಪದ್ಮಾವತಿ!

ಮತಾಂತರ ಪರಿಣಯ



ಚುನಾವಣೆಯಲ್ಲಿ ಗೆಲ್ಲುವ ಮತ್ತು ಅನುಕೂಲ ಸಿಂಧು ರಾಜಕೀಯ ನಡೆಸುವ ಉದ್ದೇಶದಿಂದ ಪಕ್ಷ ಬದಲಿಸುವುದು ಸಹಜ. ಆದರೆ ಪಕ್ಷದ ಟಿಕೆಟ್ ಗಿಟ್ಟಿಸುವ ಏಕೈಕ ಉದ್ದೇಶದಿಂದ ಮತಾಂತರ ಆಗುವ ಪ್ರಕರಣಗಳು ಅಪರೂಪ. ಅಂತಹ ಅಪರೂಪದ ಮಹಿಳೆ, ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 23ರ ಮಹಾನಗರ ಪಾಲಿಕೆಯ ಕಾಂಗ್ರೆಸ್ ಪಕ್ಷದ ಸದಸ್ಯೆ ಜಿ. ಪದ್ಮಾವತಿ.

ಪದ್ಮಾವತಿ ಈಗ ಕೇವಲ ಮಹಾನಗರ ಪಾಲಿಕೆ ಸದಸ್ಯೆಯಲ್ಲ. ಬೆಂಗಳೂರು ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ. ಬಹಳ ಅಲ್ಪಕಾಲದಲ್ಲಿ ಈಕೆ ಈ ಸ್ಥಾನಕ್ಕೆ ಏರಿದ ರೀತಿ, ಅದಕ್ಕೆ ಬಳಸಿದ ತಂತ್ರ ಮತ್ತು ಅವಕಾಶವಾದಿ ಕುತಂತ್ರಗಳನ್ನು ಗಮನಿಸಿದರೆ ಕೆಲವೇ ವರ್ಷಗಳಲ್ಲಿ ಈಕೆ ಕಾಂಗ್ರೆಸ್ ಪಕ್ಷದ ರಾಜ್ಯ ಮುಂಚೂಣಿಯ ನಾಯಕಿಯಾಗಿ ಮಿಂಚುವುದರಲ್ಲಿ ಸಂದೇಹವಿಲ್ಲ.



ಆರ್.ವಿ. ಹರೀಶ್

1990ರಲ್ಲಿ ಪದ್ಮಾವತಿ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಲ್ಲಿ ಗುತ್ತಿಗೆ ಆದಾರದ ನೌಕರಿಯಲ್ಲಿದ್ದರು. ಆ ಸಂದರ್ಭದಲ್ಲಿ ಜನತಾದಳದಲ್ಲಿ ಪ್ರಭಾವಿಯಾಗಿದ್ದ ಯುವ ಮುಖಂಡ ಆರ್.ವಿ. ಹರೀಶ್, ಪದ್ಮಾವತಿಯವರ ಚುರುಕುತನವನ್ನು ಗಮನಿಸಿ, ವಾರ್ಡ್ ನಂಬರ್ 22 ರಾಮಮಂದಿರದಿಂದ ಅವರನ್ನು ಪಾಲಿಕೆ ಚುನಾವಣೆಗೆ ನಿಲ್ಲಿಸಿದರು. ಪದ್ಮಾವತಿ ಸುಲಭವಾಗಿ ಗೆದ್ದು ಬಂದರು. ಗೆಲುವಿನ ನಂತರ ಅವರಿನ್ನೂ ಚುರುಕಾದರು.

ಎಷ್ಟು ಚುರುಕಾದರೆಂಬುದು ಅವರ ಗಾಡ್‌ಫಾದರ್ ಹರೀಶ್‌ಗೇ ಗೊತ್ತಾಗಿದ್ದು 1994ರ ವಿಧಾನಸಭಾ ಚುನಾವಣೆಯಲ್ಲೇ. ಆಗ ಜನತಾದಳ ಒಡೆದು ಎರಡಾಗಿತ್ತು. ಆರ್.ವಿ. ಹರೀಶ್, ರಾಮಕೃಷ್ಣ ಹೆಗಡೆಯ ಜೆಡಿಯುನಿಂದ ವಿಧಾನಸಭೆಗೆ ಸ್ಪರ್ಧಿಸಿದ್ದರೆ, ವೈ.ಎಸ್.ವಿ. ದತ್ತ ದೇವೇಗೌಡರ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರು. ದತ್ತ ಗೆಲ್ಲುವ ಸಾಧ್ಯತೆಯೇ ಹೆಚ್ಚಿದ್ದಿದ್ದರಿಂದ ಸಹಜವಾಗಿ ಪದ್ಮಾವತಿ ದತ್ತ ಗುಂಪಿನೊಂದಿಗೆ ಗುರುತಿಸಿಕೊಂಡು, ಗುರು ಆರ್.ವಿ. ಹರೀಶರ ಕಿವಿ ಮೇಲೆ ಹೂವಿಟ್ಟಿದ್ದರು. ಪದ್ಮಾವತಿ ರಾಜಕೀಯದಲ್ಲಿ ಮೇಲೇರಲು ಹೇಗೆಲ್ಲಾ 'ಕಷ್ಟಪಟ್ಟರು' ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ.

ಆ ನಂತರ ಪದ್ಮಾವತಿ ಜೆಡಿಎಸ್‌ನಿಂದ ಮತ್ತೊಮ್ಮೆ ನಗರ ಪಾಲಿಕೆಗೆ ಆರಿಸಿಬಂದರು. ಅವರ ಅವಧಿ ನಾಲ್ಕು ವರ್ಷ ಕಳೆದಿತ್ತು, ಜೆಡಿಎಸ್ ವರ್ಚಸ್ಸು ಕಳೆದುಕೊಂಡು, ಕಾಂಗ್ರೆಸ್ ಗಾಳಿ ಸ್ವಲ್ಪ ಬಿರುಸಾಗಿತ್ತು. ಅನುಕೂಲ ಸಿಂಧು ರಾಜಕಾರಣಕ್ಕೆ ಹೇಳಿ ಮಾಡಿಸಿದಂತಿದ್ದ ಪದ್ಮಾವತಿ ಡಿ.ಕೆ. ಶಿವಕುಮಾರ್ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಪಾದರ್ಪಾಣೆ ಮಾಡಿಬಿಟ್ಟರು. ಡಿಕೆಶಿ ಏನು ಪದ್ಮಾವತಿಯವರನ್ನು ಕಾಂಗ್ರೆಸಿಗೆ ವಿನಾಕಾರಣ ಸೇರಿಸಿಕೊಂಡಿರಲಿಲ್ಲ, ಅದಕ್ಕೂ ಒಂದು ಡೀಲ್ ಕುದುರಿತ್ತು. ಪದ್ಮಾವತಿ ಕಾಂಗ್ರೆಸಿಗೆ ಬಂದರೆ ಅವರಿಗೆ ಮತ್ತೆ ಪಾಲಿಕೆ ಚುನಾವಣೆಗೆ ಟಿಕೆಟ್ ಕೊಡಿಸುವುದು ಮತ್ತು ಅದಕ್ಕೆ ಪ್ರತ್ಯುಪಕಾರವಾಗಿ ಅವರ ವಾರ್ಡಿನ ವ್ಯಾಪ್ತಿಯಲ್ಲೇ ಬರುವ ಪಾಲಿಕೆಯ ಎರಡು ಚಿನ್ನದ ಗಣಿಯಂತಹ ಆಸ್ತಿಯನ್ನು ಡಿಕೆಶಿ ಬುಟ್ಟಿಗೆ ಹಾಕುವುದು ಪದ್ಮಾವತಿಯ ಜವಾಬ್ದಾರಿಯಾಗಿತ್ತು.

ಪಶ್ಚಿಮ ಕಾರ್ಡ್ ರಸ್ತೆಯ ವಿದ್ಯುತ್ ಇಲಾಖೆಯ ಪವರ್ ಹೌಸ್ ಪಕ್ಕದಲ್ಲಿರುವ ಒಂದೂವರೆ ಎಕರೆ ಜಾಗ ಮತ್ತು ರಾಜಾಜಿನಗರ 5 ನೇ ಬ್ಲಾಕಿನ ದಿನತಂತಿ ತಮಿಳು ಪತ್ರಿಕೆ ಕಚೇರಿಯ ಪಕ್ಕದಲ್ಲಿರುವ ದಾಸಾಶ್ರಮದ 4 ಎಕರೆ ಜಾಗವೇ ಡಿಕೆಶಿ ಕಣ್ಣುಬಿದ್ದಿದ್ದ ಜಾಗ. ಈ ಎರಡೂ ಜಾಗಗಳು ಪದ್ಮಾವತಿ ಪ್ರತಿನಿಧಿಸುತ್ತಿದ್ದ ವಾರ್ಡ್ ನಂಬರ್ 22ರ ವ್ಯಾಪ್ತಿಗೆ ಬರುತ್ತವೆ.

ಆದರೆ ಚುನಾವಣೆ ಘೋಷಿತವಾದಾಗ ಪದ್ಮಾವತಿ ಸಾಂಪ್ರದಾಯಿಕವಾಗಿ ಸತತವಾಗಿ ಪ್ರತಿನಿಧಿಸುತ್ತಿದ್ದ ವಾರ್ಡ್ ನಂ. 22 ಬಿಸಿಎಂ (ಎ)ಗೆ ಮೀಸಲೆಂದು ಪ್ರಕಟವಾಗಿತ್ತು. ಈ ತಾಂತ್ರಿಕ ಅಡಚಣೆಯಿಂದಾಗಿ ಪದ್ಮಾವತಿ ವಾರ್ಡ್ ನಂಬರ್ 22 ರಿಂದ ಸ್ಪರ್ಧಿಸುವಂತಿರಲಿಲ್ಲ, ಆಗ ಪದ್ಮಾವತಿ ಹೂಡಿದ ತಂತ್ರವೇ ಮತಾಂತರ. ನೇರವಾಗಿ ಗಾಂಧಿನಗರದಲ್ಲಿರುವ ಬೌದ್ಧ ಕೇಂದ್ರಕ್ಕೆ ಹೋದ ಪದ್ಮಾವತಿ ಬೌದ್ಧ ಮತಕ್ಕೆ ಪರಿವರ್ತನೆಯಾಗಿ ಅಲ್ಲಿಂದ ಒಂದು ಪ್ರಮಾಣ ಪತ್ರವನ್ನು ತಂದು ನಾಮಿನೇಷನ್ ಫೈಲ್ ಮಾಡಿಬಿಟ್ಟರು.

ಆದರೆ ವಾರ್ಡ್ ನಂಬರ್ 22ಕ್ಕೆ ಎನ್.ಎಸ್.ಯು.ಐ. ಹಾಗು ಯುವ ಕಾಂಗ್ರೆಸ್‌ನಲ್ಲಿದ್ದ ಜಿ. ಶ್ರೀನಿವಾಸ್‌ಗೆ ಟಿಕೆಟ್ ನೀಡಬೇಕೆಂದು ನಿರ್ಧರಿಸಿದ್ದ ರಾಜ್ಯಸಭಾ ಸದಸ್ಯ ಬಿ.ಕೆ. ಹರಿಪ್ರಸಾದ್ ಮತ್ತು ನಗರ ಕಾಂಗ್ರೆಸ್ ಅಧ್ಯಕ್ಷ ರಾಮಲಿಂಗಾರೆಡ್ಡಿಯ ಮುಂದೆ ಪದ್ಮಾವತಿಯವರ ರಾಜಕೀಯ ಫಲ ನೀಡಲಿಲ್ಲ, ಆದರೂ ನೂತನ ಗಾಡ್ ಫಾದರ್ ಡಿ.ಕೆ. ಶಿವಕುಮಾರ್ ಕೈಬಿಡಲಿಲ್ಲ. ಸಂಬಂಧವೇ ಇಲ್ಲದ ಪ್ರಕಾಶನಗರ ವಾರ್ಡ್ ನಂಬರ್ 23 ರಿಂದ ಪದ್ಮಾವತಿಯವರಿಗೆ ಟಿಕೆಟ್ ಕೊಡಿಸಿಬಿಟ್ಟರು. ಅಲ್ಲಿದ್ದ ಹಳೆಯ ಕಾಂಗ್ರೆಸ್ ಕಾರ್ಯಕರ್ತರನ್ನೆಲ್ಲಾ ಈ ಕಾರಣಕ್ಕಾಗಿ ಕಡೆಗಣಿಸಲಾಯ್ತು. ಪದ್ಮಾವತಿಯ ಅದೃಷ್ಟ ಅಲ್ಲೂ ಆರಿಸಿ ಬಂದರು.



ಪಕ್ಕದ ವಾರ್ಡಿನಲ್ಲಿದ್ದರೂ ಇನ್ನೊಂದು ವಾರ್ಡಿಗೆ ಸೇರಿದ ದಾಸಾಶ್ರಮದ ಜಮೀನನ್ನು ಡಿಕೆಶಿ ಮಡಿಲಿಗೆ ಹಾಕುವ ಯತ್ನವನ್ನು ಪದ್ಮಾವತಿ ಬಿಡಲಿಲ್ಲ. ಈ ಮಧ್ಯೆ ಡಿ.ಕೆ. ಶಿವಕುಮಾರ್ ಈ ದಾಸಾಶ್ರಮದ ಜಾಗದ ಮುಂದೆ ಒಂದು ಬೋರ್ಡನ್ನು ಜಡಿದು "ದಾಸಾಶ್ರಮ ಟ್ರಸ್ಟ್" ಡಿ.ಕೆ. ಶಿವಕುಮಾರ್ ಕಾರ್ಯಾಧ್ಯಕ್ಷ ಎಂದು ಬರೆಸಿ ಹಾಕಿದ್ದಾರೆ. ಮೂಲತಃ ಪಾಲಿಕೆಗೆ ಸೇರಿದ ಈ ಜಾಗದಲ್ಲಿ ಧಾರ್ಮಿಕ ಚಟುವಟಿಕೆ ನಡೆಸಲು ರಮಾ ಪೈ ಎನ್ನುವವರು ಪಾಲಿಕೆಯಿಂದ ಗುತ್ತಿಗೆ ಪಡೆದಿದ್ದಾರೆ. ಸದ್ಯಕ್ಕೆ ರಮಾ ಪೈ ಅಮೆರಿಕಾದಲ್ಲಿದ್ದು, ಅವರ ಅನುಪಸ್ಥಿತಿಯಲ್ಲಿ ಈ ಜಾಗ ನುಂಗುವ ಹುನ್ನಾರ ನಡೆದಿದೆ. ಈ ಜಾಗದ ಬೆಲೆ ಈಗ ಏನಿಲ್ಲವೆಂದರೂ ಐವತ್ತು ಕೋಟಿ ರೂಪಾಯಿ ಇದೆ.

ಕಾಂಗ್ರೆಸ್‌ನಿಂದ ಪಾಲಿಕೆಗೆ ಆಯ್ಕೆಯಾದ ನಂತರ ಮೇಲ್ಮನವಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಪದ್ಮಾವತಿ, ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರ ಸೋದರ ಸಂಬಂಧಿಯ ಮಗನಿಂದಲೇ ಯಾವುದ ಕೆಲಸಕ್ಕೆ 'ಸಮ್‌ಥಿಂಗ್' ಕೇಳಿದ್ದರಂತೆ. ಈ ವಿಷಯ ಕೃಷ್ಣ ಗಮನಕ್ಕೂ ಬಂದು, ಮೇಲ್ಮನವಿ ಸಮಿತಿ ನಾಲ್ಕೇ ತಿಂಗ ವಿಸರ್ಜನೆ ಆಗಬೇಕಾಗಿ ಬಂತು.

ಇಂಥ ಪದ್ಮಾವತಿ ಈಗ ಕಾಂಗ್ರೆಸ್ ಪಕ್ಷದಲ್ಲಿ ಹಲವ ವರ್ಷಗಳಿಂದ ದುಡಿದಿರುವ ವಸಂತಾರವಿ, ಅಂಬುಜ ಮತ್ತು ಚಂಪಕರಂತಹವರನ್ನು ಹಿಂದೆ ಹಾಕಿ ಮಹಿ ಕಾಂಗ್ರೆಸಿಗೆ ಅಧ್ಯಕ್ಷರಾಗಿ ಕೂತಿದ್ದಾರೆ. ರಾಜಾಜಿನಗರ 'ಶ್ರೀ ಅನ್ನಪೂರ್ಣೇಶ್ವರಿ ಮಹಿಳಾ ಕ್ರೆಡಿಟ್ ಕೋ ಆಪರೇ ಸೊಸೈಟಿ' ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದಾರೆ. ಒ... ಮೂಲದ ಪ್ರಕಾರ ಈ ಸೊಸೈಟಿಯಲ್ಲಿ ಡಿಕೆಶಿ ಪುಡಿಗಾಸನ್ನು ತೊಡಗಿಸಿದ್ದಾರಂತೆ.'

ಈ ಪುಡಿಗಾಸನ್ನು ತಕ್ಕ ರೀತಿಯಲ್ಲಿ ಬಳಸಿಕೊಳ್ಳುತ್ತಿ ಪದ್ಮಾವತಿ, ಊದುಬತ್ತಿ ಹೊಸೆ ವವರೂ, ತರಕಾರಿ ಮಾರ ಮಹಿಳೆಯರು ಇಂತಹವರಿಗೆ ಕೊಟ್ಟಿದ್ದಾರಂತೆ. ಹೀಗೆ ಸಾಲ ಪ ಮಹಿಳೆಯರು ಪದ್ಮಾವತಿ ನಡೆ ಮಹಿಳಾ ಕಾಂಗ್ರೆಸ್ ಮೇಳಗ ಕಡ್ಡಾಯವಾಗಿ ಹೋಗಲೇಬೆ ಎಂತಹ ಒಳ್ಳೆ ತಂತ್ರವಲ್ಲವೆ?

ಆದರೆ ಪಾಪ ಪದ್ಮಾ ಮತ್ತು ಡಿಕೆಶಿ ಸೇರಿ ದಾ ಶ್ರಮವನ್ನು ನುಂಗಲು ಮಾಡಿದ ಪ್ಲಾನನ್ನು ಅದೇ ವಾರ್ಡಿನ ಪಾ ಸದಸ್ಯ ಜಿ. ಶ್ರೀನಿವಾಸ್ ಮ ನಾಗರಿಕರು ವಿರೋಧಿಸುತ್ತಿ ವುದು, ಇಬ್ಬರಿಗೂ ನುಂಗಲಾರದ ತುತ್ತಾಗಿದೆ. ಆಸ್ತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವಿಚಾ ಅಂತಿಮ ಹಂತದಲ್ಲಿದೆ. ಆದರೆ ಪಾಲಿಕೆಯ ಮ ತಮ್ಮ ಪ್ರಭಾವವನ್ನು ಬೀರುತ್ತಿರುವ ಡಿಕೆಶಿ, ಪಾಲಿಕೆ ವಕೀಲರು ವಿಚಾರಣೆಗೆ ಗೈರು ಹಾಜರಾಗುವ ನೋಡಿಕೊಂಡು ವಿನಾಕಾರಣ ವಿಳಂಬ ವಾಗುವ ನೋಡಿಕೊಳ್ಳುತ್ತಿದ್ದಾರೆ.

-ವರದಿಗಾ

ಪದ್ಮಾವತಿಯ ಆಸ್ತಿ ಅಫಿಡವಿಟ್

ಪಾಪ, ಇಷ್ಟೆಲ್ಲಾ ರಾಜಕೀಯವಾಗಿ ಮೇಲೇರಿರುವ ಪದ್ಮಾವತಿ ಸ್ವಂತಕ್ಕೆಂದು ಸ್ವಲ್ಪ ಆಸ್ತಿ ಮಾಡಿಕೊಂಡಿರುವು ತಪ್ಪೆ? ಕಾಮಾಕ್ಷಿಪಾಳ್ಯದ ರಿಂಗ್‌ರಸ್ತೆಯಲ್ಲಿ ಸುಪ್ರಧ ಹೆಸರಿನ ಒಂದು ಪೆಟ್ರೋಲ್ ಬಂಕು. ಅದಕ್ಕೆ ಅಂಟಿಕೊಂ ಎರಡು ಸರ್ವೀಸ್ ಸ್ಟೇಷನ್ನು, ರಾಜಾಜಿನಗರ ಇಂಡಸ್ಟ್ರಿಯಲ್ ಟೌನಿನಲ್ಲಿ ತಿರುಮಲ ಕಲ್ಯಾಣ ಮಂಟ ರಾಜಾಜಿನಗರ 5 ನೇ ಬ್ಲಾಕಿನಲ್ಲಿ 40x50 ಅಳತೆಯ ಒಂದು ನಿವೇಶನ, ಬಾಷ್ಯಂ ಸರ್ಕಲ್‌ನ 65 ನೇ ಕ್ರಾಸ್‌ನ 40x50 ರ ನಿವೇಶನದಲ್ಲಿ ಒಂದು ಮನೆ, ಗೋಪಾಲಪುರದಲ್ಲಿ ಸುಮಾರು 3 ಕೋಟಿ ಬೆಲೆ ಬಾಳುವ ಒಂ ಸಾಲು ಮನೆ, ಇವು ಇವರ ಸ್ಥಿರಾಸ್ತಿಗಳು.

ಉಳಿದಂತೆ, ಹೆತ್ತ ತಂದೆ ಗೋಪಾಲಪ್ಪನವರಿಗೆ ಸ್ವತಂತ್ರ ಹೋರಾಟಗಾರರೆಂದು ಕೆಂಪೇಗೌಡ ಪ್ರ ಕೊಡಿಸಿದ್ದು ಮತ್ತು ಮಗ ಪ್ರದೀಪನನ್ನು ಪ್ರಕಾಶನಗರದ ಪುಡಿ ರೌಡಿ ಟಿಪ್ಪುವಿನೊಂದಿಗೆ ಹೊಡೆದಾಡ ಬಿಟ್ಟಿರುವುದು ಪದ್ಮಾವತಿಯ ಸಾಧನೆ.

ಇಮೇಲ್‌ನಲ್ಲೊಂದು ಇನ್‌ಲ್ಯಾಂಡು

ನಿಮ್ಮಿ ಚಿನ್ನಿ,

ಐ, ನಿನ್ ಧಿಮಾಕು ಜೋರಾತವ. ಈ ಒಂದ್ ವರ್ಷದಾಗ ಒಂದು ಲೆಟರಿಗೂ ರಿಪ್ಲೈ ಮಾಡ್ಲಿಲ್ಲ... ಈಗ ನೋಡಿದ್ರ, ನಮ್ಗೆಲ್ಲಾ ಗೊತ್ತಿಲ್ಲಂಗ ಲಗ್ನ ಆಗಾಕ ಹೊಂಟಿಯಲ್ಲ.... ಅಲಲ್ಲಾ ನಮ್ಗ ಗೊತ್ತಾಗಂಗಿಲ್ಲ ಅಂತಾ ತಿಳ್ದಿಯನು... ನೀ ಲಗ್ನಪತ್ರ ಕಳಿಸ್ಲಿಕ್ಕಂದ್ರ ಏನಾತು? ಗಂಡಿನ ಕಡೆಯಿಂದ ನಮ್ಮ ಮನಿಗೆ ಲಗ್ನಪತ್ರ ಬಂದೈತಿ ಬಿಡು... ನಿನ್ನ ಲಗ್ನ ಆಗಾವ ಇಲ್ಲೇ ನಮ್ಮ ಸಪ್ತಾಪುರ ಏರಿಯಾದವ...



ನೀ ನಮ್ಗ ಮರೆತಿರಬಹುದು... ಆದ್ರೂ ನಮ್ ನಿಮ್ಮಿ ಚಿನ್ನಿ ಅಂತಾ ಒಂದು ಮಾತು ಹೇಳ್ತಿನಿ... ನೀ ಈ ಲಗ್ನ ಆಗಬಾರ್ದು ನೋಡು!!!

ಹೌದು, ಇದು ನಿನ್ನ ಒಳ್ಳೇದಕ ಹೇಳಾಕಹತ್ತೆನಿ... ನಿನ್ ಲಗ್ನ ಆಗಾಂವ ಏನ್ ಭಾರಿ ಡಾಕ್ಟ್ರು ಅಂತಾ ತಿಳಿದಿಯನು? ಅಂವಾ ರೊಕ್ಕ ಕೊಟ್ಟು ಡಿಗ್ರಿ ಪಡದಾನ... ಗುಳಿಗೆ ಕೊಡಾಕು ಬರಂಗಿಲ್ಲಂತ... ನೆಟ್ಟಗ ಇಂಜಕ್ಷನ್ ಚುಚ್ಚಾಕೂ ಬರಂಗಿಲ್ಲಂತ... ಎರಡ್ಮೂರು ಹೆರಿಗೆ ಕೇಸು ಖಲಾಸ್ ಆಗ್ಯಾವಂತ ಅವ್ನ ದವಾಖಾನಿಯೊಳ್ಗ.... ಮತ್ ಬಾಳಾ ಉಡಾಳ ಆದಾನಂವ... ನೀ ಬಂಗಾರದಂತಹ ಹುಡುಗಿ... ಅವ್ನ ಕೈಯ್ಯಾಗ ಸಿಕ್ಕು ಸಾಯ್ಬೇಡವಾ...

ಮತ್ತ ಹಿಂದೊಮ್ಮೆ ಒಂದ್ ಹುಡುಗಿಗೆ ಲವ್ ಮಾಡಿ, ಕೈಕೊಟ್ಟು ರಂಪ ಮಾಡಿಕೊಂಡಿದ್ನಂತ...

ಒಟ್ಟು ನೀ ಈ ಲಗ್ನಾ ಕ್ಯಾನ್ಸಲ್ ಮಾಡಿ ಬಿಡು ನಿಮ್ಮಿ...

ಇನ್ನೊಂದು ಇಂಪಾರ್ಟೆಂಟು ಹೇಳೋದ್ ಐತಿ... ಅಂವಾ ಸಿಗರೇಟು ಸೇದ್ತಾನಂತ! ಮತ್ತ ಫುಲ್ ಕುಡಿತಾನಂತ!!

ಇದೆಲ್ಲ ಇರ್ಲಿ ಬಿಡು; ಆ ಅಮರ್, ಲಿಂಬಿಮನಿ ಎತ್ತಾಗ ಹೋದ್ರು? ಲಂಕೇಶ್ ಸರ್ ಅಗಲಿದ ಮ್ಯಾಲ ನೀ ನಮ್ ಪೇಪರ್ ಕಡೆ ಬರ್ತಾನೇ ಇಲ್ಲಲಾ... ಇಂದ್ರಮ್ಮಾರೇನಾರ ಬೈದಾರನು? ಇಲ್ಲಾ ನೀ ಗೌರಿಯವ್ರಿಗೆ ಹೆದರ್ತಿಯನು? ಏನೇನೂ ಹೆದರಬ್ಯಾಡ... ನಾನು ನಿನ್ ಜೊತೆಗೆ ಅದಿನಿ... ನನ್ನೂ ಉಗುರು ಬಾಳ ಉದ್ದದಾವು!

– ಇತಿ


ಮುನ್ನಿ (Zero Hour)

ಧಾರವಾಡ.

ಒಂದು (ಪ್ರೊ)ಫೈಲು!

ಸದಾ ವತ್ಸಲೇ ಮಾತೃ'ಭೂಮೆ'

ತದೇಕ ಚಿತ್ತದಿಂದ ನಕ್ಷೆಗಳನ್ನೇ ಗಮನಿಸುತ್ತಿದ್ದ... ಆತ ಪುಟ್ಟ ಬಾಲಕ ಸುಬ್ರಹ್ಮಣ್ಯ.... ಪಕ್ಕದ ಮನೆಯ ಸರ್ವೆ ಆಫೀಸರ್ ಮನೆಗೆ ನಿತ್ಯ ಹೋಗುವುದನ್ನು ಅಭ್ಯಾಸ ಮಾಡಿಕೊಂಡ ಸುಬ್ರಹ್ಮಣ್ಯ ನಕ್ಷೆಗಳ ಮೇಲೆ ಆಗಿಂದಲೇ ಪ್ರೀತಿ ಶುರುವಿಟ್ಟ! ಹುಡುಗನ ಆಸಕ್ತಿ ಗಮನಿಸಿದ ಸರ್ವೆ ಆಫೀಸರು ಅಂದಿನ ಬೆಂಗಳೂರಿನ ಖಾಲಿಸೈಟುಗಳ ನಕ್ಷೆಗಳನ್ನೆಲ್ಲಾ ತೋರಿಸಿ ವಿವರಿಸಿದರು.



ಒಮ್ಮೊಮ್ಮೆ ಮಧ್ಯರಾತ್ರಿ ಎದ್ದು "ಮಾತೃಭೂಮಿಯೇ..." ಎಂದು ಕಿರುಚುತ್ತಿದ್ದ ಸುಬ್ರಮಣ್ಯ!

ಸ್ಕೂಲಲ್ಲಿ ಎಲ್ಲರೂ L for Lion ಎಂದು ಬರೆದರೆ ಸುಬ್ಬು ಮಾತ್ರ L for Land ಎಂದೇ ಬರೆಯುತ್ತಿದ್ದ... ಆಗಲೇ ಸುಬ್ಬು ದೃಢ ನಿರ್ಧಾರ ಮಾಡಿದ್ದ; "ಈ ಭೂಮಿ ನಮ್ಮದು... ಈ ಭೂಮಿ ನಮ್ಮದು...."

ಪಿ.ಕೆ. ಮಲ್ಲನಗೌಡರ್

ಬಿಟ್ bit ಹಿಟ್!

ಅಂದಿನ ಆ ಬಾಲಕನೇ ಇಂದಿನ ಸಚಿವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು! ಬಾಲ್ಯದಲ್ಲೇ ಚಿಗುರೊಡೆದ ಭೂಮಿ ಪ್ರೀತಿ ಇಂದು ಅರಳುತ್ತಿದೆ. ಬೆಂಗಳೂರಿನ ಎಲ್ಲ ಏರಿಯಾಗಳಿಗೆ ಶ್ರೀಯುತ ಕಟ್ಟಾರವರು ಲಗ್ಗೆ ಇಡುತ್ತಲೆ ಸಾಗಿದ್ದಾರೆ! 'ಈ ಭೂಮಿ ನನ್ನದು' ಎನ್ನುವುದಿಲ್ಲ ಅವರು. ವಿಶಾಲ ಮನೋಭಾವದ ಅವರು 'ಈ ಭೂಮಿ ನಮ್ಮದು' ಎನ್ನುತ್ತಾರೆ! ಅದಕ್ಕೇ ಕೇವಲ ತಮ್ಮ ಹೆಸರಲ್ಲಷ್ಟೇ ಭೂಮಿ ಖರೀದಿಸದೇ ಸಂಬಂಧಿಕರು, ಹಿಂಬಾಲಕರುಗಳ ಹೆಸರಲ್ಲೆಲ್ಲ ಖರೀದಿಗಿಳಿದುಬಿಡುತ್ತಾರೆ. ಕೆ.ಐ.ಎ.ಡಿ.ಬಿ. ಅವರ ಕೈಗೆ ಬಂದಾದ ಮೇಲೆ ಸುಬ್ರಹ್ಮಣ್ಯರವರ 'ಭೂಮಿಗೀತ' ಫುಲ್ ಸ್ವಿಂಗ್‌ನಲ್ಲಿದೆ!

ಏನು ಮರೆತರೂ 'ಟೋಪಿ' ಹಾಕುವುದನ್ನು ಕಟ್ಟಾರವರು ಮರೆಯುವುದಿಲ್ಲ.

ಮೊನ್ನೆ 'ಅಕ್ಕ' ಸಮಾವೇಶದಲ್ಲಿ ಉಳಿದೆಲ್ಲ ರಾಜಕಾರಣಿಗಳು ಮಜಾ ಮಾಡುತ್ತಿದ್ದರೆ, ಹೊರಗಡೆ ಕಟ್ಟಾ ತೀವ್ರ 'ಅಧ್ಯಯನ'ದಲ್ಲಿ ತೊಡಗಿದ್ದರು. ಆ 'ಅಧ್ಯಯನ'ದ ಫಲವೇ ಅಮೆರಿಕದಲ್ಲೂ 'ಟೋಪಿ' ವರ್ಕ್ ಮಾಡಿತ್ತು! 'ಅಕ್ಕ' ಸಮಾವೇಶ ನಡೆದ ಹೋಟೆಲ್ಲಿನ ಪಕ್ಕದ ಖಾಲಿ ಸೈಟು ಈಗ ಸುಬ್ರಮಣ್ಯರ ಹೆಸರಲ್ಲಿ!!

ಆವತ್ತು ನಕ್ಷೆ ತೋರಿಸಿದ ಸರ್ವೆ ಆಫೀಸರ್ ರಿಟೈರಾಗಿ 'ಯಾಕಾದ್ರು ಆ ಸುಬ್ಬುಗೆ ಎಲ್ಲ ಹೇಳಿಕೊಟ್ಟೇನೋ' ಎಂದು ಹೊಟ್ಟೆಕಿಚ್ಚು ಪಡುವಂತಾಗಿಬಿಟ್ಟಿದೆ!

'ಸದಾ ವತ್ಸಲೆ ಮಾತೃ ಭೂಮೆ... ಸುಬ್ರಮಣ್ಯರ ಮೆಚ್ಚಿನ ಹಾಡು... 'ಭೂಮಿ ತಾಯಿಯ ಚೊ(ಬ)ಚ್ಚಲು ಮಗ ಇಷ್ಟದ ಚಿತ್ರ... 'ಭೂಮಿ'ಗೀತವೂ ಇಷ್ಟವೇ

ಸ್ವಚ್ಛತೆಗೆ ಆದ್ಯತೆ ನೀಡುವ ಕಟ್ಟಾ ಸಾಹೇಬರು ರೇಷ್ಮೆ ಸಚಿವರಾದ ದಿನವೆ ರೇಷ್ಮೆ ಇಲಾಖೆಯಲ್ಲಿನ ಅಧಿಕಾರಿಗಳಿಗೆ 'ರೇಷ ಹುಳುಗಳನ್ನೆಲ್ಲ ಹೊರಹಾಕಿ ಅವುಗಳಿಂದ ಆರೋಗ್ಯ ಕೆಡುತ್ತೆ' ಎಂದು ಆದೇಶಿಸಿ 'ದಕ್ಷತ ಮೆರೆದರು. ಇದಕ್ಕೆ ಆರೋಗ್ಯ ಸಚಿವ ಪರಮಾಪ್ತ ಭೂಮಿತ್ರ ಆರ್.ಅಶೋಕ್ ಸಲಹೆಯನ್ನೂ ಪಡೆದರಂತೆ! ಆದು ಮುಟ್ಟಿದ ಸೊಪ್ಪಿಲ್ಲ, ಕಟ್ಟಾ ಮುಟ್ಟದ ಸೈಟಿಲ್ಲ!

ಒಂದು 'ಗಾದಿ' ಮಾತು

ಕಂಪ್ಯೂಟರ್ ವೈರಸ್‌ಗೆ ಮಾತಿನ ಪೆಟ್ಟು
ಕಮ್ಯುನಲ್ ವೈರಸ್‌ಗೆ ಲತ್ತಿಪೆಟ್ಟು

ಒಂದು CD ಗವನ

ತೇಕುತಿವೆ, ತೇಕುತಿವೆ
ಮೈಸೂರು ಹುಲಿ ಎದುರು
ಪ್ರಾಕ್ಸಿ ವಾರ್‌ಗೆ ಯತ್ನಿಸಿದ
ಮಂಗ ಚಿಡ್ಡಿಗಳು
ತೇಕುತಿವೆ, ತೇಕುತಿವೆ
ಉಸಿರು ಬಿಡುತಿವೆ
ಸಂಸ್ಕೃತ ಸೇವನೆಗೆ ಉಚ್ಛ್ವಾಸ
ಕನ್ನಡ ವಿಸರ್ಜನೆಗೆ ನಿಶ್ವಾಸ
ಅದು ಕ್ಯಾನ್ಸರ್‌ಪೀಡಿತ ಶ್ವಾಸಕೋಶ!

ಬೆಳಗಾವಿ ಅಧಿವೇಶನವೆಂಬ ಬಡಾ ತಮಾಷ

"ಅವಸರದಲ್ಲಿ ಮದುವೆಗೆ ಹೊರಟಿದ್ದ ಮದುಮಗನ ಕಥೆಯು ದಿಬ್ಬಣದವರು ಮಾಂಗಲ್ಯ ಸರವನ್ನೇ ಮರೆತು ಹೋಗಿದ್ದರಂತೆ" ಹಾಗಾಗಿದೆ ನಮ್ಮ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯ ಕಥೆ. ಇಪ್ಪತ್ತೈವತ್ತು ಕೋಟಿ ರೂಪಾಯಿ ಗಣಿ ಲಂಚದ ಸಿಡಿ ಹೊರಬಿದ್ದಾಗಿನಿಂದ ತಮ್ಮ ಇಮೇಜನ್ನು ಪ್ರಖರಗೊಳಿಸಿಕೊಳ್ಳಲು ನಾನಾ ವಿಧವಾದ ವ್ಯಾಯಾಮಗಳಲ್ಲಿ ತೊಡಗಿರುವ ಕುಮಾರಸ್ವಾಮಿ ಸಮ್ಮಿಶ್ರ ಸರ್ಕಾರದ ಇತ್ತೀಚಿನ ಭಾರೀ ಮೇಲಾಟವೆಂದರೆ ಬೆಳಗಾವಿಯ ವಿಧಾನಮಂಡಲ ಅಧಿವೇಶನ. ಈ ವರದಿ ನಿಮ್ಮ ಕೈ ಸೇರುವ ಸಮಯಕ್ಕೆ ಅಧಿವೇಶನವೆಂಬ ಮೇಲಾಟ ಆರಂಭವಾಗಿರುತ್ತದೆ.

ಸದರಿ ಅಧಿವೇಶನವನ್ನು "ದಿಬ್ಬಣದವರು ಮಾಂಗಲ್ಯ ಮರೆತ" ಕಥೆಗೆ ಹೋಲಿಸುವುದಕ್ಕೆ ಸಕಾರಣವಿದೆ. ಅಧಿವೇಶನ ನಡೆಸುತ್ತಿರುವುದಕ್ಕೆ ಕುಮಾರಸ್ವಾಮಿ ಸರ್ಕಾರ ಹಲವಾರು ಕಾರಣಗಳನ್ನು ನೀಡುತ್ತಿದೆ. ಗಡಿನಾಡ ಕನ್ನಡಿಗರ ಆತ್ಮಸ್ಥೈರ್ಯ ಹೆಚ್ಚಿಸುವುದು, ಗಡಿ ಸಮಸ್ಯೆಗಳ ನಿವಾರಣೆ, ಮಹಾಜನ್ ವರದಿಯ ಅನುಷ್ಠಾನ... ಹೀಗೆ ಪಟ್ಟಿ ಬೆಳೆಯುತ್ತದೆ. ಆದರೆ ಮೂಲ ಕಾರಣ ಹುಡುಕಿದರೆ ಈ ಅಧಿವೇಶನ, ಕುಂದಿರುವ ಸರ್ಕಾರದ ವರ್ಚಸ್ಸಿನ ವೃದ್ಧಿ, ಪ್ರಚಾರ ಮತ್ತು ನಿಜಕ್ಕೂ ಎದುರಿನಲ್ಲಿರುವ ನೈಜ ಸಮಸ್ಯೆಗಳಿಂದ ಜನರನ್ನು ವಿಮುಖರನ್ನಾಗಿಸುವ ಉದ್ದೇಶವಿರುವುದು ಸ್ಪಷ್ಟವಾಗುತ್ತದೆ.



ಜಿಲ್ಲಾಧಿಕಾರಿ ಶಾಲಿನಿ ರಜನೀಶ್

ರಾಜಧಾನಿಯನ್ನು ಹೊರತುಪಡಿಸಿ ಬೇರೆಡೆ ವಿಧಾನಮಂಡಲ ಅಧಿವೇಶನ ನಡೆಸುವುದು ಅಪರಾಧವಲ್ಲ. ಆದರೆ ಅದಕ್ಕೆ ಅದರದೇ ಆದ ನಿಯಮ ಮತ್ತು ನೀತಿಗಳಿವೆ. ಅದನ್ನು ಗಾಳಿಗೆ ತೂರಿದ ಕುಮಾರಸ್ವಾಮಿ ಸರ್ಕಾರ ಮಾಂಗಲ್ಯವನ್ನೇ ಮರೆತು ಮದುವೆಗೆ ಬಂದ ಗಂಡಿನಂತಾಗಿದೆ. ರಾಜಧಾನಿಯ ಹೊರಗೆ ಅಧಿವೇಶನ ನಡೆಸುವ ಮುನ್ನ ಅದರ ಸಾಧಕ-ಬಾಧಕಗಳ ಬಗ್ಗೆ ತಿಳಿಯಲು ಒಂದು ಸಮಿತಿ ರಚಿಸಬೇಕಾಗುತ್ತದೆ. ಈ ಹಿಂದಿನ ಧರ್ಮಸಿಂಗ್ ಸರ್ಕಾರ ಕಾನೂನು ಇಲಾಖೆ ಕಾರ್ಯದರ್ಶಿ ಬೋರೇಗೌಡ ನೇತೃತ್ವದಲ್ಲಿ ಅಂತಹದ್ದೊಂದು ಸಮಿತಿ ರಚಿಸಿತ್ತು. ಆ ಸಮಿತಿ ಇನ್ನೂ ಅಸ್ತಿತ್ವದಲ್ಲಿದ್ದು, ಇನ್ನೂ ಅವಧಿ ಪೂರೈಸಿಲ್ಲ. ಸಮಿತಿ ವರದಿ ನೀಡುವ ಮುನ್ನವೇ ಮುಖ್ಯಮಂತ್ರಿ ಕುಮಾರಸ್ವಾಮಿ ಬೆಳಗಾವಿಯಲ್ಲಿ ಅಧಿವೇಶನ ನಡೆಸುವ ಆತುರದ ನಿರ್ಧಾರ ಕೈಗೊಂಡರು.

ಅಧಿವೇಶನದ ಸ್ಥಳ ಮತ್ತು ದಿನಾಂಕ ನಿಗದಿ ಆದ ನಂತರ ನಿಯಮದಂತೆ ಸದನ ಕಲಾಪ ಸಲಹಾ ಸಮಿತಿ ಸಭೆ ನಡೆಸಿ ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಖಚಿತ ಪಡಿಸಬೇಕು. ಆದರೆ ಅಂತಹ ಸಭೆಯೇ ಈವರೆಗೆ ನಡೆದಿಲ್ಲ. ನಂತರ ಅಧಿವೇಶನ ನಡೆಯಲಿರುವ ಸಭಾಭವನದ ಬಗ್ಗೆ ಅಧಿಸೂಚನೆ ಹೊರಡಿಸಬೇಕು. ಈ ನಿಯಮ ಕೂಡ ಪಾಲಿಸಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕಾಲೇಜು, ಖಾಸಗಿ ಸಭಾಂಗಣ ಮತ್ತು ಕಲ್ಯಾಣ ಮಂಟಪಗಳಲ್ಲಿ ಅಧಿವೇಶನ ನಡೆಯುವಂತಿಲ್ಲ. ರಾಜಧಾನಿಯ ಹೊರಗೆ ಅಧಿವೇಶನ ನಡೆಯುವ ಸಂದರ್ಭದಲ್ಲಿ ನಿಯಮ 2 ರ ಪ್ರಕಾರ ತಾತ್ಕಾಲಿಕ ಸಚಿವಾಲಯ ಸ್ಥಾಪಿಸಿ ಅದಕ್ಕೆ ಕಾರ್ಯದರ್ಶಿಯೊಬ್ಬರನ್ನು ನೇಮಿಸಬೇಕು.

ಈ ಕಾರ್ಯ ಆಗಿಲ್ಲ. ಅಧಿವೇಶನದ ಕಾರ್ಯಕಲಾಪದ ಬಗ್ಗೆ ಶಾಸಕರಿಗೆ ವಿಧಾನಮಂಡಲದ ಕಾರ್ಯದರ್ಶಿ ಪತ್ರ ಬರೆಯಬೇಕು. ಆದರೆ ಬೆಳಗಾವಿ ಅಧಿವೇಶನದ ಬಗ್ಗೆ ಜಿಲ್ಲಾಧಿಕಾರಿ ಡಾ. ಶಾಲಿನಿ ರಜನೀಶ್ ಪತ್ರ ಬರೆದಿದ್ದಾರೆ. ಈ ಬಗ್ಗೆ ಶಾಸಕ ಬಸವರಾಜ ರಾಯರೆಡ್ಡಿ ಹಕ್ಕುಚ್ಯುತಿ ಮಂಡಿಸುವುದಾಗಿ ಬೆದರಿಕೆ ಒಡ್ಡಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಕುಮಾರಸ್ವಾಮಿ ರಾಜ್ಯಪಾಲರನ್ನು ಆಹ್ವಾನಿಸಿದ ರೀತಿ ತೀವ್ರ ಗೊಂದಲಕ್ಕೆ ಕಾರಣವಾಗಿದೆ. ಅಧಿವೇಶನಕ್ಕೆ ರಾಜ್ಯಪಾಲರನ್ನು ಆಹ್ವಾನಿಸುವ ಮುನ್ನ ಸಂವಿಧಾನದ 175 ನೇ ವಿಧಿಯ ಪ್ರಕಾರ ರಾಜ್ಯ ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಂಡು ಆ ನಿರ್ಣಯವನ್ನು ರಾಜ್ಯಪಾಲರಿಗೆ ಕಳುಹಿಸಬೇಕು. ಆದರೆ ಯಾವ ನಿಯಮದ ಅನ್ವಯ ರಾಜ್ಯಪಾಲರನ್ನು ಆಹ್ವಾನಿಸಬೇಕು ಎಂಬ ಗೊಂದಲಕ್ಕೆ ಬಿದ್ದ ಸರ್ಕಾರ, ರಾಜ್ಯಪಾಲರಿಂದ ನಕಾರಾತ್ಮಕ ಪ್ರತಿಕ್ರಿಯೆ ಪಡೆದು ಮುಖಭಂಗಕ್ಕೆ ಒಳಗಾಯ್ತು. ಕಡೆಗೂ ರಾಜ್ಯಪಾಲರು ಅಧಿವೇಶನದ ನಾಲ್ಕನೇ ದಿನ ಅಂದರೆ ಸೆಪ್ಟೆಂಬರ್ 28 ರಂದು ಅನೌಪಚಾರಿಕವಾಗಿ ಭಾಗವಹಿಸಲು ಒಪ್ಪಿದರು. ಇದೆಲ್ಲಾ ಸರ್ಕಾರದ ತಾಂತ್ರಿಕ ವೈಫಲ್ಯದ ಒಂದು ಮುಖವಾಯ್ತು.



ಬೆಳಗಾವಿಯಲ್ಲಿ ನಡೆಯುತ್ತಿರುವ ಈ ಶಾಸಕರ ಸಭೆಯನ್ನು ಅಧಿವೇಶನ ಎನ್ನಬೇಕೋ ಅಥವಾ ಸರ್ವಪಕ್ಷ ಸಭೆ ಎನ್ನಬೇಕೊ? ಎಂದು ಕಡೇ ಗಳಿಗೆಯ ವರೆಗೂ ಜಿಜ್ಞಾಸೆಯಲ್ಲಿರುವ ಸರ್ಕಾರ ಮತ್ತು ಪಕ್ಷಗಳು ಈ ಸಂದರ್ಭದಲ್ಲಿ ಇಲ್ಲಿ ಇನ್ನೂ ಹಲವು ಅನೌಪಚಾರಿಕ

ಎಂ.ಎಸ್. ಸತೀಶ್ ಮತ್ತು ಉಮಾಪತಿ ಪಾಟೀಲ್

ಕಾರ್ಯಕ್ರಗಳನ್ನು ರೂಪಿಸಿವೆ. ಇದರಲ್ಲಿ ಒಂದು, ಉತ್ತರ ಕರ್ನಾಟಕ, ಅದರಲ್ಲೂ ಬೆಳಗಾವಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ 20 ಬೇಡಿಕೆಗಳ ಮನವಿ ಪತ್ರವನ್ನು ಮುಖ್ಯಮಂತ್ರಿ ಕುಮಾರಸ್ವಾಮಿಗಳಿಗೆ ಸಮರ್ಪಿಸುವುದು. ಇಂತಹ ಅನಧಿಕೃತ ಅಜೆಂಡಾಗಳು ಕಡೇ ಗಳಿಗೆಯಲ್ಲಿ ರದ್ದಾಗುವ ಸಂಭವವೇ ಹೆಚ್ಚು.


ಇನ್ನು ಅಧಿವೇಶನದ ಹೆಸರಿನಲ್ಲಿ ನಡೆಯುತ್ತಿರುವ ದುಂದುವೆಚ್ಚ ಮತ್ತು ಆಡಂಬರಗಳನ್ನು ನೋಡಿದರೆ ಇದೊಂದು ಅರ್ಥಹೀನ, ದೀರ್ಘ ಪ್ರಲಾಪ ಎಂಬುದರಲ್ಲಿ ಎರಡು ಮಾತಿಲ್ಲ. ಈ ಅಧಿವೇಶನ ಈ ರಾಜ್ಯದ ತೆರಿಗೆದಾರರ ಮೇಲೆ ಅನಗತ್ಯ ಹೊರೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇದು ಕುಮಾರಸ್ವಾಮಿ ಸರ್ಕಾರದ 'ಬಡಾ ತಮಾಷಾ'. ಒಟ್ಟು 224 ಶಾಸಕರು ಮತ್ತು 75 ವಿಧಾನ ಪರಿಷತ್ ಸದಸ್ಯರನ್ನು ಹೊಂದಿರುವ ರಾಜ್ಯದ ವಿಧಾನ ಮಂಡಲದ ನಾಲ್ಕು ದಿನದ ಅಧಿವೇಶನಕ್ಕೆ ಒಟ್ಟು ನಾಲ್ಕು ಕೋಟಿ ವೆಚ್ಚವಾಗಲಿದೆಯಂತೆ. ಆದರೆ ಈ ಅಂಕಿ ಒಂದೊಂದು ದಿನಕ್ಕೆ ಒಂದೊಂದು ರೀತಿ ಪ್ರಕಟವಾಗುತ್ತಿದೆ. ಆದರೆ ಬೆಳಗಾವಿಯಲ್ಲಿ ಏರ್ಪಾಡಾಗಿರುವ ವ್ಯವಸ್ಥೆಗಳನ್ನು ಗಮನಿಸಿದರೆ ಈ ನಾಲ್ಕು ಕೋಟಿ ರೂಪಾಯಿ ನಾಲ್ಕು ದಿನಕ್ಕೋ ಅಥವಾ ಒಂದು ದಿನಕ್ಕೋ ಎಂಬ ಅನುಮಾನ ಮೂಡುತ್ತದೆ.

ಬೆಂಗಳೂರಿನಿಂದ ಬೆಳಗಾವಿಗೆ ಹೋಗಿ ಬರಲು ರೈಲು ಮತ್ತು ವಿಮಾನ ಯಾವುದನ್ನು ಬೇಕಾದರೂ ಶಾಸಕರು ಆಯ್ಕೆ ಮಾಡಿಕೊಳ್ಳಬಹುದಂತೆ. ಯಾರು ತಾನೇ 12 ಗಂಟೆಗಳ ಕಾಲ ರೈಲಿನಲ್ಲಿ ಹೋಗುತ್ತಾರೆ ಸ್ವಾಮಿ? ಶಾಸಕರ ವಸತಿಗೆ ಜವಹರ್‌ಲಾಲ್ ಮೆಡಿಕಲ್ ಕಾಲೇಜ್ ವಿದ್ಯಾರ್ಥಿನಿಯರ ವಸತಿ ನಿಲಿಯದ 280 ಕೊಠಡಿಗಳಿಂದ ಹಿಡಿದು, ಸಂಗಮ್, ಆದರ್ಶ ಪ್ಯಾಲೇಸ್, ರಾಮ್‌ದೇವ್, ಮಿಲನ್, ಹೋಟೆಲುಗಳೂ ಸೇರಿದಂತೆ ಒಟ್ಟು 600 ರೂಂಗಳ ವ್ಯವಸ್ಥೆ, ಪ್ರತಿನಿತ್ಯ ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟ, ಪ್ರತಿ ರೂಮಿಗೊಬ್ಬ ರೂಂಬಾಯ್, ಪ್ರತಿ ಸಂಜೆ ಮನರಂಜನೆ ಕಾರ್ಯಕ್ರಮ, ಶಾಸಕರು ಶಾಪಿಂಗ್ ನಡೆಸಲು ವಿಶೇಷ ವಾಣಿಜ್ಯ ಮಳಿಗೆ.... ಇದಕ್ಕೆಲ್ಲಾ ಮಕುಟವಿಟ್ಟಂತೆ ಅಧಿವೇಶನ ಮುಗಿದ ನಂತರ ಶಾಸಕರಿಗೆ ಕಿತ್ತೂರು ಚೆನ್ನಮ್ಮ, ಸವದತ್ತಿ ಎಲ್ಲಮ್ಮ ಮತ್ತು ಗೋವಾಗೆ ರಿಲ್ಯಾಕ್ಸ್ ಟ್ರಿಪ್ಪಂತೆ. ಇದರ ಸಂಪೂರ್ಣ ಜವಾಬ್ದಾರಿ ಜಿಲ್ಲಾಧಿಕಾರಿ ಡಾ. ಶಾಲಿನಿ ರಜನೀಶ್‌ರವರದು.

ಹೀಗೆ ಅಧಿವೇಶನಕ್ಕೆ ಬರುವ ಶಾಸಕರು, ಎಲ್ಲಕ್ಕಿಂತ ಹೆಚ್ಚಾಗಿ ಸಚಿವರು ಒಬ್ಬರೇ ಬರುತ್ತಾರ? ಅವರ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿಗಳು, ಜವಾನರು, ರಕ್ಷಣಾ ಸಿಬ್ಬಂದಿ ಹೀಗೆ ಅವರವರ ಅಂತಸ್ತಿಗೆ ತಕ್ಕಂತೆ ವ್ಯವಸ್ಥೆ ಆಗಲೇ ಬೇಕು.

ಇದರಿಂದ ಆಗುವ ಅವ್ಯವಸ್ಥೆಗಳನ್ನು ಗಮನಿಸಿ. ಶಾಸಕರಿಗಾಗಿ ತಂಗಲು ವ್ಯವಸ್ಥೆ ಮಾಡಿರುವ ಕೆಎಲ್‌ಇ ಸಂಸ್ಥೆಯ ಜವಹರ್‌ಲಾಲ್ ನೆಹರೂ ಮೆಡಿಕಲ್ ಕಾಲೇಜು (ಜೆಎನ್‌ಎಂಸಿ) ವಿದ್ಯಾರ್ಥಿನಿಯರ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಹತ್ತು ದಿವಸ ರಜೆ ನೀಡಿ ಅವರನ್ನು ತಾತ್ಕಾಲಿಕವಾಗಿ ಲಿಂಗರಾಜ ಕಾಲೇಜಿನ ವಸತಿ ನಿಲಯಕ್ಕೆ ವರ್ಗಾಯಿಸಲಾಗಿದೆ. ಇದನ್ನು ವಿರೋಧಿಸಿ ವಿದ್ಯಾರ್ಥಿನಿಯರು ಪ್ರತಿಭಟಿಸಿದ್ದಾರೆ. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಕಚೇರಿಯಲ್ಲಿರುವ ಕಡತಗಳನ್ನೆಲ್ಲಾ ಸ್ಥಳಾಂತರಗೊಳಿಸಿ ಆ ಕೊಠಡಿಗಳನ್ನು ಸಭಾಪತಿ ಮತ್ತು ಮುಖ್ಯ ಸಚೇತಕರ ಕಚೇರಿಯನ್ನಾಗಿ ಪರಿವರ್ತಿಸಲಾಗಿದೆ. ಮೆಡಿಕಲ್ ಎಜುಕೇಷನ್ ವಿಭಾಗದಲ್ಲಿ ಮುಖ್ಯಮಂತ್ರಿಗಳ ಕಚೇರಿ, ರಿಸರ್ಚ್ ಸೆಂಟರ್‌ನಲ್ಲಿ ಉಪಮುಖ್ಯಮಂತ್ರಿ. ಕೇವಲ ನಾಲ್ಕು ದಿನದ ಈ ಅಧಿವೇಶನವೆಂಬ ಪ್ರದರ್ಶನಕ್ಕೆ ಅಲ್ಲಿದ್ದ ಮುಖ್ಯ ಫೈಲ್‌ಗಳನ್ನು ಸ್ಥಳಾಂತರಿಸಿ, ಅಲ್ಲಿಗೆ ಸರ್ಕಾರದ ಬಹುಮುಖ್ಯ ಫೈಲುಗಳನ್ನು ತುಂಬಿಸಿ, ಕೊನೆಗೆ ಆ ಫೈಲೂ ಇಲ್ಲ ಈ ಫೈಲೂ ಇಲ್ಲ ಎಂಬಂತಹ ಪರಿಸ್ಥಿತಿ ಉಂಟಾಗುವ ಸಂಭವವೇ ಹೆಚ್ಚು, ಏಕೆಂದರೆ ಅಲ್ಲಿ ನಡೆಯುತ್ತಿರುವ ತರಾತುರಿಯ ವ್ಯವಸ್ಥೆಯೇ ಹಾಗಿದೆ.

ಈ ಮಧ್ಯೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಬೆಳಗಾವಿ ಅಧಿವೇಶನವನ್ನು ಬಹಿಷ್ಕರಿಸಿ ಅದಕ್ಕೆ ಪರ್ಯಾಯವಾಗಿ ಮರಾಠಿಗರ ಮಹಾಮೇಳ ನಡೆಸುವುದಾಗಿ ಬಡಾಯಿ ಕೊಚ್ಚುತ್ತಿದ್ದಾರೆ. ಮುಖ್ಯಮಂತ್ರಿ ಕುಮಾರಸ್ವಾಮಿ ಅನಗತ್ಯ ಅಧಿವೇಶನ ನಡೆಸುವುದರ ಬದಲು ಪ್ರತಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಹಾಜನ್ ವರದಿಯ ಶೀಘ್ರ ಅನುಷ್ಠಾನಕ್ಕೆ ಪಟ್ಟು ಹಿಡಿದಿದ್ದರೆ ಇಂತಹ ಬಾಂಟೆ ಸರ್ಕಸ್ಸಿನ ಅಗತ್ಯವೇ ಇರಲಿಲ್ಲ. ಉತ್ತರ ಕರ್ನಾಟಕದ ಸಮಸ್ಯೆಗಳ ಪರಿಹಾರ, ಗಡಿಸಮಸ್ಯೆ ಇತ್ಯರ್ಥದ ಬಗ್ಗೆ ನಿಜಕ್ಕೂ ಕಾಳಜಿ ಇದ್ದರೆ ಅದಕ್ಕೆ ಬೇರೆ ಮಾರ್ಗವೇ ಇದೆ (ಬಾಕ್ಸ್ ನೋಡಿ) ಆ ದಿಕ್ಕಿನಲ್ಲಿ ಒಂದು ಹೆಜ್ಜೆಯೂ ಇಡದ ಕುಮಾರಸ್ವಾಮಿ ಏಕಾಏಕಿ ಬೆಟ್ಟದ ತುದಿಗೆ ಹಾರಲು ಹೊರಟಿದ್ದಾರೆ. ಬಿದ್ದು ಕಾಲು ಮುರಿದುಕೊಳ್ಳದಿದ್ದರೆ ಅದೃಷ್ಟ.




ಅಧಿವೇಶನಕ್ಕೆ ಸಿದ್ಧವಾಗಿರುವ ಸಭಾಂಗಣ

ರೈಲು ತಪ್ಪಿಸಿದ ಅಪ್ಪ! ಹತ್ತಿಸಲು ಬಂದ ಮಗ!

"ಉತ್ತರ ಕರ್ನಾಟಕದ ಜನತೆಯ ಕನಸಾಗಿದ್ದ ನೈರುತ್ಯ ರೈಲ್ವೆ ವಲಯ ಹುಬ್ಬಳ್ಳಿಗೆ ಮಂಜೂರಾದಾಗ ಅದನ್ನು ತಪ್ಪಿಸಿ ಬೆಂಗಳೂರಿಗೆ ಹಾಕಿಸಿಕೊಂಡ ಅಂದಿನ ಪ್ರಧಾನಿ ಎಚ್.ಡಿ. ದೇವೇಗೌಡರ ಪುತ್ರ, ಇಂದಿನ ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಬೆಳಗಾವಿಯಲ್ಲಿ ವಿಧಾನಮಂಡಲ ಅಧಿವೇಶನ ನಡೆಸಿ ಗಡಿ ಸಮಸ್ಯೆ ಬಗೆಹರಿಸುತ್ತೇನೆಂದು ಹೇಳಿದರೆ ನಂಬಲು ನಾವು ಹುಂಬರಲ್ಲ," ಇದು ಉತ್ತರ ಕರ್ನಾಟಕದ ಭಾಗದ ಕನ್ನಡಿಗರು ಬೆಳಗಾವಿಯ ಅಧಿವೇಶನದ ಬಗ್ಗೆ ನೀಡುವ ಖಾರವಾದ ಪ್ರತಿಕ್ರಿಯೆ.


ಹಿಂದೆ ದಿವಂಗತ ಡಿ. ದೇವರಾಜ ಅರಸರು ಬೆಳಗಾವಿಯಲ್ಲಿ ರಾಜ್ಯದ ಸಂಸದರ ಸಭೆ ನಡೆಸಿದ್ದರು, ಗುಂಡೂರಾಯರು ಮತ್ತು ಜೆ.ಎಚ್. ಪಟೇಲರು ಸಚಿವ ಸಂಪುಟದ ಸಭೆ ನಡೆಸಿದ್ದರು. ಫಲಿತಾಂಶ ಮಾತ್ರ ಸೊನ್ನೆ. ಈಗ ವಿಧಾನಮಂಡಲದ ಅಧಿವೇಶನ ನಡೆಸುವ ಸರದಿ ಕುಮಾರಸ್ವಾಮಿಯದು. ಉತ್ತರ ಕರ್ನಾಟಕದ ಬಗ್ಗೆ ಇಷ್ಟೆಲ್ಲಾ ಕಾಳಜಿ ತೋರುವ ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರ, ಜುಲೈನಲ್ಲಿ ಹೈಕೋರ್ಟ್ ಪೀಠದ ಕಾಮಗಾರಿ ಆರಂಭಿಸುತ್ತೇವೆಂದು ಘೋಷಿಸಿತು. ಈಗ ಆ ಮಾತೇ ಇಲ್ಲ.



ಆಲಮಟ್ಟಿ ನಾರಾಯಣಪುರ ಅಣೆಕಟ್ಟು ತುಂಬಿ ತುಳುಕುತ್ತಿದೆ. ಕಾಲುವೆಗಳಿಲ್ಲದ ಕಾರಣ ಉತ್ತರ ಕರ್ನಾಟಕದ ರೈತರಿಗೆ ಅಲ್ಲಿನ ನೀರು ದೊರಕುತ್ತಿಲ್ಲ. ಆ ನೀರೆಲ್ಲಾ ಆಂಧ್ರದ ರೈತರ ಪಾಲಾಗುತ್ತಿದೆ. ಈ ಬಗ್ಗೆ ಕುಮಾರಸ್ವಾಮಿ ಸರ್ಕಾರಕ್ಕೆ ಕಾಳಜಿ ಇಲ್ಲ. ನಾಲ್ಕು ತಿಂಗಳ ಹಿಂದೆ ಹುಬ್ಬಳ್ಳಿಯಲ್ಲಿ ಐಟಿ ಮೇಳ ನಡೆಯಿತು. ಅಲ್ಲಿಂದೀಚೆಗೆ ಒಂದೇ ಒಂದು ಐಟಿ ಕಂಪನಿ ಈ ಕಡೆ ಬರುವ ಮಾತಾಡಿಲ್ಲ. ಸರ್ಕಾರವೂ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿಲ್ಲ.

ಅಧಿವೇಶನದ ನೆಪದಲ್ಲಿ ಕೋಟ್ಯಂತರ ರೂಪಾಯಿ ಸುರಿಯುತ್ತಿರುವ ಸರ್ಕಾರ, ನೆರೆಯಿಂದ ಅಥಣಿ-ರಾಯಭಾಗದ ರೈತರ ಬದುಕಿಗೆ ನೆಲೆ ನಿರ್ಮಿಸಿಕೊಟ್ಟಿದ್ದರೆ ಜನ ಇವರನ್ನು ನೆನೆಯುತ್ತಿದ್ದರು. ಲಂಚದ ಸೀಡಿಯಿಂದ ಕಂಗಾಲಾಗಿರುವ ಕುಮಾರಸ್ವಾಮಿಗೆ ಈಗ ಅಧಿಕಾರ ಬಳಸಿಕೊಳ್ಳಲು ಕಳಸಾಬಂಡೂರಿ (ಭೂಮಿ ಪೂಜೆ) ನೆನಪಾಗಿದೆ. ಬೆಳಗಾವಿಯ ನಾಲ್ಕು ದಿನ ಅಧಿವೇಶನದ ಹೆಸರಿನಲ್ಲಿ ಪುಡಾರಿಗಳು; ಅಧಿಕಾರಿಗಳು ಮೋಜು ಮಾಡುತ್ತಾರೆ. ವ್ಯಾಪಾರಿಗಳಿಗೆ, ಹೋಟೆಲಿನವರಿಗೆ ಇದೊಂದು ಸುಗ್ಗಿಯ ಕಾಲ. ಅಧಿವೇಶನದ ಬಗ್ಗೆ ಉತ್ತರ ಕರ್ನಾಟಕದ ಬಹುತೇಕ ಜನರ ಅಭಿಪ್ರಾಯ ಇದು.

ಅಂಗರೆ ಶ್ರೀರಂಗ ಪಟ್ಟಣದಲ್ಲಿರೊರ್ಯೆಲ್ಲ ಪಾರಸಿಲಿ ಮಾತಾಡ್ತರೆ



ಮಹಾಲಯ ಅಮವಾಸೆಯ ದಿನ ಜುಮ್ಮಿ ಮನೆಯಲ್ಲಿ ಪಿತೃಪಕ್ಷವಾದ್ದರಿಂದ ಎಲ್ಲರನ್ನೂ ಊಟಕ್ಕೆ ಕರೆದಿದ್ದಳು. ಬಹಳ ದಿನಗಳ ನಂತರ ಕಲಕಪ್ಪ ಮೇಷ್ಟರೂ ಬಂದಿದ್ದರು. ಎಲ್ಲರೂ ನಡುಮನೆಯಲ್ಲಿ ಸಾಲಾಗಿ ಕುಳಿತಿರುವಾಗ, ಸರಿಯಾದ ಸಮಯಕ್ಕೆ ವಾಟಿಸ್ಸೆಯೂ ಹಾಜರಾದ.

"ಓಹ್ ಓ ಕಲಕಪ್ಪ ಮೇಷ್ಟ್ರು ಬಂದವ್ರುರೆ" ಎಂದ.

"ಬರಲಿಲ್ಲ ಅಂದ್ರ ಅಕ್ಕವರು ಬಡತರೇನ್ರೀ, ಅದು ಸ್ಕೂಲ ಸನೇಕ್ಕೆ ಬಂದು ಕರದಾರ ಗುರತೇನ?"

"ಇಂಪಾರ್ಟೆಂಟ್ ವಿಷಯ ಅದಲ್ಲ ಕಂಡ್ರೀ."

"ಇನ್ನಾವುದ್ರೈತಿ ಹೇಳಲ್ಲ?"

"ಪಾಪ ನೀವು ಮಟನ್ ತಿನ್ನದೇ ಅಪರೂಪ. ಹೋಟ್ಲುಗೋದ್ರೆ, ಸಫಿಸಿಯಂಟಾಗಿ ತಿನ್ನಕ್ಕಾಗದಿಲ್ಲ, ನಮ್ಮ ಜುಮ್ಮಕ್ಕಾದ್ರೆ ತಿನ್ನೊವಷ್ಟು ಬಾಡಾಕ್ತಳೆ ಅಲವೇನ್ರಿ?" ಎಂದು ವಾಟಿಸ್ಸೆ ಅಣಕಿಸಿದ. ಇದರಿಂದ ರೇಗಿದ ಕಾಳಮಾವ,

"ಅವುರೇನು ಬಾಡಕಾಣದೆ ಕುಂತಿದ್ರು ಅನ್ನಂಗೆ ಮಾತಾಡ್ತಿಯಲ್ಲ. ಊರಬ್ಬದಲ್ಲಿ ಮೇಸ್ಟ್ರು ಕರಿದೆ ಅಬ್ಬ ಮಾಡಿದ್ರೆ ದೇವುರು ಮೆಚ್ಚನೇನ್ಲ?" ಎಂದ.

"ಇಲ್ಲ ದ್ವಡಪ್ಪ, ನಾನು ಹಾಕ್ಲಾಸುಕ್ಕಂಗಂದೆ. ಇಂತ ಫಂಕ್ಷನ್‌ಗ್ಯಲ್ಲ ಗೆಸ್ಟುಗಳಿಲ್ಲ ಅಂದ್ರೆ ಕಳೆಯಿರದಿಲ್ಲ, ನಮ್ಮ ಕಲಕಪ್ಪಾರು ನಮ್ಮಕ್ಕನ ಮನೆ ಮೀಲ್ಸಿಗೆ ಬಂದಿರದ್ರಿಂದ ನನಿಗಂತೂ ಭಾಳ ಕುಶಿಯಾಗ್ಯದೆ, ನಿನಿಗೊ ಉಗ್ರಿ?" ಎಂದ.

"ಯಾಕೊ ಜಾಸ್ತಿ ತಗಂಡಂಗಿದ್ದಿಯಲ್ಲೊ?" ಎಂದ ಉಗ್ರಿ.

"ಅವುನಿವತ್ತು ತಗಳದೆಯಿದ್ರೆ, ಸೂರ್ಯ ಮುಳುಗ ದಂಗೆ ಅಂಗೇಯಿರೊನು" ಎಂದುಕೊಂಡು ಜುಮ್ಮಿ ಇಸ್ತ್ರಿ ಎಲೆ ಕೊಟ್ಟು ನೀರು ಚುಮುಕಿಸಿದಳು. ನಂತರ ಮನೆಗೆ ಬಂದ ನೆಂಟರು ಉಪ್ಪು, ನಿಂಬೆ ಚೂರು, ಸೌತೆಕಾಯಿ, ಈರುಳ್ಳಿ ಚೂರನ್ನು ಎಲೆ ಮೂಲೆಗೆ ಮಡಗುತ್ತಿದ್ದಂತೇ, ಪಂಚಾಯ್ತಿ ಮೆಂಬರು ಮಾಳಿಗೆ ಕಾಣಿಸಿಕೊಂಡ. ಆಗ ಜುಮ್ಮಿ,

"ಬಾರೊ ಮಾಳಿಗೆ, ಕೂತಗೊ ಅತ್ತಗೆ" ಎಂದಳು.

"ಬ್ಯಾಡ ಕಣಕ್ಕ, ಆಗಲೇ ಮೂರು ಮನೆ ಉಂಡೆ" ಎಂದ ಮಾಳಿಗೆ.

"ಮೂರು ಮನೆ ಉಂಡ್ಯಾ?"

"ಊ. ಆ ಮಂಜನ ಮನೆ, ಹ್ವರಟ್ಟಿ ಕೃಷ್ಣೇಗೌಡನ ಮನೆ, ಪೂಜಾರಿ ರಾಮೇಗೌಡನ ಮನೆ ಉಂಡಾಯ್ತು. ಇನ್ನ ಯರಡು ಮನಿಯವೆ" ಎಂದ ಮಾಳಿಗೆ.

"ಆ ಯರಡು ಮನೆಲಿ ನಾಳಿಕ್ಯುಣ್ಣಿವೆ, ಇವತ್ತು ನನ್ನಮನೆ ಉಣ್ಣು"

"ಅಂಗರೆ ಬರೀ ಒಂದು ಸೌಟು ಬಾಡಾಕು. ಮುದ್ದೆ ಗಿದ್ದೆ ಏನೂ ಬ್ಯಾಡ" ಎಂದು ಮಾಳಿಗೆ ಕುಳಿತೇಬಿಟ್ಟ.

"ಪಂಚಾಯ್ತಿ ಮೆಂಬ್ರಾದ್ರೆ ಇದೊಂದು ಬೆನಿಫಿಟ್ಟು ಕಂಡ್ರಿ ಕಲಕಪ್ಪಾರೆ, ಯಲ್ಲಾರು ಉಣ್ಣಕ್ಕೆ ಕರಿತರೆ. ಅದೆ ನಮ್ಮ ನೋಡಿ ಯಾರೂ ಕರಿಯದಿಲ್ಲ" ಎಂದ ವಾಟಿಸ್ಸೆ ಮಾಳಿಗೆಗೆ ಸಿಕ್ಕ ಮಾನ್ಯತೆ ನೋಡಿ ಕರುಬಿದ.

"ಅಲ್ರಿ ಮಾಳಿಗಿಯುವರೆ, ಮೂರ ಮನಿ ಉಂಡು ಈಗ ನಾಕನೆ ಮನಿಗೆ ಕುಂತಿರಿ ಅಂದ್ರೆ, ನಮ್ಮ ಹಳೆಕಾಲದ ಜನ ಇನ್ನು ಆದಾರೆ ಅಂದಂಗಾತು" ಎಂದ ಕಲಕಪ್ಪ,

"ಏ ಅವುನೇನು ಪುಲ್ಲೂಟ ಮಾಡಕೊಗಿದ್ದನೆ? ಒಂದು ಸೌಟು ಬಾಡಾಕಿಸಿಗಂಡು ಈಟುಗಾತ್ರ ಮುದ್ದೆ ತಿಂದು ಎದ್ದು ಬಂದವುನೆ" ಎಂದ ಉಗ್ರಿ. ಆಗ ಕಾಳಮಾವ,

"ನಾನು, ಸೀರ, ನಂಜಣ್ಣ, ಆ ಪೂಜಾರಿ ರಾಮಯ್ಯ ಸೇರಿಕಂಡ್ರೆ ಒಂದು ಕುರಿಬಾಡ ನಾಕೇಜನ ತಿಂದಕಳವು ಗೊತ್ತೆ?" ಎಂದ.

"ನಿಮ್ಮ ಕಾಲ ಅಂಗಿತ್ತು ದ್ವಡಪ್ಪ, ಈಗ ಆಡು ಕುರಿ ರೇಟು ಕೇಳಿದ್ದಿಯಾ?" ಎಂದು ವಾಟಿಸ್ಸೆ ಹೇಳುತ್ತಿರುವಾಗ ಬಾಡಿನೆಸರು ಬಿಡುತ್ತ ಬಂದ ಜುಮ್ಮಿ ಜೊನ್ನೆ ತುಂಬಿ ಚೆಲ್ಲಾಡುವಂತೆ ಬಾಡಾಕಿದಳು. ಎಲ್ಲ ಮನಸ್ಸುಗಳು ಸಂತೃಪ್ತಿಯಿಂದ ಅರಳಿದವು. ಆಗ ಕಾಳಮಾವ,

"ಎಷ್ಟು ಕೇಜಿ ಬತ್ತೆ ನಿನ್ನ ತಗರು ಜುಮ್ಮಿ?" ಎಂದ.

"ಇಪ್ಪತ್ತೈದು ಕೆಜಿ ಬತ್ತು ಕಣಮಾವ, ಚರ್ಬಿ ಜಾಸ್ತಿಯಿದ್ದತೇನೋ, ಮಾರಿಬುಟ್ಟು ಒಂದು ಮಳಕನ್ನ ತರನ ಅಂತ ನಮ್ಮನಿಯೋರಂದ್ರು. ನಾನು ಆದದ್ದಾಗಲಿ ಅಂತ ಕುಯ್ಸೆ ಬುಟ್ಟೆ" ಎಂದಳು ಜುಮ್ಮಿ.

"ನೀನೇಳಂಗೆ ಚರ್ಬಿ ಜಾಸ್ತಿಯದೆ ಕಂಡೈ" ಎಂದ ಕಾಳಮಾವ ಚರ್ಬಿ ಚೂರನ್ನು ಆಯ್ದು ವಾಟಿಸ್ಸೆ ಎಲೆಗೆ ಎಸೆಯುತ್ತ,

"ತಗಳ್ಳ ತಿನ್ನ" ಎಂದು ವರ್ಗಾಯಿಸಿದ.

"ದ್ವಡಪ್ಪ ನನ್ನನ್ನ ಏನು ಮಾಡಬೇಕು ಅಂತ ಮಾಡಿದ್ದಿ. ಶರಾಪಿನ ಹೀಟಿಗೆ ಚರ್ಬಿ ಕರಗಿದ್ರೆ ಏನಾಯ್ತದೆ ಗೊತ್ತೆ?" ಎಂದ ವಾಟಿಸ್ಸೆ.

"ಏನಿಲ್ಲ, ನಾಳೆ ಮನೆ ಮುಂದೆ ಬೆಂಕಿ ಹಾಕಂಗಾಯ್ತದೆ ಅಷ್ಟೆ" ಎಂದು ಉಗ್ರಿ ನಕ್ಕ.

"ವಾದೊರ್ಸ ಅಂಗೆ ಆಗಿತ್ತು ಕಂಡ್ಯ. ಆ ಸೀರಂಗ ಪಟ್ನದ ಜಯಮ್ಮ ಹಬ್ಬಕ್ಕೆ ಬಂದಿದ್ಲು, ಆಗ್ಲು ಇಂತದೇ ನ್ಯಸೊಂದು ಕಂಡೊಂದು ಅನ್ನೊಬಾಡು ತಂದಿದ್ರೊ. ಅವಮ್ಮ ತಿನ್ನದು ತಿಂದು ರಾತ್ರೆಲ್ಲ ವಳಿಕೂ ಈಚೆಗೂ ಓಡಾಡಿ ಓಡಾಡಿ ಸಾಕಾಗಿ, ಕಡಿಗೆ ಆಸುಪತ್ರಿಗೆ ತಗಂ ದೋಗಿ ಗ್ಲೂಕೋಸ್ ಕೊಡಿಸಿದೊ" ಎಂದು ಜುಮ್ಮಿ ನಗಾಡಿದಳು.

"ಅಂಗರೆ ಶ್ರೀರಂಗಪಟ್ಣದ ಜಯಮ್ಮ ಬಂದಿದ್ಲೇನಕ್ಕ?" ಎಂದ ವಾಟಿಸ್ಸೆ.

"ಊ ಕಂಡ್ಯ ನಿಗೊತ್ತವುಳು?"


"ಗೊತ್ತಿಲ್ಲ, ಕನಡದಲ್ಲಿ ಮಾತಾಡತಿದ್ಲು ತಾನೆಯ?"

"ಊ, ಅದ್ಯಾಕಂಗೆ ಕೇಳ್ತಿ?"

"ಟಿಪ್ಪು ಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಕನ್ನಡ ತಗದು ಪಾರಸಿ ಭಾಷೆ ಜಾರಿಗೆ ತಂದಿದ್ನಂತೆ. ಅದ್ಕೆ ಜಯಮ್ಮ ಯಾವ ಭಾಷೆಲಿ ಮಾತಾಡಿ ಹೋದ್ಲು ಅಂತ ಕೇಳಿದೆ" ಎಂದ ವಾಟಿಸ್ಸೆ.

"ಹಾಂಗಲ್ರಿ ವಾಟಿಸ್ಸೆ, ಟಿಪ್ಪು ಕಾಲದಲ್ಲಿ ಆಡಳಿತ ಭಾಷೆ ಪಾರ್ಸಿ ಆಗಿತ್ತು ಅಂತ ಶಂಕರಮೂರ್ತಿ ಹೇಳ್ಯಾರೆ, ಅದಕ ನೀವು ಹಾಸ್ಯ ಮಾಡಕತ್ತಿರೇನು?" ಎಂದ ಕಲಕಪ್ಪ,

"ಹಾಸ್ಯನೆ ಕಂಡ್ರಿ ಕಲಕಪ್ಪಾರೆ, ನೀವು ಮೇಷ್ಟ್ರು, ಎಜುಕೇಟಿವ್, ಅದರಲ್ಲೂ ಎಜುಕೇಶನ್ ಡಿಪಾರ್ಟ್‌ಮೆಂಟಿಗೆ ಸೇರಿದ್ದಿರಿ. ನಿಮ್ಮ ಮಿನಿಷ್ಟ್ರು ಇಂತ ಸ್ಟೇಟ್‌ಮೆಂಟೇನ್ರಿ ಕೊಡದು."



"ಏನು ಕೊಟ್ಟವ್ರಪ್ಪ?" ಎಂದ ಕಾಳಮಾವ.

"ಟಿಪ್ಪು ಸುಲ್ತಾನ್ ಕನ್ನಡದ್ರೋಹಿ ಅಂದವುನೆ."

"ಅದ ಕಟಗಂದೇನೀಗ? ಅವುನ ಕಾಲ ಮುಗ ದೋಗಿ ಮುನ್ನೂರೊರ್ಸ ಆಯ್ತಪ್ಪ."

"ಮುನ್ನೂರೊರ್ಸವೇ ಆಗಲಿ ದ್ವಡಪ್ಪ, ಟಿಪ್ಪು ಸುಲ್ತಾನ್ ಕನ್ನಡ ದ್ರೋಹಿ ಆಗಿದ್ರೆ, ಇಡೀ ಶ್ರೀರಂಗ ಪಟ್ಟಣದ ಜನ ಪಾರಸಿಲಿ ಮಾತಾಡಬೇಕಾಗಿತ್ತು, ಇಲ್ಲ ಉರ್ದು ಅಥವಾ ಅರೇಬಿಕ್‌ನಲ್ಲಿ ಮಾತಾಡಬೇಕಾಗಿತ್ತು, ಈ ಭಾಷೆ ಹಾವಳಿಯಿಂದ ಶ್ರೀರಂಗಪಟ್ಟಣದಲ್ಲಿ ಕನ್ನ ಕಣ್ಮರೆ ಆಗಿದ್ರೆ ಈ ಶಂಕರಮೂರ್ತಿ ಟಿಪ್ಪು ಸುಲ್ತಾ ಕನ್ನಡ ಹಾಳು ಮಾಡಿರೊ ಕನ್ನಡದ್ರೋಹಿ ಅನ್ ಆಗ ಒಪ್ಪಿಗಳನ, ಸುಮ್ಮ ಸುಮ್ಮನೆ ಅಂದ್ರೆ ಸುಮ್ ಬುಡಬಾರ್ದು."

"ಬುಡಬಾರ್ದು ಅಂದ್ರೆ ಏನು ಮಾಡಂಗಿದ್ದಿ" ಎಂದಳು ಜುಮ್ಮಿ.

"ಯಕ್ಕ ಸ್ವಲಪ ಅಗಲುನೋಡು ನೀನು, ನೋಡು ಕಲಕಪ್ಪ ಮೇಷ್ಟ್ರಾಗಲೆ ಮಾಂಸ ಮುಗಿಸಿ ಮೂ ಚೀಪತಾ ಅವುರೆ. ನೀವೆ ಹೇಳ್ರಿ ಕಲಕಪ್ಪಾರೆ ಟಿ ಕನ್ನಡ ದ್ರೋಹಿನೆ" ಎಂದ ವಾಟಿಸ್ಸೆ.

"ಅದ್ಯಾಂಗ್ರಿ ಅವ ಕನ್ನಡ ದ್ರೋಹಿ ಆಕ್ಕನೆ, ಇ ನಮ್ಮ ಎಜುಕೇಶನ್ ಮಿನಿಷ್ಟ್ರ ಮನಿಯಾಗೆ ತೆಲು ಮಾತಾಡ್ತರೆ, ಬೀದ್ಯಾಗೆ ಕನ್ನಡ ಮಾತಾಡ್ತರೆ, ಆಫೀಸಿನ ಇಂಗ್ಲಿಷ್ ಮಾತಾಡ್ತರೆ, ಅಂಗೆ ಟಿಪ್ಪು ಕಾಲದಲ್ಲಿ ಮೂ ನಾಕು ಭಾಷೆ ಇಲ್ಲಿ ಬಳಕೆಲಿದ್ದವು. ಹಾಂಗಂತ ಹೇ ಅವ ಕನ್ನಡ ದ್ರೋಹಿ ಅಂದ್ರ ಮಂದಿ ಮೆಚ್ಚತರೇನು

"ಎಜ್ಜಾಟ್ಲಿ ಕರಟ್ ಕಂಡ್ರಿ ಮೇಷ್ಟ್ರೆ, ನೀವು ನ ಜೊತೆಲೇ ಇದ್ದೀರಿ. ಟಿಪ್ಪು ಕನ್ನಡ ದ್ರೋಹಿ ಅ ಅವುನೇನು ಕನ್ನಡ ಶಾಲೆಗೆ ಪರಮಿಷನ್ ತಗೊಂ ಇಂಗ್ಲಿಸ್ ಸ್ಕೂಲ ನ್ಯಡುಸ್ತಿದ್ನೆ? ಅಥವಾ ಅವನ ಮ ಇಂಗ್ಲಿಸ್ ಸ್ಕೂಲಿಗೆ ಸೇರಿಸಿದ್ನೆ. ಬನ್ನಿ ತೋ ತಿನಿ, ಎಷ್ಟು ಜನ ಕನ್ನಡಿಗರು ಇಂತ ಕ್ಯ ಮಾಡ್ತ ಅವುರೆ. ಟಿಪ್ಪು ಕನ್ನಡ ದ್ರೋ ಯಾದ್ರೆ ಇವುರೇನು ಅಂತ?" ಎಂ ವಾಟಿಸ್ಸೆ ರಾಂಗಾದ. ಸನ್ನಿವೇಶದ ಸೂಕ್ಷ್ಮತೆ ರಿತ ಕಾಳಮಾವ,

"ಉಂಡ್ಯ ಸುಮ್ಮನೆ, ಅಗಲುಮುಂದೆ ಕ ಗಂಡು ಅದೇನುಂಗೆ ಕೊಚಗುತ್ತಿ ಅಂಗೆಯ" ಎ

"ಅದ್ಯಲ್ಲ ಇಲ್ಲಿ, ಜಗ್ಗೇಸನ ಕತೆ ಹೇಳ್ ಎಂದಳು ಜುಮ್ಮಿ.

"ಜಗ್ಗೇಸನದೇನೂ?" ಎಂದ ಕಾಳಮಾ

"ಅವುನಿಗೆ ಸ್ಯಕೆಂಡ್ ಪ್ರೈಜ್ ಕೊಟ್ಟ ರಂತೆ ಕಣಮಾವ."

"ಯಾತ್ರಲ್ಲೀ?"

"ಸಿನುಮದಲ್ಲಿ ಮಾಡಿರೊ ಪಾಟ ಸ್ಯಕೆಂಡ್ ಪ್ರೈಜ್ ಕೊಟ್ಟಿದ್ದರಂತೆ."

"ಇಸಿಸಿ, ಪಸ್ಟು ಪ್ರೈಜೇ ಬರಂಗೆ ಮಾ ಲಿಲ್ಲವೇನೊ ಕೊಟ್ಟವುರೆ. ಸಾರು ಬುದ

"ಅಂಗಲ್ಲ ದ್ವಡಪ್ಪ, ಇವತ್ತಿನ ಕರ್ನಾಟ ಸಿಚ್ಚುಯೇಶನ್ನು ತುಂಬಾ ಡೈಂಜರ್ ಆಗ ಆ ಜಗ್ಗೇಶ್ ದಳದಲ್ಲೇ ಇದ್ರೆ ಹೀ ಅಂತ್ಲೆ ತಿಳಕಂಡು ಪಸ್ಟ ಪ್ರೈಜನೇ ಕೊಡತಿ ಏನು ಮಾಡ್ತಿ ಆ ಜಗ್ಗೇಶ್ ಕಾಂಗ್ರೆಸ್ಸಿಲ ಅದ್ಕೆ ಅವುನಿಗೆ ಸ್ಯಕೆಂಡ್ 'ಪ್ರೈಜ್ ಬಂದದೆ."

"ಅಂಗಂತಿಯಾ?" ಎಂದ ಸೀರ.

"ಊ ಚಿಗಪ್ಪ."


"ನೋಡುಮತ್ತೆ? ಪ್ರೈಜ್ ಕೊಡೊ ಸೂಳೆಮಕ ಇನ್ನಂಥಾ ಮಿಂಡ್ರುಗುಟ್ಟಿದೋರಿರಬೇಕು" ಎಂದು ತೀರ ತುಚ್ಛವಾಗಿ ಮುಖ ಮಾಡಿದ.

–ಬಿ. ಚಂದ್ರೇಗ

Zero Hour

ಮುನ್ನಿ

1. 'ನಾಯಿ ನೆರಳು' ಚಿತ್ರಕ್ಕೆ ಫಸ್ಟ್ ಪ್ರೈಜಂತೆ! ಓಕೆನಾ?



   a) ಭೈರ್‍ಸ್, ಕಾ(ಊ)ಸರವಳ್ಳಿ, ಸೀತಾ ಎಂಬ ಮೂರು ಜುಟ್ಟುಗಳ ಚಿತಾವಣೆ ಅದು!
   b) ನಾಯಿ ಬಾಲ ಡೊಂಕೇ ಬಿಡು
   c) ನಾಯಿ ನೆರಳು, ಕತ್ತೆಬಾಲ, ಕುದುರೆ ಜುಟ್ಟು... ಏನಿದೆಲ್ಲ ಮುನ್ನಿ?
   d) ಭೈರ್‍ಸ್, ಕಾಸರವಳ್ಳಿ, ಸೀತಾಗೆಲ್ಲ 'ಶೋಭಾ'ಯಾತ್ರೆಗೆ ಕಳಿಸಿ

2. ಸಿ.ಎಂ. ಹಳ್ಳಿ ಕಡೆ ಹೋಗಿದ್ದಕ್ಕೆ ಡಿಸಿಎಂ ಸ್ಲಮ್ ಕಡೆಯಂತೆ.... ಉದ್ಧಾರ ಆಗುತ್ತಾ ರಾಜ್ಯ?
   a) ಕೊಂಕಣ ಸುತ್ತಿ ಮೈಲಾರ ತಲುಪಿದಂಗಾಯ್ತು...



   b) ಅಂಬೇಡ್ಕರ್ ಫೋಟೋ ತೆಗೆದು ಹಾಕಿದಾತನಿಗೆ ಸ್ಲಮ್‌ಗಳಲ್ಲಿ ಇಕ್ತಾರೆ ಇರು....
   c) ಯಡ್ಡಿಯ ಮನಸ್ಸೇ ಕೊಳಚೆ....
   d) ಸ್ಲಮ್‌ನಲ್ಲೂ 'ಶೋಭಾ'ಯಾತ್ರೆ ಮಾಡುತ್ತೇನೋ ಮಂಗ....

3. 'ಕಲರ್ ಸಿಂಡ್ರೋಮ್' ಕುರಿತ ಈ ಹೇಳಿಕೆಗಳಲ್ಲಿ ಯಾವುದು ಸರಿ?
   a) ಇದು ಯಾವುದೋ ವಿಟಮಿನ್ ಕೊರತೆಯಿಂದ ಬರುತ್ತೆ ಅಂತಾರೆ ಕೆಎಎಸ್ ಪರೀಕ್ಷಾರ್ಥಿಗಳು
   b) ಕಲರ್ ಪೇಜ್‌ನಲ್ಲಿ ಏನು ಬರೆದರೂ ಓದುತ್ತೆ ಎಂಬ ಟೈಮ್ಸ್ ಗ್ರೂಪ್‌ನವರ ಭ್ರಮೆ!
   c) ಬಣ್ಣ ಕಟ್ಟಿ ಬರೆಯುವ ಚಡ್ಡಿ ಪತ್ರಕರ್ತರ ತೆವಲು
   d) ಮೇಲಿನೆಲ್ಲವೂ

4. 'ಶೋಭಾಯಾತ್ರೆ' ವ್ಯಾಖ್ಯಾನಿಸಿ
   a) ಶೋಭಾ ಕರಂದ್ಲಾಜೆ ನೇತೃತ್ವದಲ್ಲಿ ವಾನರರ ಭಕ್ಷಣೆ



   b) ಹೆಂಡ ಕುಡಿದ ಮಂಗಗಳ ಚೀರಾಟ, ಕೇಕೆ...
   c) ಕನ್ನಡ ಸಂಸ್ಕೃತಿಗೆ ಅಶೋಭೆ ಇದೆಲ್ಲ
   d) 'show(ಭಾ)ಯಾತ್ರೆ' ಬಿಡು ಅದು....

5. ಟಿಪ್ಪು ಮೇಲೆ ಶಂಕರಮೂರ್ತಿ ಯುದ್ಧ ಸಾರಿದ್ದಾನಲ್ಲ?
   a) ಟಿಪ್ಪುನ ಪಾದಧೂಳಿಗೂ ಸಮವಲ್ಲ ಈ ಶೆಟ್ಟಿ



   b) ಶೆಟ್ಟಿಗೆ ತಲೆ ಕೆಟ್ಟಿದೆ ಬಿಡು
   c) 'ಸಂಕಟ'ಮೂರ್ತಿಗೆ ಮೊದ್ಲು ಕ್ಯಾಪಿಟೇಷನ್ ಕುಬೇರರ ಜೊತೆ ಯುದ್ಧ ಮಾಡಲು ಹೇ
   d) ನಾನ್‌ಸೆನ್ಸ್ ಶೆಟ್ಟಿ ಕಮ್ಯುನಲ್ ವೈರಸ್ ಇದ್
   e) ಟಿಪ್ಪು ಸತ್ತು ಬದುಕಿದ್ದಾನೆ, ಶೆಟ್ಟಿ ಬದುಕಿಯ ಸತ್ತಿದೆ

ಉತ್ತರಗಳು:
1. d, 2. b, 3. d, 4. c, 5. e



ಈ ಭಯಂಕರ ಮನುಷ್ಯನ ಬಗ್ಗೆ ಹೇಳಲೇ ಬೇಕು. ಈತ ಅಮೆರಿಕದ ಮೈಕ್ ಟೈಸನ್. ಕೇವಲ ಇಪ್ಪತ್ತೊಂದು ವರ್ಷದ ಹುಡುಗ. ಮೊನ್ನೆ ಬಾಕ್ಸಿಂಗ್ ನಲ್ಲಿ ಛಾಂಪಿಯನ್ ಆದ. ಹೇಗೆ! ಸ್ಪಿಂಕ್ಸ್ ಎಂಬ ಛಾಂಪಿಯನ್‌ಗೆ ಕೇವಲ ಒಂದೂವರೆ ನಿಮಿಷದಲ್ಲಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಬಾರಿಸಿ ಕುತ್ತಿಗೆಗೆ ಇಕ್ಕಿ ಬೀಳಿಸಿದ. ಸ್ಪಿಂಕ್ಸ್ ಏಳಲಿಲ್ಲ. ಒಂದೇ ರೌಂಡ್, ಮೂರೇ ಹೊಡೆತ. ಸೋಲನ್ನೇ ಅರಿಯದಿರುವ ಕಪ್ಪು ಹುಡುಗ ಟೈಸನ್‌ನ ಎದುರು ನಿಲ್ಲಲು ಎಲ್ಲರೂ ಹೆದರುತ್ತಿದ್ದಾರೆ. ತಿಂಗಳ ಹಿಂದೆ ಮದುವೆಯಾದ ಹೆಂಡತಿ ಭಯದಿಂದ ಅಂಜುತ್ತಿದ್ದಾಳೆ. ಹೆಂಡತಿಗೆ ಈತ ಬಾರಿಸುವ ಪುಕಾರುಗಳಿವೆ.

ಏಕೆ ಹೀಗೆ ಆದ್ರೀ? ನೀನು ಸಜ್ಜನನಾಗಿ ಮಾತನಾಡಬಾರದೆ, ವರ್ತಿಸಬಾರದೆ? ಹೀಗೆ ಕೇಳಿದವರಿಗೆ ಟೈಸನ್ ಹೇಳುತ್ತಾನೆ. ನಾನು ಸುದ್ದಿ ಮಾಧ್ಯಮದ ತಜ್ಞನಲ್ಲ, ನಾನು ಹೋರಾಟಗಾರ.

ಇತರ ಕ್ರೀಡೆಗಳ ಬಗ್ಗೆ ಏನೆನ್ನಿಸುತ್ತೆ? ಕ್ರೀಡೆಗಳು? ಕ್ರಿಕೆಟ್, ಬಾಸ್ಕೆಟ್ ಬಾಲ್, ಅಥ್ಲೆಟಿಕ್ಸ್ ಕ್ರೀಡೆಗಳೆಲ್ಲ ಕೇವಲ ಸಂತೋಷ ಕೂಟಗಳು, ಬಾಕ್ಸಿಂಗ್ ಮಾತ್ರ ಆಟ, ಸ್ಪರ್ಧೆ. ನನ್ನೆದುರು ನಿಂತವರ ಬೆನ್ನು ಮುರಿದು ಹಾಕುತ್ತೇನೆ. ಒಬ್ಬ ಇಬ್ಬರು, ಎಲ್ಲರನ್ನೂ ಮುರಿದು ಹಾಕ್ತೇನೆ... ಆ ಬಾಸ್ಕೆಟ್‌ಬಾಲ್ ಛಾಂಪಿಯನ್ ಮೈಖೇಲ್ ಜೋರ್ಡನ್ ಬಗ್ಗೆ ಏನನಿಸುತ್ತೆ? ನೆಲದಿಂದ ಹಾರಬಲ್ಲ ಎಲ್ಲ ಮನುಷ್ಯರ ಬಗ್ಗೆ ನನಗೆ ಗೌರವವಿದೆ...

ನಿನಗೆ ಹೆದರಿಕೆಯೇ ಇಲ್ಲವೇ?

ಹೆದರಿಕೆ. ನಾನು ಹೆದರುತ್ತೇನೆ. ಭೀತಿಯಿಂದ ನಡುಗುತ್ತೇನೆ. ಭಯವೇ ಮನುಷ್ಯನನ್ನ ಬೆಚ್ಚಗಾಗಿಸಿ, ಬೆಳೆಸುತ್ತದೆ. ಅದೇ ಆತನನ್ನು ಗಟ್ಟಿಗೊಳಿಸುತ್ತದೆ.

– ಶಕ್ತಿಯ ಟ್ಯಾಂಕ್, ಮಾನವ ಟ್ಯಾಂಕ್ ಎಂದು ಖ್ಯಾತನಾಗಿರುವ ಈತ ತನ್ನನ್ನು ಟೀಕಿಸುತ್ತಿದ್ದ ಪತ್ರಕರ್ತರಿಗೆ ಮೊನ್ನೆ ಹೇಳಿದ; 'ಹೋಗಿ, ನಾನು ಪುರುಷೋತ್ತಮ, ಅದನ್ನು ಬರೆದುಕೊಳ್ಳಿ ಹೋಗಿ.'


ಸುಖದ ಮುಖಗಳು

ಈತ ಸುಖಪುರುಷನೆ? ತೊಂಭತ್ತು ವರ್ಷ ಬಡತನದಲ್ಲಿ, ಖ್ಯಾತಿಯಲ್ಲಿ, ವಿವಾದದಲ್ಲಿ, ಸತ್ಯಾನ್ವೇಷಣೆಯಲ್ಲಿ ಕಳೆದಿರುವ ಈತನಿಗೆ ಸಾರ್ಥಕ್ಯ ದೊರೆತಿದೆಯೇ?

ಅಮೆರಿಕಾದಲ್ಲಿ ಈಗ ಒಂದು ಚರ್ಚೆ ನಡೆಯುತ್ತಿದೆ. ಪಾನನಿರೋಧ ಮಾಡಿದ್ದ ಅಮೆರಿಕ ನಿಷೇಧಿಸಲಾಗದೆ ಪಾನವನ್ನು ಮುಕ್ತಗೊಳಿಸಿತು. ಬೇಕಾದವರು ಕುಡಿಯುವುದು ಕಾನೂನು ಬದ್ಧವಾಯಿತು. ಈಗ ಕ್ರ್ಯಾಕ್, ಹಶೀಶ್, ಮಾರಿವಾನ ಮುಂತಾದವು ಕಳ್ಳತನದಲ್ಲಿ ಉಪಯೋಗಿಸಲ್ಪಡುತ್ತಿವೆ. ಕಾನೂನಿಗೆ ನಿಷಿದ್ಧವಾದ ಈ ಕೆಲಸವನ್ನು ಮಿಲಿಯನ್‌ಗಟ್ಟಲೆ ಜನ ಮಾಡುತ್ತಿರುವುದೇ ಅಲ್ಲದೆ ಈ 'ಡೋಪ್'ಗಳ ಅಂತರರಾಷ್ಟ್ರೀಯ ಜಾಲವೇ ಇದ್ದು ಇದರ ವ್ಯಾಪಾರವನ್ನು ತಡೆಗಟ್ಟಲು ಅಮೆರಿಕಾ ಅಪಾರ ಹಣ ಖರ್ಚು ಮಾಡುತ್ತಿದೆ. ಈಗ ಅಮೆರಿಕಾದ ಅನೇಕರು ತಡೆಗಟ್ಟಲಾಗದ ಈ ದುರಭ್ಯಾಸವನ್ನು ಕಾನೂನು ಬದ್ಧಗೊಳಿಸಲು, ಇದಕ್ಕೆ ತೆರಿಗೆ ಹಾಕಿ ಮದ್ಯಪಾನಕ್ಕೆ ಅವಕಾಶ ಕೊಟ್ಟಂತೆಯೇ ಅವಕಾಶ ಕೊಡಲು ಹೇಳುತ್ತಿದ್ದಾರೆ. ಇದಕ್ಕೆ ವಿರೋಧ ಕೂಡ ಜೋರಾಗಿದೆ. ಕಾನೂನು ಬಾಹಿರವಾದ ಈ ಗಾಂಜಾ, ಹಶೀಶ್‌ಗಳಿಗೆ ಪರವಾನಗಿ ಕೊಟ್ಟರೆ ಆಗಬಹುದಾದ ದುರಂತದ ಬಗ್ಗೆ ಇವರು ಮಾತಾಡುತ್ತಿದ್ದಾರೆ. ಆಗಾಗ ಹಶೀಶ್ ತೆಗೆದುಕೊಳ್ಳುವರು ಕೂಡ ಮಾನ ಉಳಿಸಿಕೊಳ್ಳಲು ಅದು ತೀರಾ ಕೆಟ್ಟದು, ಅನೈತಿಕ ಅಭ್ಯಾಸ ಇತ್ಯಾದಿ ಹೇಳುತ್ತಾರೆ.

ಆದರೆ ಅದು ಸ್ವಲ್ಪವೂ ಸಂತೋಷ ಕೊಡದಿದ್ದರೆ, ಅಷ್ಟು ಅನೈತಿಕವಾದರೆ ಅದನ್ನು ತೆಗೆದುಕೊಳ್ಳುವುದೇಕೆ? ಮಾರಿವಾನದ ಸುಖ, ಮನಸ್ಸಿನ ಮಬ್ಬು ಹರಿಸುವ ಗುಣ, ನಿಜವಾದ ಆನಂದ ಕೊಡುವ ಬಗೆಯನ್ನು ಕುರಿತು ಪುಸ್ತಕಗಳೇಕೆ ಪ್ರಕಟವಾಗಿವೆ? ಸುಖ ನೀಡಿದರೂ ಅದನ್ನು ಅಸುಖ ಎಂದು ಕರೆಯುವ ಅಪ್ರಾಮಾಣಿಕತೆ ಏಕೆ? ಇದನ್ನೆಲ್ಲ ಬಲ್ಲವರು ಹೇಳುತ್ತಾರೆ, ಯಾರು ಏನು ಹೇಳಿದರೂ, ಸರ್ಕಾರ ಎಂಥ ಕಾನೂನು ರಚಿಸಿದರೂ ಮನುಷ್ಯನನ್ನು ಅವನ ಸುಖದಿಂದ ದೂರ ಇಡಲೂ ಆಗುವುದಿಲ್ಲ, ಕಾನೂನು ಕೂಡ ಮನುಷ್ಯನ ಈ ಮೂಲಭೂತ ಸುಖದ ಕಾತರವನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಅದು ಸೋಲುತ್ತದೆ.

ಸುಖದ ಕಲ್ಪನೆಯನ್ನು ಮಾರ್ಪಡಿಸುವುದು ಮಾತ್ರ ಸಾಧ್ಯ. ನೀರದ ಚೌಧುರಿಗೆ ತನ್ನ ಚಿಂತನೆ, ಭಟ್ಟಿ ಇಳಿಸಿದ ಇಂಗ್ಲಿಷ್ ಜೀವನ ಮಾರ್ಗ, ವಿರೋಧಾಭಾಸಗಳ ಆಳದ ನಿಜದ ಶೋಧನೆ ಸುಖ ನೀಡಿದರೆ ಇನ್ನೊಬ್ಬನಿಗೆ ಜೀವನ ಎಲ್ಲ ಸಹಜ ಸಂತೋಷಗಳೊಂದಿಗೆ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುವುದು ಸುಖ ನೀಡುತ್ತದೆ. ಆಲ್ಕೋಹಾಲ್‌ನಿಂದ ಆಲ್ಕೋಹಾಲಿಕ್‌ಗಳಾಗಿರುವಷ್ಟೇ ಜನ ತಮ್ಮ ಕೆಲಸದಿಂದ, ತಮ್ಮ ಆದರ್ಶದಿಂದ, ನಿರೀಕ್ಷೆಯಿಂದ ಆಲ್ಕೋಹಾಲಿಕ್ ಆಗಿರುತ್ತಾರೆ. ಸುಖ, ಸಾರ್ಥಕ್ಯವಿಲ್ಲದೆ ಗಾಂಧಿ ತಮ್ಮ ವಿಚಿತ್ರ ಶೈಲಿಯ ಜೀವನ ನಡೆಸಿದರೆ? ಅದೇ ಬಗೆಯ ಸಂತೃಪ್ತಿ ಇಲ್ಲದೆ ನೀರದ ಚೌಧುರಿ ಗಾಂಧೀಜಿಯ ದೋಷ ಗ್ರಹಿಸುತ್ತಾರೆಯೇ? ಮೀನು ಹಿಡಿಯುವವ ನೋಡುವವರಿಗೆ ಹುಚ್ಚನಂತೆ ಕಂಡರೂ ಆತನ ಕಾತರ, ನಿರೀಕ್ಷೆ ಸುಖದಿಂದ ಕೂಡಿರುತ್ತದೆ. ಹಾಗೆ ತೇಜಸ್ವಿ ಹೇಳುತ್ತಾರೆ.



ಜೂನ್ 19, 1988

ಪುಟ ಬಂಗಾರ

ಮೂರು ವಾರದಿಂದ ಈ ಶನಿಯ ಬಗ್ಗೆ ಬರೆಯಲು ಯೋಚಿಸಿ ಕೋಣೆ ಗಳಿಗೆಯಲ್ಲಿ ಬೇರೆಯದು ಬರೆದಿದ್ದೇನೆ. ಈತ ಜಿ.ಬಿ.ಜೋಶಿ. ಪ್ರೀತಿಯಿಂದ ಶನಿ ಅಂದೆ. ಈತನನ್ನು ನಿಜಕ್ಕೂ "ಪ್ರೀತಿಯ ಶನಿ" ಎಂದೇ ಕರೆಯಬಹುದು. ಈ ಜಿ.ಬಿ.ಜೋಶಿ, ಈತನ ಮಗ ರಾಮಜೋಶಿ ಮತ್ತು ಈತನ ಅಧಿಕೃತ ವಿಮರ್ಶಕ ಕುರ್ತಕೋಟಿಯನ್ನು ನಾವು ಈ Father Son and Holy Ghost ಎಂದು ಕರೆಯುವುದುಂಟು. ಪ್ರೀತಿಯ ಮೂರು ಶನಿಗಳು.

ಜಿ.ಬಿ.ಜೋಶಿಯನ್ನು ನಾನು ನೋಡಿದ್ದು ಇಪ್ಪತ್ತೈದು ವರ್ಷದ ಹಿಂದೆ. ನನ್ನದೊಂದು ಕತೆ (ನಾಟಕ)ಯನ್ನು ಈತ ತಮ್ಮ 'ಮನೋಹರ ಗ್ರಂಥ ಮಾಲೆ'ಯ ಬೆಳ್ಳಿ ಹಬ್ಬದ ಸಂಚಿಕೆಗೆ ಕೇಳಿ ಪಡೆದಾಗ, ನಾನಾಗ ಎಂ.ಎ. ಓದುತ್ತಿದ್ದೆ. ಈಗ ಜೋಶಿ ತಮ್ಮ ಮನೋಹರ ಗ್ರಂಥ ಮಾಲೆಯ ಚಿನ್ನದ ಹಬ್ಬ ಆಚರಿಸಿ 'ಪುಟ ಬಂಗಾರ' ಎಂಬ ಐದು ಸಂಪುಟಗಳ ಸುಂದರ ಪುಸ್ತಕ ತಂದಿದ್ದಾರೆ. ಸರ್ಕಾರ ಈ ಪ್ರಕಾಶನಕ್ಕೆ ಒಂದು ಲಕ್ಷ ನೀಡಿದೆ. ಈ ಜೋಶಿಯನ್ನು ನೋಡಿದವರು ಎರಡು ಲಕ್ಷ ಕೊಟ್ಟರೂ ಆಶ್ಚರ್ಯ ಇಲ್ಲ.



ಒಳ್ಳೆಯ ಮನುಷ್ಯ, ಅಭಿರುಚಿಯುಳ್ಳ ಮನುಷ್ಯ, ಐವತ್ತು ವರ್ಷದಿಂದ ಪ್ರಕಾಶನ ನಡೆಸುತ್ತಿದ್ದಾರೆ. ಒಳ್ಳೊಳ್ಳೆಯ ಪುಸ್ತಕ ಹೊರತಂದಿದ್ದಾರೆ. ಆದರೆ ಶ್ರೀಮಂತರು, ಸಂಭಾವನೆ ಕೇಳದಿರುವ ಸಜ್ಜನರು ಪುಸ್ತಕ ಬರೆದರೆ ಅವನ್ನು ಪ್ರಕಟಿಸಲು ಜೋಶಿಗೆ ತುಂಬ ಇಷ್ಟ. ಪುಸ್ತಕ ಬರೆಯುವುದು ಸಂಭಾವನೆ, ಫೀಸು, ಲಾಭ ಇತ್ಯಾದಿಗಾಗಿಯೇ? ಛೆ, ಇಂಥ ವಿಷಯವನ್ನು ಲೇಖಕರು ಯೋಚಿಸಬಹುದೆ?

ಹೀಗಾಗಿ ಚಿತ್ತಾಲ, ಗಿರೀಶ್, ಶಾಂತಿನಾಥ ದೇಸಾಯಿ ತರಹದವರು ಜೋಶಿಗೆ ತುಂಬ ಇಷ್ಟ. ಅವರು ಸಂಭಾವನೆ ಕೇಳುವ ಬದಲು ತಾವೇ ಕೊಡಬಲ್ಲವರು. ಸಜ್ಜನರು.

ಕಳೆದ ಐವತ್ತು ವರ್ಷದಿಂದಲೂ ಅದೇ ಟೋಪಿ, ಅದೇ ಛಲ, ನಗೆ, ಶನಿ ಗುಣದಿಂದ ಕೂಡಿರುವ ಜೋಶಿಯವರಿಗೆ ಅಭಿನಂದನೆ...

ಅಮ್ಮ ತವರಿಗೆ, ಅಪ್ಪ ಬಾರ್‌ಗೆ, ಮಕ್ಕಳು?

ಬಿ.ಎಸ್. ಸ್ವಾಮಿ, ಶೋರಾಪೂರ
'ಪ್ರೇಮ' ಒಂದು ಸಾಂಕ್ರಾಮಿಕ ರೋಗವೇ?
* ಇಬ್ಬರಿಗೆ ಸೀಮಿತವಾಗಿರುವ ಸಾಂಕ್ರಾಮಿಕ ಯೋಗ.

ಹನುಮನಾಯಕ್, ಶಿಕಾರಿಪುರ
ಪ್ರಸ್ತುತ ವರ್ಷ ಸುವರ್ಣ ಕರ್ನಾಟಕ ಮಹೋತ್ಸವವೋ, ರೆಡ್ಡಿಯ ಸಿ.ಡಿ. ಮಹೋತ್ಸವವೋ?
* ಕನ್ನಡಿಗರ ಮರಣೋತ್ಸವ ಎನ್ನುವವರಿದ್ದಾರೆ.

ಮುಂಚಾಲಿ ಗುರುರಾಜಚಾರು, ಬಳ್ಳಾರಿ
ಸುಳ್ಳು ಹೇಳುವುದರಲ್ಲಿ ಹರಿಶ್ಚಂದ್ರ ಮುಂದಾಗಿದ್ದರೆ ಏನಾಗುತ್ತಿತ್ತು?
* ದೇವೇಗೌಡರಿಂದ ತುಂಬಾ ಪೈಪೋಟಿ ಇರುತ್ತಿತ್ತು.

ಎನ್.ವಿ. ಹಾಲಪ್ಪ, ಶಿವಮೊಗ್ಗ
ಕಾಂಗ್ರೆಸ್‌ಗೆ ಸಿದ್ಧರಾಮಯ್ಯ ಅನಿವಾರ್ಯವೋ? ಅಥವಾ ಸಿದ್ಧರಾಮಯ್ಯನಿಗೆ ಕಾಂಗ್ರೆಸ್ ಅನಿವಾರ್ಯವೋ?
* ಸಿದ್ದುಗೆ ಅನಿವಾರ್ಯ, ಕಾಂಗ್ರೆಗೆ ಅಗತ್ಯ.

ಎಂ.ಕೆ. ರವಿಕಾಂತ, ಮರಳೂರು
ಪ್ರಸ್ತುತ ರಿಮೇಕ್ ಹಾವಳಿ ಮಧ್ಯೆ ಲಂಕೇಶ್ ಸಾರ್ ಪ್ರತ್ಯಕ್ಷರಾಗಿದ್ದರೆ?
* 'ಮನ್ಮಥುಡು' ಮತ್ತು 'ಗಜನಿ' ಸಿನಿಮಾಗಳನ್ನು ರಿಮೇಕ್ಸ್ ಮಾಡಿರುವವರಿಗೆ ಕ್ಯಾಕರಿಸಿ ಉಗಿಯುತ್ತಿದ್ದರು.

ಪಿ.ಹಸೀನಾ, ಉಜಿರೆ
ದಲಿತರ ಮನೆ, ಮುಸ್ಲಿಮರ ಮನೆ..., ಹೀಗೆ ಮುಂದುವರೆದು ಕುಮಾರಣ್ಣ ಫುಟ್‌ಪಾತಲ್ಲಿ ಮಲಗೋದು ಯಾವಾಗ?
* ನಿಜವಾದ ದರಿದ್ರ ನಾರಾಯಣರ ಪಾಡು ಬಂದಾಗ.

ಬಿ.ಎಸ್. ವೀರಭದ್ರಪ್ಪ, ತೆಲಗಿ
...ಮತ್ತು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ಜೊತೆಗೆ ಲಂಕೇಶರೂ ಇದ್ದಿದ್ದರೆ...?
* ಲಂಕೇಶರು ಅವರೆಲ್ಲರನ್ನೂ ಟೀಕಿಸುತ್ತಾ ಇರುತ್ತಿದ್ದರೆಂಬುದರಲ್ಲಿ ಅನುಮಾನವೇ ಇಲ್ಲ.

ಎಚ್. ತಿಮ್ಮಪ್ಪ, ಕೊಡಗನೂರು
ದಯೆಯೇ ಧರ್ಮದ ಮೂಲವಾದರೆ, ಭಯವೇ?
* ದಾರಿದ್ರ್ಯದ ಮೂಲ.

ಎಂ. ಶ್ರೀಧರ ಮಿರ್ಜಾನ, ಕುಮಟಾ
ಬಡವರ ಮನೆಯಲ್ಲಿ ಮಲಗಿದ ಮಾತ್ರಕ್ಕೆ ಅವರ ಸಮಸ್ಯೆಗಳೆಲ್ಲಾ ಪರಿಹಾರವಾಗಿಬಿಡುತ್ತದೆಯೇ?
* ವಾಟಸ್ಸೆ ಪ್ರಕಾರ ಹೆಚ್ಚಾಗುತ್ತದೆ ಗೊತ್ತಾ.

ಪಿ. ಅಣ್ಣಪ್ಪ ಪ್ರಭು, ಬೆಂಗಳೂರು
ಅನಂತಕುಮಾರ್, ಸದಾನಂದಗೌಡ ಅಣ್ಣತಮ್ಮಂದಿರಂತೆ ಕಾಣುತ್ತಾರೆ ಅಲ್ಲವೇ?
* ಶೋಭಾ ಅವರಿಬ್ಬರ ಸಹೋದರಿ ಅಂತೆ.



ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಕವಿತಾ ಗೌಡರಿಂದ ಅವರಪ್ಪನ ಖಾತೆಗೆ ಕೋಟಿ ಕೋಟಿ ಹಣ ವರ್ಗಾವಣೆ, ಕವಿತಾ ಲಂಕೇಶರಿಂದ?
* ಅವರಪ್ಪನ ಖ್ಯಾತಿಗೆ ಸಲಾಮ್.

ಎಸ್. ಶಶಿಧರ, ಬೆಂಗಳೂರು
ಲಂಕೇಶರ ಟೀಕೆ-ಟಿಪ್ಪಣಿಗೆ ಸ್ವರ್ಗದಲ್ಲಿ ಯಾರು ಸಿಕ್ಕುತ್ತಾರೆ?
* ಛೇ, ಇಲ್ಲಿ ರಂಬೆ, ಊರ್ವಶಿ, ಮೇನಕೆಯರೇ ಇಲ್ಲವಲ್ಲಾ ಎಂಬುದರ ಬಗ್ಗೆ ಇರಬಹುದಾ.



ಬಿ.ಎಸ್. ಇಮ್ಮಾನುವೇಲ, ಮಸರಕಲ
'ತಮ್ಮ'ನಿಗಿಂತ 'ಅಕ್ಕ'ನೇ strong ಆಗ್ತಾ ಇದಾಳಲ್ಲ?
* ಆ ಬಸವಣ್ಣನೇ ಅಕ್ಕಳನ್ನು 'ಮಹಾದೇವಿ' ಅಂದಿದ್ದಾನಲ್ಲ.

ಡಿ.ಎಲ್.ನಾಗರಾಜ್, ಹರಪನಹಳ್ಳಿ
ಆಕಾಶ ಮುತ್ತಿಟ್ಟರೆ ಸಾಕು ಭೂಮಿ ಬಸಿರಾಗತ್ತೈತಿ, ನಾನು ಮುತ್ತಿಟ್ಟರೆ?
* ನಿಮ್ಮವಳ ಭೂಮಿಯೇ ಅಲುಗಾಡತ್ತೈತಿ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಅಮ್ಮ ತವರಿಗೆ, ಅಪ್ಪ ಬಾರ್‌ಗೆ, ಮಕ್ಕಳು?
* ಅಂಟ ಮನೆಗೆ.

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ಹೆಂಡತಿ ತವರಿಗೆ ಹೋಗಿದ್ದನ್ನು ನೋಡಿಕೊಂಡು ಗುಂಡ ಮನೆಗೆ ತನ್ನ ಪ್ರೇಯಸಿಯನ್ನು ಕರೆದುಕೊಂಡು ಬಂದ. ಅವಳು ತನ್ನ ಎಲ್ಲಾ ಬಟ್ಟೆಗಳನ್ನು ಬಿಚ್ಚಿ 'ಏನೂ ಸಂಕೋಚ ಪಟ್ಕೋಬೇಡಿ, ನನ್ನನ್ನು ನಿಮ್ಮ ಹೆಂಡ್ತಿ ತರಾನೇ ಟ್ರೀಟ್ ಮಾಡಿ' ಅಂದಳು.

ತಕ್ಷಣ ಗುಂಡ ಅವಳು ಬಿಚ್ಚಿಟ್ಟಿದ್ದ ಬಟ್ಟೆಗಳೆಲ್ಲವನ್ನೂ ತೆಗೆದುಕೊಂಡು ತೊಳೆಯಲು ಶುರು ಮಾಡಿದ.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಬೈರಪ್ಪನಿಗೂ ಬಂಕಿಮಚಂದ್ರ ಚಟರ್ಜಿಗೂ ಸಾಮ್ಯತೆ ಏನು?

ಸೆಪ್ಟಂಬರ್ 20ರ ಸಂಚಿಕೆಯ ನಮ್ಮ ಪ್ರಶ್ನೆ: ಎಚ್.ಡಿ. ಕುಮಾರಸ್ವಾಮಿಯವರು ನನ್ನದು ಮಾನವ ಜಾತಿ, ನನಗೆ ಯಾವ ಜಾತಿಯೂ ಇಲ್ಲವೆಂದಿದ್ದಾರಲ್ಲ?

ನಿಮ್ಮ ಉತ್ತರ: ಅವರದ್ದು 'ಮತ'ಕ್ಕಾಗಿ ಮಲಗುವ ಮತ!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಜರೀನಾ ಬೇಗಂ, ದಾವಣಗೆರೆ

ಚೆನ್ನಾಗಿರುವ ಇನ್ನೆರಡು ಉತ್ತರಗಳು: 1) ಅವರದ್ದು 'ಕೋಜಾ....ತಿ' ಇರಬೇಕು. 2) ನೀತಿ ಇಲ್ಲದವರಿಗೆ ಜಾತಿ ಎಲ್ಲಿ.

ಉತ್ತರ ಕಳುಹಿಸಿರುವವರು: 1) ಪಿ. ಹಸೀನಾ, ಉಜಿರೆ. 2) ಮೋಹನ ರಾಜಮಾನೆ, ರಾಯಬಾಗ

ಬಹುಶಃ ತುಘಲಕ್ ಕೂಡ ಇಂಥ ಹುಚ್ಚು ಕಾಯ್ದೆಯನ್ನು ತಂದಿರಲಿಕ್ಕಿಲ್ಲ. ಆಟೋ ಚಾಲಕರ ವಿರುದ್ಧ ಪೊಲೀಸ್ ನಿರಂಕುಶತೆಗೆ ಬೇರೆ ಉದಾಹರಣೆ ಬೇಕೆ? ಇದು ಬ್ರಿಟಿಷ್ ದಬ್ಬಾಳಿಕೆಗಿಂತಲೂ ಕರಾಳ. ಈ ದೌರ್ಜನ್ಯದ ವಿರುದ್ಧ ನಗರದ ಎಲ್ಲ ಸಂಘಟಿತ ಆಟೋ ಚಾಲಕರು ಸಿಡಿದೆದ್ದಿದ್ದಾರೆ.



ಪೊಲೀಸ್ ವಿರುದ್ಧ ಸಿಡಿದೆದ್ದ ಆಟೋ ಚಾಲಕ!

ಮೊದಲ ತಪ್ಪಿಗೆ ಎರಡರಿಂದ ಐದು ಸಾವಿರ ರೂಪಾಯಿ ದಂಡ! ಎರಡನೇ ತಪ್ಪಿಗೆ ಐದರಿಂದ ಹತ್ತು ಸಾವಿರ ರೂಪಾಯಿ, ತಪ್ಪಿದರೆ ಒಂದು ವರ್ಷದ ಜೈಲು ಶಿಕ್ಷೆ!!

ಇದು ಸಧ್ಯ ರಕ್ತ ಹರಿಸುತ್ತಿರುವ ಬೆಂಗಳೂರಿನ ರೌಡಿಗಳಿಗೆ ಪೊಲೀಸ್ ಕಮಿಷನರ್ ಕೊಟ್ಟ ಎಚ್ಚರಿಕೆ ಎಂದುಕೊಂಡಿದ್ದೀರಾ?

ತಪ್ಪು, ತಪ್ಪು, ಇದು ಬೆಂಗಳೂರಿನ ಆಟೋ ಚಾಲಕರಿಗೆ ಸರ್ಕಾರ ವಿಧಿಸಿದ ಚಂಡಶಾಸನ. ಇದೇ ಸೆಪ್ಟೆಂಬರ್ ಹದಿಮೂರರಂದು ಕರ್ನಾಟಕ ಮೋಟಾರು ವಾಹನ ಕಾಯ್ದೆಗೆ ಸರ್ಕಾರ ತಂದ ತಿದ್ದುಪಡಿಯ ಪ್ರಕಾರ ಆಟೋ ಚಾಲಕನೊಬ್ಬ ಸಣ್ಣಗೆ ಸಿಗ್ನಲ್ ಜಂಪ್ ಮಾಡಿಬಿಟ್ಟರೂ ಪೊಲೀಸ್ ಪೇದೆಯೊಬ್ಬ ಆತನಿಗೆ 2 ರಿಂದ ಐದು ಸಾವಿರ ರೂಪಾಯಿ ದಂಡ ವಿಧಿಸ ಬಹುದು. ಅದೇ ಆಟೋ ಚಾಲಕನನ್ನು ನೋ ಪಾರ್ಕಿಂಗ್ ನಲ್ಲಿ ಯಾರೋ ಪ್ರಯಾಣಿಕನೊಬ್ಬ ಅಡ್ಡಗಟ್ಟಿದನೆಂದರೆ ಮುಗಿದೇ ಹೋಯಿತು. ಅದು ಆತನ ಎರಡನೇ ಅಪರಾಧ. ಅಷ್ಟಕ್ಕೇ ಐದರಿಂದ ಹತ್ತು ಸಾವಿರ ರೂಪಾಯಿ ದಂಡ ಕಕ್ಕಬೇಕು, ತಪ್ಪಿದರೆ ಒಂದು ವರ್ಷ ಜೈಲು ಅನುಭವಿಸಬೇಕು!

ಬಹುಶಃ ತುಘಲಕ್ ಕೂಡ ಇಂಥ ಹುಚ್ಚು ಕಾಯ್ದೆಯನ್ನು ತಂದಿರಲಿಕ್ಕಿಲ್ಲ. ಆಟೋ ಚಾಲಕರ ವಿರುದ್ಧ ಪೊಲೀಸ್ ನಿರಂಕುಶತೆಗೆ ಬೇರೆ ಉದಾಹರಣೆ ಬೇಕೆ? ಇದು ಬ್ರಿಟಿಷ್ ದಬ್ಬಾಳಿಕೆಗಿಂತಲೂ ಕರಾಳ ಎನ್ನುತ್ತಾರೆ ಬೆಂಗಳೂರು ಆಟೋ ಚಾಲಕರ ಸಂಘದ ಅಧ್ಯಕ್ಷ ಮೀನಾಕ್ಷಿ ಸುಂದರಮ್. ಇದರ ವಿರುದ್ಧ ಸೆಪ್ಟೆಂಬರ್ ಇಪ್ಪತ್ಮೂರರಂದು ಅರ್ಧ ಬೆಂಗಳೂರಿನ ಆಟೋ ಚಾಲಕರೆಲ್ಲ ಪ್ರತಿಭಟಿಸಿದ್ದಾರೆ. ಸರ್ಕಾರ, ಪೊಲೀಸು, ಪತ್ರಿಕೆಗಳು, ಪಕ್ಷಗಳು ಇತ್ಯಾದಿ ಯಾರಿಗೂ ಈ ಆಟೋ ಚಾಲಕರ ಹೊಟ್ಟೆ ಸಂಕಟ ಅರ್ಥವಾದಂತಿಲ್ಲ.

ಆಟೋ ಚಾಲಕರೆಂದರೇನೇ ಜನಕ್ಕೆ ರೇಜಿಗೆಯಿದೆ ನಿಜ. ಹಾಗಂಥ ಎಲ್ಲ ಆಟೋ ಡ್ರೈವರ್‌ಗಳೂ ಸಮಾಜಘಾತುಕರಲ್ಲ. ಎಷ್ಟೆಂದರೂ ಅವರು ಮನುಷ್ಯರೇ ತಾನೇ? ಆಟೋ ಚಾಲಕನೊಬ್ಬ ಸಿಕ್ಕಾಪಟ್ಟೆ ಬಾಡಿಗೆ ಕೇಳಿದಾಗ, ಕರೆದಲ್ಲಿಗೆ ಬರದೇ ಹೋದಾಗ, ವಿನಾಕಾರಣ ಜಗಳಕ್ಕೆ ಬಿದ್ದಾಗ ಎಂಥ ವರಿಗೂ ತಲೆ ಕೆಡುತ್ತದೆ. ಆದರೆ ಆಟೋ ರಿಕ್ಷಾಗಳಿಲ್ಲದ ಬೆಂಗಳೂರನ್ನು ಕಲ್ಪಿಸಿಕೊಳ್ಳಲು ಸಾಧ್ಯವೆ?

ರಾ. ಸೋಮನಾಥ್

ಬೆಂಗಳೂರೊಂದರಲ್ಲೇ ಸರಿಸುಮಾರು ಎಪ್ಪತ್ತೆಂಟು ಸಾವಿರ ಆಟೋ ರಿಕ್ಷಾಗಳಿವೆ. ಇದನ್ನು ನಂಬಿಕೊಂಡು ಎರಡು ಲಕ್ಷ ಮಂದಿ ಆಟೋ ಚಾಲಕರು ಬದುಕುತ್ತಿದ್ದಾರೆ. ಇದು ಬೆಂಗಳೂರಿನ ಅಗತ್ಯಕ್ಕಿಂತ ಎರಡು ಪಟ್ಟು ಅಧಿಕ. ಬರಬರುತ್ತ ಆಟೋಗಳಿಗೆ ಗಿರಾಕಿಗಳೇ ಸಿಗುತ್ತಿಲ್ಲ ಎಂಬುದು ಕೂಡ ಅಷ್ಟೇ ಸತ್ಯ. ಏಕೆಂದರೆ ಬಿಎಂಟಿಸಿ ಸಿಕ್ಕಾಪಟ್ಟೆ ಬಸ್ಸುಗಳನ್ನು ಬೀದಿಗಿಳಿಸಿದೆ. ಸಿಟಿ ಟ್ಯಾಕ್ಸಿಗಳಿವೆ. ಸಾಲದ್ದಕ್ಕೆ ಕಾಲ್ ಸೆಂಟರ್‌ಗಳಿಗೆಂದು, ಐಟಿ ಕಂಪನಿಗಳಿಗೆಂದು ಓಡಾಡುವ ಟ್ರಾವೆಲ್ಸ್ ಕಾರುಗಳು ಅಲ್ಲಿನ ಸಿಬ್ಬಂದಿಯನ್ನು ಡ್ರಾಪ್ ಮಾಡಿ ಸುಮ್ಮನೇ ವಾಪಸ್ಸಾಗುವುದಿಲ್ಲ, ಬಸ್‌ಸ್ಟಾಪಿನಲ್ಲಿ ನಿಂತು ಕಾಯುವ ಪ್ರಯಾಣಿಕರನ್ನು ಹತ್ತಿಸಿಕೊಂಡು ಆಟೋ ದರದ ಅರ್ಧ ರೇಟಿಗೆ ಡ್ರಾಪ್ ಮಾಡುತ್ತವೆ. ಬೇರೆಲ್ಲಾ ರೇಟುಗಳಂತೆ ಆಟೋಗಳ ಬಾಡಿಗೆ ಕೂಡ ಹೆಚ್ಚಾಗಿದೆ. ಹೀಗಿರುವಾಗ ಸರ್ಕಾರ ಬೇರೆ ಎಲ್ಲರನ್ನೂ ಬಿಟ್ಟು ಆಟೋಗಳ ವಿರುದ್ಧವೇ ಏಕೆ ದಂಡ ಪ್ರಯೋಗಿಸುತ್ತಿದೆ?

ಮಾರಿ ಕಣ್ಣು ಹೋರಿ ಮ್ಯಾಗೆ ಎಂಬಂತೆ ಸರ್ಕಾರಕ್ಕೆ ಸುಲಭಕ್ಕೆ ಸಿಕ್ಕುವುದು ಈ ಆಟೋ ಚಾಲಕರೆ. ಬೆಂಗಳೂರಿನ ರಸ್ತೆಗಳಲ್ಲಿ ಟ್ರಾಫಿಕ್ ಝಾಮ್ ಆಯಿತೆಂದರೆ ಅದಕ್ಕೆ ಆಟೋಗಳೇ ಕಾರಣ ಎಂದು ಪೊಲೀಸರು ವಾದಿಸುತ್ತಾರೆ.

ಆದರೆ ವಾಸ್ತವವೇ ಬೇರೆ. ಇಲ್ಲಿಗೆ ಮೂರು ವರ್ಷಗಳ ಹಿಂದೆ ಸರಿಸುಮಾರು ಹತ್ತು ಲಕ್ಷದಷ್ಟಿದ್ದ ಕಾರು ಮತ್ತು ಬೈಕುಗಳ ಸಂಖ್ಯೆ ಬರೇ ಮೂರು ವರ್ಷದಿಂದೀಚೆಗೆ ಇಪ್ಪತ್ತು ಲಕ್ಷಕ್ಕೇರಿದೆ. ಶ್ರೀಮಂತರ ಐಷಾರಾಮಿ ಕಾರುಗಳಿಗೆ ಇಲ್ಲಿನ ರಸ್ತೆಗಳು ಬೇಕು. ಅವುಗಳನ್ನು ಪಾರ್ಕಿಂಗ್ ಮಾಡಲು ಮತ್ತೆ ರಸ್ತೆಯ ಜಾಗವೇ ಆಗಬೇಕು. ಐಟಿ-ಬಿಟಿ-ಕಾಲ್‌ಸೆಂಟರ್‌ಗಳಿಗೆಂದು ಮತ್ತೆ ಅಷ್ಟೇ ಸಂಖ್ಯೆಯ ಕಾರುಗಳು ರಸ್ತೆಗಳನ್ನು ಆಕ್ರಮಿಸಿಕೊಳ್ಳುತ್ತವೆ. ಒಮ್ಮೆಯಾದರೂ ಈ ಟ್ರಾಫಿಕ್ ಪೊಲೀಸರು ಇಂಥ ಐಷಾರಾಮಿ ಕಾರುಗಳನ್ನು ಏಕೆ ಅಡ್ಡಗಟ್ಟುವುದಿಲ್ಲ?

ಕೇವಲ ಆಟೋ ರಿಕ್ಷಾಗಳು ಮತ್ತು ಬೈಕುಗಳನ್ನೇ ತಡೆದು ಏಕೆ ಪೀಡಿಸುತ್ತಾರೆ?

ಅದು ಪೊಲೀಸ್ ದೃಷ್ಟಿಕೋನ. ಅವರ ದೃಷ್ಟಿಯ ಆಟೋ ಚಾಲಕರೆಂದರೇನೇ ಹೇಸಿಗೆ. ಬೈಕ್ ಇಟ್ಟ ರ್ರಾರೂ ಶ್ರೀಮಂತರಲ್ಲನಾದ್ದರಿಂದ ಮೇಲಾಧಿಕಾರಿ ಇನ್‌ಫ್ಲುಯೆನ್ಸ್ ಮತ್ತು ರಾಜಕಾರಣಿಗಳ ಫೋನ್ ಕರೆ ಕಾಟವಿಲ್ಲ, ಸೊಲ್ಲೆತ್ತದೇ ದಂಡ ಕಟ್ಟುತ್ತಾರೆ. ಅವರ ಕೋರ್ಟಿನಲ್ಲಿ ಪ್ರಶ್ನಿಸುವಷ್ಟು ತಾಕತ್ತು-ವ್ಯವಧಾನ ಎರಡ ಇಲ್ಲ, ಪೊಲೀಸರ ಇಂಥ ಶ್ರೀಮಂತರ ಪ ಧೋರಣೆಯಿಂದಾಗಿ ಸಹಜವಾಗೇ ಆಟೋ ಚಾಲಕ ಬಲಿಪಶುಗಳಾಗಿದ್ದಾರೆ.

ಈಗ ಮೋಟಾರು ವಾಹನ ಕಾಯ್ದೆಗೆ ಸರ್ಕಾ ತಂದ ತಿದ್ದುಪಡಿ ಬಹುಶಃ ಆಟೋ ಚಾಲಕರ ಧಮನ ಮಾಡುವುದಕ್ಕೆಂದೇ ರೂಪಿಸಿರಬಹುದೇ?

ಇಂಥ ಪೊಲೀಸ್ ಅವಿವೇಕದ ಪರಮಾವಧಿಯ ಪ್ರತ್ಯೇಕ ಆಟೋಲೇನ್. ದೇಶದಲ್ಲೆಲ್ಲೂ ಜಾರಿಯಿಲ್ಲ ವಿಚಿತ್ರ ಪದ್ಧತಿಯಿದು. ಹೆಚ್ಚೆಂದರೆ ಮುಂಬಯಿ, ಚೆನ್ನೈ ಒಂದೋ ಎರಡೋ ಸರ್ಕಲ್‌ಗಳಲ್ಲಿ ಈ ಥರದ ಪ್ರತ್ಯೆ ಆಟೋ ಲೇನ್‌ಗಳಿರಬಹುದೇ ಹೊರತು ಬೆಂಗಳೂ ನಂತೆ ಎಲ್ಲೆಂದರಲ್ಲಿ ಆಟೋಲೈನ್‌ಗಳಿಲ್ಲ. ಈ ಆಟೋ ಲೇನ್‌ನ ಒಳಗೇ ಆಟೋಗಳು ಚಲಿಸಬೇಕು. ಚೂ ಹೊರಬಂದರೂ ವಿಪರೀತ ದಂಡ. ಒಂದೊಮ್ಮೆ ಆಟೋ ಮತ್ತೊಂದು ರಸ್ತೆಗೆ ಬರಬೇಕೆಂದರೆ, ಟರ್ನ್ ಮಾಡಬೇಕೆಂದರೆ ಸಾಧ್ಯವೇ ಇಲ್ಲ, ಮು ಪ್ರಯಾಣಿಕರು ಇಳಿಯುವಂತಿಲ್ಲ.

ತೀರ ಟ್ರಾಫಿಕ್ ಝಾಮ್ ಇರುವೆಡೆ ಇಂ ಆಟೋಲೇನ್‌ಗಳಿದ್ದಿದ್ದೇ ಆದರೆ ಅದಕ್ಕೊಂದು ಸಮರ್ಥ ಯಿರುತ್ತಿತ್ತು. ಆದರೆ ಟ್ರಾಫಿಕ್ಕೇ ಇಲ್ಲದ ರಸ್ತೆಗಳಲ್ಲ ಆಟೋಲೇನ್ ಮಾಡಿದ್ದಾರೆಂದರೆ ಏನರ್ಥ?

ವಾಸ್ತವವೇನೆಂದರೆ ಪ್ರಪಂಚದ ಬೇರೆ ಬೇ ನಗರಗಳಲ್ಲಿ ಸಿಟಿ ಬಸ್ಸುಗಳಿಗೆ ಅಂತಲೇ ಪ್ರತ್ಯೆ ಲೇನುಗಳಿವೆ. ಏಕೆಂದರೆ ಅದು ಸಾರ್ವಜನಿಕ ಸಾಗ ಆದರೆ ಬೆಂಗಳೂರಿನಲ್ಲಿ ಹಾಗಲ್ಲ; ಕೇವಲ ಮೂ ಮಂದಿ ಓಡಾಡುವ ಆಟೋಗಳಿಗೆ ಲೇನಿನ ಶಿಕ್ಷೆ.

ಆಟೋಗಳಿಗೆ ಹಿಂಸೆ ಕೊಟ್ಟಷ್ಟೂ ಬೆಂಗಳೂರಿ ಟ್ರಾಫಿಕ್ಕು ಸರಿಹೋಗುತ್ತದೆ ಎಂಬ ವಿಕೃತ ಪೊಲೀ ತರ್ಕಕ್ಕೆ ಮೂಲಕಾರಣ ಅಡಿಷನಲ್ ಪೊಲೀ ಕಮಿಷನರ್ ಎಂ.ಎನ್. ರೆಡ್ಡಿ. ಈ ಪುಣ್ಯಾತ್ಮನಿಗ ಬೆಂಗಳೂರಿನ ಟ್ರಾಫಿಕ್ಕಿಗೂ ಯಾವುದೋ ಬಾದರಾಯ ಸಂಬಂಧವಿರುವಂತಿದೆ. ಈತನ ಮಾತು ಕೇಳಿಕೊಂಡ ಸರ್ಕಾರ ಆಟೋ ಚಾಲಕರ ವಿರುದ್ಧ ದಂಡ ಪ್ರಯೋ ಗಿಸಿದೆ.


ಹಕೀಕತ್ತೇನೆಂದರೆ ಆಟೋ ಚಾಲಕರ ದುರ್ವರ್ತ ಮತ್ತು ಸುಲಿಗೆಗೆ ಬೇರೆಯದೇ ಕಾರಣವಿದೆ. ಅದ ಟ್ರಾಫಿಕ್ ಪೊಲೀಸ್ ಭ್ರಷ್ಟಾಚಾರ. ಮೆಜೆಸ್ಟಿ ಬಸ್‌ಸ್ಟಾಂಡ್, ಸಿಟಿ ರೈಲ್ವೇ ಸ್ಟೇಷನ್, ಕಂಟೋನ್ಮೆಂಟ ರೈಲು ನಿಲ್ದಾಣ ಇತ್ಯಾದಿಗಳಲ್ಲಿ ಏನು ಆಟೋ ಪ್ರೀಪೇ ವ್ಯವಸ್ಥೆಯಿದೆಯೋ ಅದನ್ನು ನಿಭಾಯಿಸುವುದೂ ಟ್ರಾಫಿ ಪೊಲೀಸರೇ. ಇಲ್ಲಿ ಪ್ರತಿ ಆಟೋ ಚಾಲಕನೊಬ್ಬ ಒಂದ ಟ್ರಿಪ್ಪಿಗೆ ಟ್ರಾಫಿಕ್ ಪೇದೆಗೆಂದು ಮೂವತ್ತು ರೂಪಾ ಕೊಡಬೇಕು. ಏಕೆಂದರೆ ಅಧಿಕ ಬಾಡಿಗೆ ತೆರು ಗಿರಾಕಿಯನ್ನು ಆ ಪೇದೆ ಈತನ ಆಟೋಕ್ಕೇ ಕರೆತಂ ಕೂರಿಸುತ್ತಾನೆ. ಮೆಜೆಸ್ಟಿಕ್‌ನಿಂದ ಚಿಕ್ಕಪೇಟೆಗೆ ಬ ಹತ್ತು ರೂಪಾಯಿ ಬಾಡಿಗೆಯಾದರೂ ಟ್ರಾಫಿಕ್ ಪೇ ಅದಕ್ಕೆ ನೂರಿಪ್ಪತ್ತು ರೂಪಾಯಿ ಎಂದಿರುತ್ತಾನೆ. ತ ಕಡೆಯವನೇ ಆದ ಆಟೋ ಚಾಲಕನನ್ನು ಜೊ ಕಳಿಸುತ್ತಾನೆ. ಅದರಲ್ಲಿ 60 ರೂಪಾಯಿ ಪೇದೆಯ ಸೇರುತ್ತದೆ.

ಇದು ಆವತ್ತಿನಿಂದಲೂ ಬೆಂಗಳೂರಿನಲ್ಲಿ ನಡೆ ಬಂದಿದೆ. ಚಿಕ್ಕಪೇಟೆಯ ಲಾಡ್ಜುಗಳಿಗೆ ವೇಶ್ಯೆಯರ ಆಟೋಗಳಲ್ಲಿ ತಂದು ಬಿಡುವುದು, ವೇಶ್ಯೆಯರಿ ಗಿರಾಕಿಗಳನ್ನು ಕಲ್ಪಿಸುವ ಮತ್ತೊಂದು ಆಟೋ ಗ್ಯಾಂಗಿ ಕಲಾಸಿಪಾಳ್ಯದ ಸಪೋಟಾ ಮಂಡಿ ಮತ್ತು ತರಕಾ ಮಂಡಿಗಳಿಂದ ವ್ಯವಸ್ಥಿತವಾಗಿ ಓವರ್ ಲೋಡಿಂ ಮಾಡುವ ಆಟೋ ತಂಡಗಳಿವೆ. ಇನ್ನು ಕಲಾಸಿಪಾ ದಿಂದ ಗೋರಿಪಾಳ್ಯಕ್ಕೆ ಕಮ್ಮಿ ದರಕ್ಕೆ ಸಿಕ್ಕಾಪಟ್ಟೆ ಪ್ರಯಾ ಣಿಕರನ್ನು ಹೊತ್ತೊಯ್ಯುವ ಸರಿಸುಮಾರು ಐವ ಆಟೋ ರಿಕ್ಷಾಗಳಿವೆ. ವಿಜಯನಗರ ಬಸ್‌ಸ್ಟಾಂಡ್‌ನಿಂ ಮೂಡಲಪಾಳ್ಯಕ್ಕೆ ಇದೇ ರೀತಿ ಏಳೆಂಟು ಮಂದಿಯ ಕೂಡ್ರಿಸಿಕೊಂಡು ಆಟೋ ಓಡಿಸುವುದು ಮತ್ತೊಂದ ಧಂದೆ. ಪೊಲೀಸರು ಇವರ್‍ಯಾರನ್ನೂ ಮುಟ್ಟುವುದಿ ಏಕೆಂದರೆ ತಿಂಗಳಿಗೆ ಇಂತಿಷ್ಟು ಮಾಮೂ ಕೊಡಬೇಕೆಂದು ಮೊದಲೇ ಡೀಲು ಕುದಿರಿರುತ್ತದೆ.

ಸಾರ್ವಜನಿಕರಿಂದ ಸಿಕ್ಕಾಪಟ್ಟೆ ದುಡ್ಡು ಸುಲಿಯು ವುದೂ ಇಂಥ ಆಟೋ ಡ್ರೈವರ್‌ಗಳೇ. ಅವರ್‍ಯಾರಿಗ ಪೊಲೀಸ್ ಕಾಟವಿಲ್ಲ. ಪೊಲೀಸರ ಕೆಂಗಣ್ಣಿ ಬೀಳುವುದೇನಿದ್ದರೂ ಈ ಥರದ ಯಾವುದೇ ಅನೈ ಚಟುವಟಿಕೆಗಳಿಗೆ ಕೈಜೋಡಿಸದ ನಿಷ್ಪಾಪಿ ಆಟೋ

ಪೊಲೀಸ್ ಕ್ರೌರ್ಯಕ್ಕೆ ಕೊನೆಯುಂಟೆ?


ಯಾವುದೇ ಆಟೋ ಚಾಲಕನೊಬ್ಬ ಒಮ್ಮೆ ಪೊಲೀಸರ ಕೈಗೆ ಸಿಕ್ಕನೆಂದರೆ ಎಲ್ಲಾ ಸರಿಯಿದ್ದರೂ ಕೊನೆಗೆ ಪ್ಯಾಂಟು ಗಲೀಜಾಗಿತ್ತೆಂದು ಕೇಸು ಹಾಕಿದ ಉದಾಹರಣೆಗಳಿವೆ. ಈ ಪೈಕಿ ಲಗ್ಗರೆಯ ರಾಘವೇಂದ್ರ ಪ್ರಭು ಎಂಬ ಆಟೋ ಚಾಲಕನನ್ನು ಮಲ್ಲೇಶ್ವರಂ ಪೊಲೀಸರು ಹಿಡಿದು ಎಲ್ಲಾ ಸರಿಯಾಗಿದ್ದರೂ ಕೊನೆಗೆ ಪೊಲ್ಯುಷನ್ ಚೆಸ್ಟ್ ಮಾಡಿಸಿಲ್ಲ ಎಂಬ ಕುಂಟು ನೆಪವೊಡ್ಡಿ ಐನೂರು ರೂಪಾಯಿ ಕಿತ್ತರು. ತಂಗಿ ವಿಧವೆ. ಆಕೆಗೆ ಇಬ್ಬರು ಮಕ್ಕಳು. ವಯಸ್ಸಾದ ತಾಯಿ. ಈತನ ಹೆಂಡತಿ, ಮಗು, ಎಲ್ಲವನ್ನೂ ಆಟೋ ನಂಬಿಕೊಂಡೇ ಸಾಕುತ್ತಿದ್ದಾನೆ ರಾಘವೇಂದ್ರ ಪ್ರಭು. ಕೇವಲ ಮೂರು ತಿಂಗಳಲ್ಲಿ ಈತ ಎರಡೂವರೆ ಸಾವಿರ ರೂಪಾಯಿ ಕಟ್ಟಿದ್ದಾನೆ.



ಪೊಲೀಸರ ವಿರುದ್ಧದ ಪ್ರತಿಭಟನೆಯಲ್ಲಿ ಆಟೋ ಚಾಲಕರು

ನಾರಾಯಣಗೌಡ ಎಂಬ ನಾಗಪುರದ ಆಟೋ ಡ್ರೈವರ್‌ನ ಕತೆ ಇನ್ನೂ ಭೀಕರ. ಆತ ಮೆಜೆಸ್ಟಿಕ್ ಥಿಯೇಟರ್ ಬಳಿ ಬರುತ್ತಿದ್ದಾಗ ಪ್ರಯಾಣಿಕನ ಚೀಲವೊಂದು ಬಿತ್ತು, ಆಟೋ ನಿಧಾನ ಮಾಡಿದ. ಅಷ್ಟೇ ಆರೇಳು ಮಂದಿ ಪೊಲೀಸರು ಆತನನ್ನು ಠಾಣೆಗೆ ಎಳೆದೊಯ್ದು ನೋ ಪಾರ್ಕಿಂಗ್‌ನಲ್ಲಿ ಗಾಡಿ ನಿಲ್ಲಿಸ್ತೀಯಾ? ಎಂದಿದ್ದೇ ಯಕ್ಕಾಮಕ್ಕಾ ಹೊಡೆದರು. ಅದೇ ಹೊತ್ತಿಗೆ ಬಂದ ಟ್ರಾಫಿಕ್ ಇನ್ಸ್‌ಪೆಕ್ಟರ್ ಈತನ ಜೇಬಿನಲ್ಲಿದ್ದ ಆರು ಸಾವಿರ ರೂಪಾಯಿ ಕಿತ್ತುಕೊಂಡ. ಈ ಬಗ್ಗೆ ಡಿಸಿಪಿಗೆ ದೂರು ಕೊಟ್ಟರೆ ಆಟೋ ಚಾಲಕನ ಜೇಬಲ್ಲಿ ಆರು ಸಾವಿರ ರೂಪಾಯಿ ಹೇಗೆ ಬಂತು? ಎನ್ನುತ್ತಿದ್ದಾರೆ. ಇದು ನಡೆದದ್ದು 2006 ರ ಮೇ ಇಪ್ಪತ್ನಾಲ್ಕರಂದು. ಈ ಬಗ್ಗೆ ಆಟೋಚಾಲಕರು ಪ್ರತಿಭಟಿಸಿದ್ದಾರೆ. ಈತನಕ ಈ ಬಗ್ಗೆ ಸಣ್ಣದೊಂದು ವಿಚಾರಣೆ ನಡೆಸಿಲ್ಲ.

ಬನಶಂಕರಿಯ ವಿಶ್ವನಾಥ್ ಎಂಬ ಆಟೋ ಚಾಲಕನಿಗೆ ಐನೂರು ರೂಪಾಯಿ ದಂಡ ವಿಧಿಸಿದ ಪೊಲೀಸರು ಆತನಲ್ಲಿ ದುಡ್ಡಿಲ್ಲದೇ ಹೋದಾಗ ಆಟೋ ಕಿತ್ತಿಟ್ಟುಕೊಂಡರು. ಸರಿ, ಪೊಲೀಸರು ಇದೇ ಮಾನದಂಡವನ್ನು ಲೈಸೆನ್ಸಿಲ್ಲದೇ ಮಾರ್ವಾಡಿಗಳ ಮಕ್ಕಳಿಗೇಕೆ ವಿಧಿಸುವುದಿಲ್ಲ? ಐಎಎಸ್ ಮತ್ತು ಭಾರತಿನಗರದ ಮಾಜಿ ಶಾಸಕ ಅಲೆಕ್ಸಾಂಡರ್ ಮಕ್ಕಳು ಬ್ರಿಗೇಡ್ ರಸ್ತೆಯಲ್ಲೇ ತೆರೆದ ಜೀಪಿನಲ್ಲಿ ಬಿಯರ್ ಕುಡಿಯುತ್ತಾ ಗಾಡಿ ಓಡಿಸುತ್ತಿದ್ದರು. ಅವರನ್ನು ಯಾರೂ ಮುಟ್ಟಲಿಲ್ಲ. ಇನ್ನು ಎಷ್ಟು ಲಾರಿಗಳ ಪೊಲ್ಯೂಷನ್ ಅನ್ನು ಪೊಲೀಸರು ಚೆಕ್ ಮಾಡುತ್ತಿದ್ದಾರೆ? ದೊಡ್ಡವರ ಮಕ್ಕಳ ಐಷಾರಾಮಿ ಕಾರುಗಳಿಗೇಕೆ ಯಾವುದೇ ಟ್ರಾಫಿಕ್ ನಿಬಂಧನೆಯಿಲ್ಲ? ಎಷ್ಟು ಬಿಎಂಟಿಸಿ ಬಸ್ಸುಗಳು ಆಕ್ಸಿಡೆಂಟ್ ಮಾಡಿಲ್ಲ? ಅವ್ಯಾವಕ್ಕೂ ಇಲ್ಲದ ತಲೆದಂಡ ಆಟೋ ಚಾಲಕರಿಗೇ ಏಕೆ?



ಪ್ರತಿಭಟನೆಯಲ್ಲಿ ಮಾತನಾಡುತ್ತಿರುವ ಉಪಾಧ್ಯಕ್ಷ ಉಮೇಶ್

ಚಾಲಕರು. ಅಂಥವರಿಗೇ ಸಿಕ್ಕಾಪಟ್ಟೆ ದಂಡ ವಿಧಿಸಲಾಗುತ್ತದೆ. ಈಗ ಹಿಂದಿನಂತೆ ಪ್ರತಿನಿತ್ಯ ಆಯಿಲ್‌ಗೆ ಎಂದೇ 70 ರೂ. ಕೈಬಿಡುತ್ತದೆ. ಗ್ಯಾಸಿಗೆ ಅಂತಲೇ 200 ರೂ. ಎತ್ತಿಡಬೇಕು. ಆಟೋ ಮಾಲೀಕನ ಬಾಡಿಗೆ ಅಂತ ಮತ್ತೆ ನೂರೈವತ್ತು ರೂಪಾಯಿ ಕೊಡಬೇಕು. ಇಷ್ಟೆಲ್ಲವನ್ನೂ ಕಳೆದರೆ ಕೊನೆಗೆ ಆಟೋ ಚಾಲಕ ಮನೆಗೊಯ್ಯುವುದು ಕೇವಲ ನೂರೋ ನೂರೈವತ್ತೋ ರೂಪಾಯಿಯನ್ನಷ್ಟೇ.

ಇದರಲ್ಲಿ ಮನೆಬಾಡಿಗೆ, ಮಕ್ಕಳ ಓದು, ರೇಷನ್ನು ಅಂತ ಎಲ್ಲವನ್ನೂ ನಿಭಾಯಿಸಬೇಕು. ಬರಬರುತ್ತ ಬೆಂಗಳೂರಿನಲ್ಲಿ ಬಡವ ಬದುಕುವುದೇ ಕಷ್ಟವಾಗಿರುವಾಗ ಬೇರೆಲ್ಲಾ ಶ್ರೀಮಂತರ ಕಾರನ್ನು ಬಿಟ್ಟು ಕೇವಲ ಆಟೋ ಚಾಲಕನಿಗೆ ಏಕೆ ಈ ಪಾಟಿ ದಂಡ ಮತ್ತು ಜೈಲು ಶಿಕ್ಷೆ?

ಕ್ರಮೇಣ ಆಟೋಗಳನ್ನು ಬೆಂಗಳೂರು ನಗರದಿಂದಲೇ ಹೊರಹಾಕಲು ಸರ್ಕಾರ ಯೋಚಿಸುತ್ತಿದೆಯೆ? ಮುಂದೊಮ್ಮೆ ಐಟಿ-ಬಿಟಿಗಳ ತೃಪ್ತಿಗೆಂದು ಬೆಂಗಳೂರಿನಲ್ಲಿ ಕೇವಲ ಟ್ಯಾಕ್ಸಿಗಳನ್ನಷ್ಟೇ ಓಡಿಸುವ ಷಡ್ಯಂತ್ರವೊಂದು ರೂಪುಗೊಳ್ಳುತ್ತಿದೆಯೆ?

ಅನಿಷ್ಟಕ್ಕೆಲ್ಲಾ ಶನೇಶ್ವರನೇ ಕಾರಣ ಎಂಬಂತೆ ಆಟೋ ಚಾಲಕರನ್ನಷ್ಟೇ ಬಲಿ ಹಾಕುವ ಈ ಚಂಡಶಾಸನವನ್ನು ಪ್ರತಿಯೊಬ್ಬರೂ ಪ್ರತಿಭಟಿಸಲೇಬೇಕಿದೆ. ●



ಜಮೀರ್‌ನ ಫ್ಯಾಕ್ಟರಿ ಬಸ್ಸುಗಳ ಹಾವಳಿ

ಆಟೋ ಡ್ರೈವರ್ಸ್ ಯೂನಿಯನ್ನಿನ ಅಧ್ಯಕ್ಷ ಮೀನಾಕ್ಷಿ ಸುಂದರಂ ಮತ್ತು ಪ್ರಧಾನ ಕಾರ್ಯದರ್ಶಿ ಬಿ.ವಿ. ರಾಘವೇಂದ್ರರ ಪ್ರಕಾರ ಬೆಂಗಳೂರಿನ ಟ್ರಾಫಿಕ್ ಒತ್ತಡಕ್ಕೆ ಆಟೋಗಳಷ್ಟೇ ಕಾರಣವಲ್ಲ, ಬಹುತೇಕ ಶಾಪಿಂಗ್ ಕಾಂಪ್ಲೆಕ್ಸ್ ಮತ್ತು ಅಪಾರ್ಟ್‌ಮೆಂಟುಗಳು ತಮ್ಮ ಸೆಲ್ಲಾರ್‌ನಲ್ಲಿ ಪಾರ್ಕಿಂಗಿಗೆಂದು ಬಿಟ್ಟ ಜಾಗವನ್ನು ಮಳಿಗೆಗಳನ್ನಾಗಿ ಮಾಡಿರುವುದೂ ಒಂದು ಕಾರಣ. ಇದರಿಂದ ಎಲ್ಲಾ ವಾಹನಗಳು ರಸ್ತೆಗಳನ್ನಾಕ್ರಮಿಸುತ್ತವೆ.

ಇತ್ತೀಚೆಗೆ ಬಿಎಂಟಿಸಿ ಖಾಸಗಿ ಬಸ್ಸುಗಳನ್ನು ಕಾಂಟ್ರ್ಯಾಕ್ಟ್ ಆಧಾರದ ಮೇಲೆ ಪಡೆದು ಅದರ ಡ್ರೈವರ್‌ಗಳಿಗೆ ದಿನಕ್ಕೆ ಇಂತಿಷ್ಟೇ ಟ್ರಿಪ್ ಹೊಡೆಯಬೇಕೆಂದು ಷರತ್ತು ವಿಧಿಸಿರುವುದೂ ಮತ್ತೊಂದು ಕಾರಣ. ಮೊದಲೇ ವಿಪರೀತ ಟ್ರಾಫಿಕ್. ಬಿಎಂಟಿಸಿ ಬಸ್ಸುಗಳು ನಿಗದಿತ ವೇಳೆಗಿಂತ ಮುಂಚೆ ಮುಟ್ಟಲು ಸಾಧ್ಯವೇ ಇಲ್ಲವಾದ್ದರಿಂದ ಅದರ ಡ್ರೈವರ್‌ಗಳು ಯದ್ವಾತದ್ವಾ ಗಾಡಿ ಓಡಿಸಿ ಸಂಭವಿಸುವ ಅಪಘಾತಗಳೇ ಹೆಚ್ಚು. ಸರ್ಕಾರವೇ ವಿಪರೀತ ಆಟೋ ಪರ್ಮಿಟ್‌ಗಳನ್ನು ಮಂಜೂರು ಮಾಡಿರುವುದು ದೊಡ್ಡ ತಪ್ಪು. ಅದಕ್ಕೆ ಆಟೋ ಚಾಲಕರನ್ನು ಬಲಿ ಹಾಕುವುದೂ ನ್ಯಾಯವೇ? ಆಟೋ ಚಾಲಕರಿಂದ ದಂಡವಾಗಿ ವರ್ಷಕ್ಕೆ ಹತ್ತು ಕೋಟಿ ಸುಲಿಯುವ ಸರ್ಕಾರ ವಿಪ್ರೋ, ಇನ್‌ಫೋಸಿಸ್, ಬಯೋಕಾನ್ ಗಳಿಗೇಕೆ ತೆರಿಗೆ ವಿನಾಯ್ತಿ ಕೊಡುತ್ತದೆ? ಅವರಿಗೇಕೆ ಬಡವರ ಜಮೀನು ಕಿತ್ತು ಕೊಡುತ್ತದೆ?



ಪ್ರಧಾನ ಕಾರ್ಯದರ್ಶಿ ಬಿ.ವಿ. ರಾಘವೇಂದ್ರ

ಬಹುತೇಕ ಖಾಸಗಿ ಕಂಪೆನಿಗಳಿಗೆ ಓಡುವ ಬಸ್ಸುಗಳೆಲ್ಲ ಚಾಮರಾಜಪೇಟೆ ಶಾಸಕ ಜಮೀರ್ ಅಹ್ಮದ್‌ರವರಿಗೆ ಸೇರಿದ್ದು, ಅದರ ಡ್ರೈವರ್‌ಗಳಿಗೆ ಆತ 1200 ಕ್ಕಿಂತಲೂ ಹೆಚ್ಚಿಗೆ ಸಂಬಳ ಕೊಡುವುದಿಲ್ಲ, ಅಂತಹ ಬಸ್ ಡ್ರೈವರ್‌ಗಳೇ ಬಿಎಂಟಿಸಿ ಬಸ್ ನಿಲ್ದಾಣಗಳಿಂದ ಪ್ರಯಾಣಿಕರನ್ನು ಪಿಕ್‌ಅಪ್ ಮಾಡುತ್ತಾರೆ. ಪೊಲೀಸರು ಅವರನ್ನೇಕೆ ಮುಟ್ಟುವುದಿಲ್ಲ? ರಸ್ತೆಗಳ ಕಾಮಗಾರಿ ಟೆಂಡರ್, ಫ್ಲೈ ಓವರ್ ಟೆಂಡರ್, ಮೆಟ್ರೋ ರೈಲು ಟೆಂಡರ್ ಬಗ್ಗೆ ಸರ್ಕಾರಕ್ಕೆ ಇರುವ ಆಸಕ್ತಿ ಆಟೋ ಚಾಲಕರನ್ನು ತಲೆಬೇತಿಗೊಳಿಸುವತ್ತ ಏಕಿಲ್ಲ? ಆಟೋ ಚಾಲಕರಿಗೇಕೆ ಮನೆ, ಸಾಲ, ರಿಯಾಯಿತಿ ಕೊಡುವುದಿಲ್ಲ?


"ರಿಯಲಿ ನೂವು ಆರ್ಯ ವೈಶ್ಯ ಕುಲತಿಲುಕುಡು"



ನಮ್ಮ ಒಳ ಮೀಸಲಾತಿ ಹರಿಕಾರ ದೇವೇಗೌಡರು ಹಾವನೂರು ಸಾಯುವವರೆಗೂ ಕಾದಿದ್ದು ಅವರು ತೀರಿಕೊಂಡ ಕೂಡಲೇ "ಒಳಮೀಸಲು ವಿವರವನ್ನು ನಾನು ಪಡೆದಿದ್ದೇ ಹಾವನೂರರಿಂದ" ಎಂದು ಒಂದು ಸಣ್ಣ ಬಾಂಬ್ ಹಾಕಿದ್ದಾರಂತಲ್ಲಾ, ಈ ಬಾಂಬಿಗೆ ಹೆದರಿ ಬೆಚ್ಚಿದ ಅಹಿಂದಗಳು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸುತ್ತ "ಹಾಗಾದರೆ ಸ್ವಾಮಿ ತಾವು ಮುಖ್ಯಮಂತ್ರಿಗಳಾಗಿದ್ದಾಗ ವೆಂಕಟಸ್ವಾಮಿ ಅಥವಾ ಚಿನ್ನಪ್ಪರೆಡ್ಡಿ ಯಾವುದಾದರೂ ಒಂದು ವರದಿಯನ್ನು ಜಾರಿಮಾಡಲಿಲ್ಲವೇಕೆ? ಇಡೀ ಹಾವನೂರು ವರದಿಯನ್ನು ತಾವು ಮೆಚ್ಚಿ ಮಾತನಾಡಿದ್ದು ಇತಿಹಾಸದಲ್ಲೆಲ್ಲೂ ದಾಖಲಾಗಿಲ್ಲವಲ್ಲಾ? ತಾವು 2 ಎ ವರ್ಗ ರಚಿಸಿದಾಗ ಸಂಪುಟ ಉಪಸಮಿತಿಯಲ್ಲಿದ್ದವರು ಸಿಂಧ್ಯಾ, ಪ್ರಕಾಶ್, ಸಿದ್ಧರಾಮಯ್ಯ, ಮಂಜುನಾಥ್ ಎಂದು ಒಳ ಮೀಸಲಿನ ಮರ್ಮ ವಿವರಿಸುವ ಸಮಯದಲ್ಲಿ ತಮ್ಮ ಮಕ್ಕಳಿನ್ನು ಚಿಕ್ಕವರಲ್ಲವೆ? ದೇವರಾಜ ಅರಸು, ಹಾವನೂರ್ ಇಬ್ಬರೂ ಸತ್ತ ಮೇಲೆ ಅವರು ತಮಗೆ ಆತ್ಮೀಯರಾದ ಗುಟ್ಟೇನು? ತಮ್ಮ ರಾಜಕೀಯದ ಬದುಕಿನುದ್ದಕ್ಕೂ ದೇವರಾಜ ಅರಸರನ್ನು ವಿರೋಧಿಸಿ, ಆ ಗುಂಡೂರಾಯನನ್ನು ಊರಿಗೆ ಕರೆದು ಮೆರವಣಿಗೆ ಮಾಡಿಸಿ, ವಾದ್ಯದವರ ಜೊತೆ ನೀವು ಹೋದಿರಲ್ಲಾ? 'ಗುಂ' ತರದ ಬಫೂನ್ ಮೆಚ್ಚಿಕೊಂಡ ನೀವು ಪ್ರಸ್ತುತ ಸರ್ಕಾರವನ್ನು ಕೊಂಡಾಡುವುದರಲ್ಲೂ ನಿಮ್ಮ ಅಭ್ಯುದಯ ಮತ್ತು ಅಭಿರುಚಿಗಳು ಡಾಳಾಗಿವೆ" ಎಂದು ಅಹಿಂದಗಳು ಆಡಿಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!

* * * * * *

ಇತ್ತ ಯಾವ ಕಡೆಯಿಂದ ನೋಡಿದರೂ ಬಂಗಾರಿಯ ಅವತಾರವೇ ಅರ್ಥವಾಗುತ್ತಿಲ್ಲವಂತಲ್ಲಾ, ಈ ಸರ್ಕಾರ ಈಗ ಬೀಳುತ್ತೆ, ಅದಕ್ಕಿಂತ ಮೊದಲು ಕೇಂದ್ರ ಸರ್ಕಾರ ಬಿದ್ದು ಚಿಂದಿಯಾಗಿ ಹೋಗುತ್ತೆ ಎಂದು ಹೇಳಿಕೊಂಡು ತಿರುಗುತ್ತಿರುವ 'ಬಂ'ರವರನ್ನು "ಬಿದ್ದರೆ ತಾವೇನು ಮಾಡುವಂತಿದ್ದೀರಿ?" ಎಂದು ಕೇಳಿದರೆ ಅವರು ಒಳಗೇ ಮುಗುಮ್ಮಾಗಿ ನಗುತ್ತಾರಂತಲ್ಲಾ, ಈ ನಗುವಿನ ಅರ್ಥ ಕೇವಲ ಜೆಡಿಎಸ್‌ನವರಿಗೆ ಮಾತ್ರ ಅರ್ಥವಾಗಿ, "ಆ ಧಿಮಾಕಿನ ಸಿದ್ಧರಾಮಯ್ಯ ಹೋದರೇನು, ನಮ್ಮ ಬಂಗಾರಪ್ಪನವರಿಲ್ಲವೆ?" ಎಂದು ಧೈರ್ಯದಿಂದಲೇ ಇರುವುದನ್ನು ನೋಡಿದ ಕಾಂಗೈಗಳು ಇನ್ನೂ ಕಂಗಾಲಾಗಿವೆಯಂತಲ್ಲಾ, "ದಿಢೀರನೆ ಚುನಾವಣೆ ಬಂದರೆ ನಾನೇನು ಹೆದರಲ್ಲಾ, ನಮ್ಮ ಅಭ್ಯರ್ಥಿಗಳ ಇಡೀ ಚುನಾವಣೆ ಖರ್ಚನ್ನು ಮುಲಾಯಂಸಿಂಗ್ ಯಾದವ್ ಮತ್ತು ದೇವೇಗೌಡರ ಕುಟುಂಬ ನೋಡಿಕೊಳ್ಳುತ್ತೆ. ಇಂದೇ ಚುನಾವಣೆ ಘೋಷಣೆಯಾದರೂ ನಮಗಂತೂ ಹಬ್ಬ" ಎಂದು 'ಬಂ' ಹೇಳಿದ ಕೂಡಲೇ ಅವರ ಇಡೀ ಪಟಾಲಂ ಮಾರಿಹಬ್ಬಕ್ಕೆ ಸಿದ್ಧಗೊಂಡ ಮಾಂಸ ಭಕ್ಷಕರಂತೆ ಕುಣಿದಾಡಿದರಂತಲ್ಲಾ, ಥೂತ್ತೇರಿ!!



* * * * * *

ನಮ್ಮ ಕನ್ನಡ ನಾಡಿನ ಕಟ್ಟಾಳು ಹುಟ್ಟು ಹೋರಾಟಗಾರ ಸೀಮೆಎಣ್ಣೆ ಶಂಕರಮೂರ್ತಿ, ಟಿಪ್ಪು ಸುಲ್ತಾನ್ ಎಂಬುವನಿಂದ ಕನ್ನಡಕ್ಕೆ ಆಗಬಾರದ ಅನ್ಯಾಯವಾಗಿ ಆ ಕಾರಣಕ್ಕೆ ಇಂದು ಕರ್ನಾಟಕದಲ್ಲಿ ಕನ್ನಡಕ್ಕೆ ಇಂತಹ ದುಸ್ಥಿತಿ ಬಂದಿದೆಯೆಂದು ದುಃಖಿಸುತ್ತ ಕುಳಿತಿದ್ದಾರಂತಲ್ಲಾ, ಇಂತಹ ಕನ್ನಡದ ಕಟ್ಟಾಳುವನ್ನು ಕರ್ನಾಟಕ ಈವರೆಗೆ ಕಂಡಿಲ್ಲವೆಂದು ಹಾದಿಬೀದಿಯಲ್ಲಿ ಜನ ಆಡಿಕೊಳ್ಳುತ್ತಿರುವುದನ್ನು ನೋಡಿ, ನನಗೂ ಮಾತನಾಡಿಸಬೇಕೆಂದು ಕುತೂಹಲವಾಯ್ತು. ಕೂಡಲೇ ಮಂಜುನಾಥ ಶೆಟ್ಟಿ ಎಂಬುವನಿಂದ ಶಂಕರಮೂರ್ತಿ ಫೋನ್ ನಂಬರ್ ಪಡೆದು ಫೋನ್ ಮಾಡಿದೆ.

"ಹಲೋ, ಹಲೋ, ಶಂಕರಮೂರ್ತಿಯವರಾ?"

"ಅವನು, ನೂವು ಎವರು?"

ಓಹ್, ಓ, ಎಡವಟ್ಟಾಯ್ತು, ನಾನು ಶಂಕರಮೂರ್ತಿಯವರಾ ಎಂದದ್ದು ಶಂಕರಮೂರ್ತಿಗಾರು ಆಗಿ ಕೇಳಿದ್ದರಿಂದ ಕನ್ನಡದ ಕಟ್ಟಾಳು ತೆಲುಗಲ್ಲೇ ಮಾತನಾಡಿಸಿದ್ದರು.

"ಎವರ ನೂವು?"

"ನಾನು ಯಾಹೂ ಶೆಟ್ಟಿ."

"ಏಮಪ್ಪಾ, ಬಾಗುಂಡಾವಾ?"

"ಅವನು, ಬಾಗುಂಡಾನು. ಮೀರು ಬಾಗುಂಡಾವಾ?"

"ಅವನು ಏಮಿ ಚೇಸ್ತುಂಡಾವು?"

ಇಷ್ಟರಲ್ಲಿ ನನ್ನ ತೆಲುಗು ಸಾಮಗ್ರಿ ಖಾಲಿಯಾಗಿತ್ತು, ಆದ್ದರಿಂದ ಕನ್ನಡಮ್ಮನ ಮಡಿಲಿಂದಲೇ ಮಾತಾಡಬೇಕಾಯ್ತು.

"ಕಿರಾಣಿ ಅಂಗಡಿ ನೋಡಿಕೊಳ್ತಾಯಿದ್ದಿನಿ, ಹಾಗೆ ಆರೆಸೆಸ್ಸ್ ಸಂಚಾಲಕ ಆಗಿದ್ದಿನಿ."

"ಚಾಲಾ ಮಂಚಿದಿ. ನೇನು ಅಂಗಡಿ ಪೈಯಿನಾ ವುನ್ನಿಂಟೆ ವ್ಯಾಪಾರಮು ಚೇಸ್ತವುಂಡಾವಲಸುಂಡ. ಆರೆಸೆಸೆನಿಂಕ ಬಜೆಪಿಕಿ ಪೋಯಿ, ಈರೊಜುಲ್ಲೊ ರಾಜಕಾರಣಂ ಚೇಸಿಂದಾನಕಿ ಈನಾಡು ಮಂತ್ರಿ ಆಯಿಂಡಾನು."

"ನಮ್ಮ ಜನಾಂಗದಲ್ಲಿ ನೀವು ಮಂತ್ರಿಯಾಗಿರೋದು ನಮಗೆಲ್ಲಾ ಆನಂದವಾಗಿದೆ."

"ನಾಕು ಅಂತೆ, ಮೀಕಿಂತ ಆನಂದಂ ಗಾವುಂದಿ"

"ನೀವು ಆ ಟಿಪ್ಪು ಸುಲ್ತಾನ್ ಬಗ್ಗೆ ಹೇಳಿರೊ ಮಾತು ಸರಿಯಾಗಿದೆ."

"ಐತೆ ಕೂಡ, ಮಾ ಬಜೆಪಿವಾಳ್ಳು ಸಪೋರ್ಟ್ರು ಚೇಸ್ತಾಲೇದು"

"ನಾವು ಸಪೋರ್ಟ್ರು ಮಾಡ್ತಿವಿ ಬಿಡಿ. ಆ ಟಿಪ್ಪು ಸುಲ್ತಾನ್‌ಗಿಂತ ನಾವು ಕನ್ನಡದ ಸೇವೆ ಮಾಡಿದ್ದಿವಿ."

"ಅವನು, ಕನ್ನಡಂಲೋನೆ ವ್ಯಾಪಾರಾಂ ಚೇಸ್ತಾಮು. ಕನ್ನಂಡಲೋನೆ ಮಾಟ್ಲಾಡ್ತಾಮು. ಕನ್ನಡಂಲೋನೆ ಸಾಲ ರಿಕವರಿ ಚೇಸ್ತಾಮು. ಇವುಡಿಕಂತ ಕನ್ನಡಂಕಿ ಸೇವೆ ಕಾವಾಲಾ?"

"ಕರ್ನಾಟಕದಲ್ಲಿದ್ದು ಕನ್ನಡ ಕಲ್ತು ನಾವು ಮಾಡಿರೋ ಸೇವೆನ ಆ ಟಿಪ್ಪು ಮಾಡಿದ್ದನಾ? ಅವನು ಬರಿ ಪಾರ್ಸಿ, ಉರ್ದು, ಅರೇಬಿಕ್‌ನಲ್ಲಿ ಆಡಳಿತ ಮಾಡ್ತ ನಮ್ಮ ಜನಾಂಗಕ್ಕೂ ತುಂಬಾ ತೊಂದರೆ ಕೊಟ್ಟನಂತೆ?"

"ಅವನು. ಅಪ್ಪುಡು ಮಾ ಜನಾಂಗಕೂ ತೊಂದರಿಚ್ಚಿಂದಂಟ."

"ಇತಿಹಾಸದಲ್ಲಿ ನಾವು ತೊಂದರೆ ಕೊಡಬಹುದು ಅನ್ನೊದಕ್ಕೆ ಈ ಅವಕಾಶನೇ ಸಾಕ್ಷಿ ಅಲ್ಲವೆ?"

"ವಾಡು ಏಮೇಮಿ ಅನಾಹುತಾಲು ಚೇಸಿಂಡಾಡು ಅನೇದಾನಿಕಿ ಮಾ ಬ್ರಾಹ್ಮಣಲು ರಾಸಿಂಡೆ ಇತಿಹಾಸಮುಲೊ ದಾಖಲೇಮಿ ಉಂಡಾದಿ. ಅವುನ್ನಿ ಚಿದುವುಕುಂಟೆ, ಚಾಲು ಟಿಪ್ಪು ಕನ್ನಡ ಭಾಷಾದ್ರೋಹಿ, ಮಾ ಜನಾಂಗಮುದ್ರೋಹಿ ಅನೇದಾನ್ನಿ ನೇನು ಚೂಪಿಸ್ತಾನು."

"ತೋರಿಸಿ ಏನು ಮಾಡ್ತಿರೀ?"

"ಇತಿಹಾಸಂಲೋ ವಾಣ ಚರಿತ್ರೆ ಉಂಡಾನಟ್ಟು ಚೆಸ್ತಾನು."

"ಇತಿಹಾಸದಿಂದ ಅವನ ಪಾಠ ತಗದಾಕಿದ ಮೇಲೆ ಆ ಜಾಗಕ್ಕೆ ನಮ್ಮ ವಾಸವಿ ಪಾಠ ಸೇರಸಂಗೆ ಮಾಡ್ತಿರಾ?"

"ಚೂಸ್ತಾನು, ವೆಮುನಿ ಮಾ ಬಜೆಪಿ ಲೀಡರಲ್ಲಿ ಅಡಗತಾನು. ವಾಳೇಮೈನ ಟಿಪ್ಪು ಸುಲ್ತಾನ್ ಚರಿತ್ರೆ ಜಾಗಾನಕಿ ಪೇಜಾವರ ಮಠಾಧೀಶನ ಪಾಠಂ ಚೇರಿಚ್ಚು ಅಂಟೆ, ದಾನ್ನಿ ಒಪ್ಪಿಕೋನಿ ವಾಸವಿ ಚರಿತ್ರೇನು ಚೇರಿಚೇಟಿ ಚೇಸ್ತಾನು."

"ರಿಯಲಿ ನೂವು ಆರ್ಯವೈಶ್ಯ ಕುಲತಿಲಕುಡು ಸಾರ್."

"ಥ್ಯಾಂಕ್!"

"ಥೂತ್ತೇರಿ!!!"

-ಯಾಹೂ

ಟಿಪ್ಪು ಸುಲ್ತಾನ್: ಸ್ವತಂತ್ರ ಕರ್ನಾಟಕದ ಹರಿಕಾರ...!



ಶಿವಸುಂದರ್

> ಇತಿಹಾಸದಲ್ಲಿ ಟಿಪ್ಪುವನ್ನು ವಿರೋಧಿಸಿದವರು ಇಬ್ಬರು. ಬ್ರಿಟಿಷರು ಹಾಗೂ ಪುರೋಹಿತಶಾಹಿಗಳು. ವರ್ತಮಾನದಲ್ಲಿ ಟಿಪ್ಪುವಿನ ನೆನಪನ್ನೂ ವಿರೋಧಿಸುತ್ತಿರುವವರು ಇಬ್ಬರು. ನವವಸಾಹತುಶಾಹಿಗಳು ಹಾಗೂ ಪುರೋಹಿತಶಾಹಿಗಳು.

ಟಿಪ್ಪು ಸುಲ್ತಾನರ ಬಗ್ಗೆ ಡಿ.ಹೆಚ್. ಶಂಕರಮೂರ್ತಿ ಕಾರಿಕೊಂಡಿರುವ ವಿಷಕ್ಕೆ 200 ವರ್ಷಗಳ ಇತಿಹಾಸ ವಿದೆ. ಟಿಪ್ಪುವನ್ನು ಇತಿಹಾಸದಲ್ಲಿ ಇಡೀ ನಾಡು ಅಭಿಮಾನಿಸಿದರೆ ಟಿಪ್ಪುವನ್ನು ವಿರೋಧಿಸುತ್ತಾ ಬಂದವರು ಇಬ್ಬರು. ಬ್ರಿಟಿಷರು ಮತ್ತು ಶತಶತಮಾನಗಳಿಂದ ಸಮಾಜವನ್ನು ಆಳುತ್ತಾ ಬಂದ ಪುರೋಹಿತಶಾಹಿಗಳು. ಏಕೆಂದರೆ 1799ರ ಮೇ 4ರಂದು ಬ್ರಿಟಿಷರ ವಿರುದ್ಧ ಹೋರಾಡುತ್ತಾ ರಾಜನಾದರೂ ವೀರ ಸೈನಿಕನಂತೆ ರಣಾಂಗಣದಲ್ಲಿ ಯೋಧನಂತೆ ಮಡಿಯುವ ಮುನ್ನ ಟಿಪ್ಪು ತನ್ನ ಸಾಮ್ರಾಜ್ಯದಲ್ಲಿ ಶತಶತಮಾನಗಳಿಂದ ಆಳುತ್ತಾ ಬಂದಿದ್ದ ಪುರೋಹಿತಶಾಹಿಗಳ ಅಧಿಪಾಯವನ್ನೇ ಅಲುಗಾಡಿಸಿದ್ದ. ಮಾತ್ರವಲ್ಲ ಈ ದೇಶವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡು ಈ ದೇಶವನ್ನು ಸೂರೆ ಹೊಡೆಯುವ ಕನಸು ಕಾಣುತ್ತಿದ್ದ ಬ್ರಿಟಿಷರಿಗೆ ನಿದ್ದೆಗೆಡಿಸಿದ್ದ. ಆದರೆ ಅದೇ ಸಮಯದಲ್ಲಿ ಪುರೋಹಿತಶಾಹಿಗಳ ಹುನ್ನಾರಕ್ಕೆ ಬಲಿಯಾಗಿ ಶಾಶ್ವತ ದಾಸ್ಯಕ್ಕೆ ಸಿಲುಕಿದ್ದ ಈ ನಾಡಿನ ಶೂದ್ರ ರೈತಾಪಿ ಜನತೆ ಮತ್ತು ದಲಿತ ಹಾಗೂ ಇತರ ದಮನಿತ ಸಮುದಾಯಗಳಿಗೆ ಇತಿಹಾಸದಲ್ಲೇ ಪ್ರಥಮ ಬಾರಿಗೆ ಬಿಡುಗಡೆಯ ಬೆಳಕನ್ನು ಕಾಣಿಸಿದ್ದ. ಆದ್ದರಿಂದಲೇ ಜನಪದರು ಹಾಡಿದ ಲಾವಣಿಗಳಲ್ಲಿ ಟಿಪ್ಪು ಜನನಾಯಕನಾದರೆ, ನಾಡಪ್ರೇಮಿಯಾದರೆ, ಪುರೋಹಿತಶಾಹಿಗಳು ಬರೆದ ಇತಿಹಾಸದಲ್ಲಿ ನಾಡದ್ರೋಹಿಯೆಂದು ಚಿತ್ರಿಸಲ್ಪಟ್ಟ..!

ಚರಿತ್ರೆಯ ಬಗ್ಗೆ ಮಾತಾಡುವಾಗ ಗೆದ್ದವರೆ ಚರಿತ್ರೆಯನ್ನು ಬರೆಯುತ್ತಾರೆ ಎಂದು ಹೇಳಲಾಗುತ್ತದೆ. ಟಿಪ್ಪುವಿನ ಮರಣದಲ್ಲಿ ಗೆದ್ದವರು ವಸಾಹತುಶಾಹಿಗಳು ಮತ್ತು ಬ್ರಾಹ್ಮಣಶಾಹಿಗಳೇ. ಆದ್ದರಿಂದಲೇ ಲಿಖಿತ ಇತಿಹಾಸದಲ್ಲಿ ಟಿಪ್ಪುವನ್ನು ಮತ್ತು ನಾಡಿನ ಇತಿಹಾಸದಲ್ಲಿ ಆತನ ಪಾತ್ರವನ್ನು ವಿಕೃತಗೊಳಿಸಲಾಗಿದೆ. ಆದರೆ ಟಿಪ್ಪುವಿನ ಸೋಲು ಕೇವಲ ಟಿಪ್ಪುವಿನ ಸೋಲಾಗಿರಲಿಲ್ಲ, ಅದು ಈ ದೇಶದ ಶೂದ್ರ ರೈತಾಪಿ ಮತ್ತು ದಲಿತರ ಸೋಲೂ ಆಗಿತ್ತು. ಈಗ ಇತಿಹಾಸ ಮತ್ತೆ ಮರುಕಳಿಸುತ್ತಿದೆ. ಕಾರ್ಲ್ ಮಾರ್ಕ್ಸ್ ಹೇಳುವಂತೆ ಈ ಬಾರಿ ದುರಂತವಾಗಿ..

ಡಿ.ಹೆಚ್. ಶಂಕರಮೂರ್ತಿ ಟಿಪ್ಪುವನ್ನು ನಾಡದ್ರೋಹಿ ಮತ್ತು ಕನ್ನಡದ್ರೋಹಿ ಎಂದು ಕರೆಯುತ್ತಿರುವ ಈ ಹೊತ್ತಿನಲ್ಲಿ ಮತ್ತೆ ಬ್ರಾಹ್ಮಣ್ಯ ಮತ್ತು ಪುರೋಹಿತಶಾಹಿ, ಶಂಕರಮೂರ್ತಿ, ವಾಜಪೇಯಿ, ಅಡ್ವಾನಿಗಳ ರೂಪದಲ್ಲಿ ದೇಶವನ್ನಾಳುತ್ತಿದೆ. ಬ್ರಿಟಿಷ್ ವಸಾಹತುಶಾಹಿಗಳ ಬದಲಿಗೆ ಅಮೆರಿಕ ಹಾಗೂ ಇನ್ನಿತರ ನವವಸಾಹತುಶಾಹಿಗಳು ನಾಡನ್ನು ನುಂಗುತ್ತಿವೆ. ಇಂಗ್ಲಿಷ್ ಮತ್ತು ಸಂಸ್ಕೃತಗಳು ಕನ್ನಡವನ್ನು ನುಂಗುತ್ತಿವೆ. ಇವರೆಲ್ಲರ ವಿರುದ್ಧ ಹೋರಾಡಿದ ಜನತೆ ನಿಸ್ಸಹಾಯಕರಾಗಿ ಟಿಪ್ಪು ಸುಲ್ತಾನರಿಗೆ ಕಾಯುತ್ತಿರುವ ಹೊತ್ತಿನಲ್ಲಿ ಟಿಪ್ಪು ದೇಶದ್ರೋಹಿಯೆಂದು ಶಂಕರಮೂರ್ತಿ ಅರಚುತ್ತಿದ್ದಾನೆ.

ಹೀಗಾಗಿ ಟಿಪ್ಪೂ ಸುಲ್ತಾನ್‌ನನ್ನು ಶಂಕರಮೂರ್ತಿ ವಿರೋಧಿಸುತ್ತಿರುವುದು ಇತಿಹಾಸದಲ್ಲಿ ಆಗಿಹೋದ ಸಂಗತಿಯೆಂದಲ್ಲ, ಬದಲಿಗೆ ವರ್ತಮಾನದಲ್ಲೂ ಶಂಕರಮೂರ್ತಿಯ ಸಂತತಿಗಳು ನಡೆಸುತ್ತಿರುವ ನಾಡದ್ರೋಹವು ಬಯಲಿಗೆ ಬರಬಾರದೆಂದು. ಇದರ ಹಿಂದೆ ಈ ನಾಡಿನ ದಲಿತ, ರೈತ, ದುಡಿಯುವ ಸಮುದಾಯವನ್ನು ಮತ್ತೆ ವಸಾಹತುಶಾಹಿಗಳು ಹಾಗೂ ಪುರೋಹಿತಶಾಹಿಗಳು ಸುಲಿಯುತ್ತಿರುವುದನ್ನು ಮರೆಮಾಚುವ ಸಂಚೂ ಇದೆ. ಆದ್ದರಿಂದಲೇ ಟಿಪ್ಪೂವನ್ನು ಜನನಾಯಕನೆಂದು ಕರೆಯುವ ವೇಳೆಯಲ್ಲಿ ಬ್ರಿಟಿಷರ ವಿರುದ್ಧ ವೀರೋಚಿತವಾಗಿ ಹೋರಾಡಿ ಮಡಿದದ್ದು ಮಾತ್ರವಲ್ಲದೆ, ಈ ನಾಡಿನ ದುಡಿಯುವ ಜನತೆಯ ಬದುಕನ್ನು ಬದಲಿಸಿದ್ದು ಹೇಗೆ ಎಂಬ ತಿಳುವಳಿಕೆಯು ಅತ್ಯಗತ್ಯವಾಗಿ ಬೇಕಾಗಿದೆ. ಏಕೆಂದರೆ ಇತಿಹಾಸವು ಹಿಂದಿನಿಂದ ತೋರುವ ಬೆಳಕಾಗದೆ, ಕಣ್ಣಿಗೆ ಕಟ್ಟಿರುವ ಪೊರೆಯಾದಾಗ, ಪೊರೆ ಕಳಚದೆ ಬೆಳಕನ್ನು ಕಾಣಲಾಗುವುದಿಲ್ಲ.

ಭೂಮಾಲೀಕ ಪಾಳೇಗಾರರ ನಾಶ

ಟಿಪ್ಪೂ ಸುಲ್ತಾನ್ ಮತ್ತು ಅವರ ತಂದೆ ಹೈದರಾಲಿ ಈ ನಾಡನ್ನು ಆಳಿದ 34 ವರ್ಷಗಳಲ್ಲಿ ಈ ನಾಡಿನ ರೈತಾಪಿಯನ್ನು ಸುಲಿದು ತಿನ್ನುತ್ತಿದ್ದ ಪಾಳೇಗಾರರನ್ನು ನಿರ್ನಾಮ ಮಾಡಿದರು. ಫ್ರಾನ್ಸಿಸ ಬುಕಾನನ್ ಎಂಬ ಸಂಶೋಧಕನ ಪ್ರಕಾರ ಟಿಪ್ಪುವಿನ ಆಳ್ವಿಕೆಯಲ್ಲಿ "ಊಳಿಗಮಾನ್ಯ ವ್ಯವಸ್ಥೆ ಮುರಿದುಬಿದ್ದಿತು." ಟಿಪ್ಪುವಿನ ಬಗ್ಗೆ ಹೆಮ್ಮೆಯಿಂದ ಮಾತನಾಡುವಾಗಲೂ ಸಾಮಾನ್ಯವಾಗಿ ಕರ್ನಾಟಕದ ವಿಸ್ತೀರ್ಣ ಹೇಗೆ ಇಂದಿನ ಆಂಧ್ರ, ತಮಿಳುನಾಡು ಹಾಗೂ ಕೇರಳವನ್ನೂ ಆವರಿಸಿತ್ತು ಎಂಬ ಹೆಮ್ಮೆಯ ಹೆಗ್ಗಳಿಕೆಯನ್ನು ಮಾತ್ರ ಬಿತ್ತರಿಸಲಾಗುತ್ತದೆ. ಆ ಅರ್ಥದಲ್ಲಿ ಟಿಪ್ಪುವನ್ನು ಇತರ ರಾಜರಂತೆ ಸಾಮ್ರಾಜ್ಯವನ್ನು ವಿಸ್ತರಿಸಿದ ಮತ್ತೊಬ್ಬ ರಾಜನೆಂಬಂತೆ ನೋಡುವ ತಪ್ಪು ತಿಳುವಳಿಕೆಯೂ ಇದೆ. ಟಿಪ್ಪುವಿನ ಸಾಮ್ರಾಜ್ಯ ಎರಡು ಲಕ್ಷ ಚದರ ಕಿ.ಮೀ.ನಷ್ಟು ವಿಸ್ತಾರವಾಗಿದ್ದು ಅಂದಿನ ಬ್ರಿಟಿಷ್ ಇಂಡಿಯಾಗಿಂತಲೂ ದೊಡ್ಡದಾಗಿದ್ದದ್ದು ವಾಸ್ತವವೇ.

ಆದರೆ ಇತಿಹಾಸದಲ್ಲಿ ಅದೇ ಸಮಯದಲ್ಲಿ ಮರಾಠರ ಸಾಮ್ರಾಜ್ಯ ಟಿಪ್ಪುವಿಗಿಂತ ಸ್ವಲ್ಪ ದೊಡ್ಡದೇ ಆಗಿತ್ತು. ಆದರೆ ಸಾಮಾನ್ಯ ಜನ ಟಿಪ್ಪುವನ್ನು ನೆನೆಯುತ್ತಾರೆ ವಿನಃ ಮರಾಠರನ್ನಲ್ಲ, ಅದಕ್ಕೆ ಕಾರಣವೂ ಇದೆ. ಏಕೆಂದರೆ ಟಿಪ್ಪುವಿನ ಸಾಮ್ರಾಜ್ಯದಲ್ಲಾದದ್ದು ಕೇವಲ ಭೌಗೋಳಿಕ ವಿಸ್ತರಣೆಯಲ್ಲ, ಟಿಪ್ಪು ಆಳಿದ ಪ್ರತಿಯೊಂದು ಪ್ರದೇಶದಲ್ಲೂ ಸಮಾಜದಲ್ಲಿ ಮೂಲಭೂತವಾದ ಮಾರ್ಪಾಡುಗಳು ಬಂದವು. ರೈತರನ್ನು ಸುಲಿದು ತಿನ್ನುತ್ತಿದ್ದ ಇನ್ನೂರು ಪಾಳೇಗಾರರನ್ನು ಟಿಪ್ಪು-ಹೈದರಾಲಿಗಳು ಮಟ್ಟ ಹಾಕಿದ್ದರು. ಅಷ್ಟು ಮಾತ್ರವಲ್ಲದೆ ಕೃಷಿಯಲ್ಲಿ, ಭೂ ಹಿಡುವಳಿಯಲ್ಲಿ ಹಾಗೂ ರಾಜನಿಗೆ ತೆರಬೇಕಾಗಿದ್ದ ತೆರಿಗೆಯಲ್ಲಿ ಈ ಎಲ್ಲಾ ಕಾರಣದಿಂದಾಗಿ ರೈತಾಪಿಯ ಬದುಕಿನಲ್ಲಿ ಟಿಪ್ಪು ಮೂಲಭೂತ ಮಾರ್ಪಾಡನ್ನು ತಂದದ್ದು ಇತಿಹಾಸ.

ನಿಖಿಲೇಶ್ ಗುಹಾ ಎಂಬ ಇತಿಹಾಸಕಾರರು ದಾಖಲಿಸಿರುವ ಇತಿಹಾಸದಲ್ಲಿ 1792ರಲ್ಲಿ ಟಿಪ್ಪು ಸುಲ್ತಾನ್ ಒಂದು ಹೊಸ 'ಭೂಕಂದಾಯ ನಿಯಂತ್ರಣ ನೀತಿ'ಯನ್ನು ಜಾರಿಗೆ ತರುತ್ತಾನೆ. ಅದರಲ್ಲಿ ಮೊಟ್ಟ ಮೊದಲನೆಯ ಅಂಶವಾಗಿ ಟಿಪ್ಪು ಘೋಷಿಸುವುದೇನೆಂದರೆ, 'ಭೂಮಿಯನ್ನು ಯಾರು ಉಳುತ್ತಾರೋ ಅವರಿಗೆ ಮಾತ್ರ ಸೇರುತ್ತದೆ. ಇದರಲ್ಲಿ ಯಾವುದೇ ಬಗೆಯ ಜಾತಿ, ಧರ್ಮಗಳನ್ನು ಆಧರಿಸಿ ಭೂ ಹಂಚಿಕೆಯಾಗುವುದಿಲ್ಲ'. ಅದೇ ನೀತಿಯ ಮುಂದುವರಿಕೆಯಾಗಿ ಅಲ್ಲಿಯವರೆಗೆ ಬ್ರಾಹ್ಮಣರಿಗೆ ರಾಜ ಸಂಸ್ಥಾನಗಳು ನೀಡುತ್ತಿದ್ದ ತೆರಿಗೆರಹಿತ ಭೂದಾನಗಳನ್ನು ಟಿಪ್ಪು ಸಂಪೂರ್ಣವಾಗಿ ನಿಲ್ಲಿಸಿದ. ಟಿಪ್ಪುವಿನ ಇಡೀ ಆಡಳಿತಾವಧಿಯಲ್ಲಿ ಕೇವಲ ಎರಡು ಹಳ್ಳಿಗಳನ್ನು ಮಾತ್ರ ಈ ರೀತಿಯಾಗಿ ಭೂ ದಾನದ ರೂಪದಲ್ಲಿ ನೀಡಲಾಗಿತ್ತು.

ಬ್ರಾಹ್ಮಣರಿಗೆ ಭೂಮಿಯನ್ನು ಕೊಡುವ ಸಂದರ್ಭ ಬಂದಾಗಲೂ ಟಿಪ್ಪು ವೈದಿಕ ಮತ್ತು ಲೌಕಿಕ ಬ್ರಾಹ್ಮಣರೆಂಬ ವರ್ಗೀಕರಣ ಮಾಡಿ ಸಾಮಾಜಿಕ ಉತ್ಪಾದನೆಯಲ್ಲಿ ಭಾಗವಹಿಸುತ್ತಿದ್ದ ಲೌಕಿಕ ಬ್ರಾಹ್ಮಣರಿಗೆ ಮಾತ್ರ ಭೂಮಿ ನೀಡಬೇಕೆಂದು ಹಾಗೂ ಅದಕ್ಕೆ ತೆರಿಗೆ ವಸೂಲಿ ಮಾಡಬೇಕೆಂದು ನಿಬಂಧನೆ ವಿಧಿಸಿದ್ದ. ಇಷ್ಟು ಮಾತ್ರವಲ್ಲದೆ ಮಠ-ಮಾನ್ಯಗಳಿಗೆ, ದೇವಸ್ಥಾನಗಳಿಗೆ ಅಲ್ಲಿಯವರೆಗೆ ನೀಡಲಾಗಿದ್ದ ಸಾವಿರಾರು ಎಕರೆ ಜಮೀನುಗಳನ್ನು ವಶಪಡಿಸಿಕೊಂಡು ಅದನ್ನು ಉಳುಮೆ ಮಾಡುತ್ತಿದ್ದ ಶೂದ್ರ ರೈತಾಪಿಗೆ ಹಂಚಲಾಯಿತು.

ಇದಲ್ಲದೆ ಕೆಲವು ದೊಡ್ಡ ದೇವಸ್ಥಾನಗಳಿಗೆ ಹಾಗೂ ಮಠಗಳಿಗೆ ಜನರಿಂದ ತೆರಿಗೆ ವಸೂಲಿ ಮಾಡುವ ಅಧಿಕಾರವನ್ನು ಹಾಗೂ ಆ ಮೂಲಕ ರೈತಾಪಿಯ ಸಾಮಾಜಿಕ ಬದುಕಿನಲ್ಲಿ ಅವರಿಗಿದ್ದ ಅಧಿಕಾರವನ್ನು ಕ್ರಮಕ್ರಮವಾಗಿ ತಗ್ಗಿಸಲಾಯಿತು. ಉದಾಹರಣೆಗೆ ಮಂಡ್ಯದ ಅಗರಂನಲ್ಲಿ ಹಾಗೂ ಮೇಲುಕೋಟೆಯಲ್ಲಿ ಅರವತ್ತು ಸಾವಿರ ಪಗೋಡಗಳಷ್ಟು ಆದಾಯ ವಸೂಲಿ ಮಾಡುತ್ತಿದ್ದ ದೇವಸ್ಥಾನದ ಅಧಿಕಾರವನ್ನು ಕೇವಲ ಸಾವಿರ ಪಗೋಡಗಳಿಗೆ ಇಳಿಸಲಾಯಿತು. ನಂಜನಗೂಡಿನ ದೇವಸ್ಥಾನದ ಕೇವಲ ಮುನ್ನೂರು ಬ್ರಾಹ್ಮಣ ಕುಟುಂಬಗಳು ವಸೂಲಿ ಮಾಡುತ್ತಿದ್ದ ಹದಿನಾಲ್ಕು ಸಾವಿರ ಪಗೋಡಾಗಳಿಗೂ ಹೆಚ್ಚಿನ ಆದಾಯವನ್ನು ಕೇವಲ ನೂರು ಪಗೋಡಾಗಳಿಗೆ ಇಳಿಸಲಾಯಿತು. ಆ ಮೂಲಕ ರೈತಾಪಿಯ ಮೈಲಿದ್ದ ಹೊರೆಯು ಅಷ್ಟರ ಮಟ್ಟಿಗೆ ಇಳಿಯಿತು.

ಎಲ್ಲಕ್ಕಿಂತ ಮುಖ್ಯವಾಗಿ ಹಳ್ಳಿಯ ಭೂ ಹಿಡುವಳಿ ಹಾಗೂ ರಾಜಕೀಯ ಅಧಿಕಾರವನ್ನು ನಿಯಂತ್ರಿಸುತ್ತಿದ್ದ ಪಟೇಲಿಕೆ ಹಾಗೂ ಶಾನುಭೋಗಿಕೆಯನ್ನು ಮೂಲಭೂತವಾಗಿಯೇ ಬದಲಾಯಿಸಲಾಯಿತು. ಅವರೆಗೆ ವಂಶಪಾರಂಪರ್ಯವಾಗಿ ಬ್ರಾಹ್ಮಣ ಹಾಗೂ ಮೇಲ್ಜಾತಿ ಕುಟುಂಬಗಳು ಮಾತ್ರ ಅನುಭವಿಸುತ್ತಿದ್ದ ಈ ಅಧಿಕಾರವನ್ನು ಪರಿವರ್ತಿಸಲಾಯಿತು. ವಂಶಪಾರಂಪರ್ಯದ ಬದಲಾಗಿ ಅಮಲ್ದಾರರು ನೇಮಕ ಮಾಡುವ ಹುದ್ದೆಯಾಗಿ ಶಾನುಭೋಗಿಕೆ ಬದಲಾಯಿತು. ಹಾಗೂ ಆ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸುವುದೇ ನೇಮಕಕ್ಕೆ ಮಾನದಂಡವಾಯಿತು. ಬುಕಾನನ್ ಎಂಬ ಸಂಶೋಧಕರು ಹೇಳುವಂತೆ ಈ ನೀತಿಯ ಪ್ರಕಾರ ಅಲ್ಲಿಯವರೆಗೆ ಶಾನುಭೋಗರ ಹಾಗೂ ಪಟೇಲರ ಭೂಮಿಯಲ್ಲಿ ರೈತರು ಬಿಟ್ಟಿಯಾಗಿ ದುಡಿಯಲೇ ಬೇಕಾಗಿದ್ದ ನಿಯಮವನ್ನು ಬದಲಾಯಿಸಲಾಯಿತು. ಅಷ್ಟು ಮಾತ್ರವಲ್ಲದೆ ಪಟೇಲರು ಹಾಗೂ ಶಾನುಭೋಗರೂ ಭೂಮಿಗೆ ತೆರಿಗೆಯನ್ನು ನೀಡಲೇಬೇಕಾದ ಕಡ್ಡಾಯಕ್ಕೆ ಒಳಗಾದರು.

ಇತಿಹಾಸದ ಆ ಕಾಲಘಟ್ಟದಲ್ಲಿ ಇದು ಎಂತಹ ಕ್ರಾಂತಿಕಾರಕ, ಸಾಮಾಜಿಕ ಪರಿವರ್ತನೆ ತರುವ ನೀತಿಯೆಂಬುದು ಈಗಲೂ ಆರೋಗ್ಯಕರವಾಗಿ ಯೋಚನೆ ಮಾಡುವವರಿಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈವರೆಗಿನ ಎಲ್ಲಾ ರಾಜಮನೆತನಗಳೂ ತಮ್ಮ ಆಳ್ವಿಕೆಯನ್ನು ಹಳ್ಳಿಗಾಡಿನಲ್ಲಿ ನೆಲೆನಿಂತಿದ್ದ ಊಳಿಗಮಾನ್ಯ ಶಕ್ತಿಗಳನ್ನು ಆಧರಿಸಿಯೇ ನಡೆಸಿದ್ದರು. ಯಾವ ರಾಜರು ಬಂದರೂ ಹಳ್ಳಿಗಾಡಿನಲ್ಲಿ ಈ ಶಕ್ತಿಗಳ ಅಧಿಕಾರವನ್ನು ಹಾಗೂ ಸುಲಿಗೆಯನ್ನು ಪ್ರಶ್ನಿಸುವವರೇ ಇರಲಿಲ್ಲ, ಬದಲಿಸುವವರೂ ಇರಲಿಲ್ಲ, ಆದ್ದರಿಂದಲೇ ಅರಸ ಬದಲಾದರೂ ರಾಗಿ ಬೀಸುವುದು ತಪ್ಪುವುದಿಲ್ಲ ಎಂಬ ಗಾದೆ ರೈತಾಪಿಯ ಮನೆಮಾತಾಗಿತ್ತು. ಆದರೆ ಟಿಪ್ಪುವಿನ ಆಡಳಿತ ಈ ಶೋಷಕ ವರ್ಗವನ್ನು ನಿರ್ನಾಮ ಮಾಡಿದ್ದು ಮಾತ್ರವಲ್ಲದೆ, ರೈತಾಪಿಗೆ ಬಿಡುಗಡೆಯ ಬೆಳಕನ್ನು ಕಾಣಿಸಿತು. ಆದ್ದರಿಂದಲೇ ಟಿಪ್ಪು ಇತರ ರಾಜರಂತೆ ಇನ್ನೊಬ್ಬ ರಾಜ ಮಾತ್ರನಲ್ಲ, ಆತ ದುಡಿಯುವ ಜನತೆಯ ಜನನಾಯಕನೂ ಆದದ್ದು ಹೀಗೆ.

ದಲಿತ ಶೂದ್ರರ ಬದುಕಿನ ಬೆಳಗು

ನಮ್ಮ ನಾಡಿನ ಇತಿಹಾಸದಲ್ಲಿ ದಲಿತರಿಗೆ, ಶೂದ್ರರಿಗೆ ಜಮೀನಿನ ಒಡೆತನ ಬಂದದ್ದು 1947ರ ನಂತರ. ಅದು ದೇವರಾಜ ಅರಸುರವರು ತಂದ ಭೂ ಸುಧಾರಣಾ ಕಾನೂನಿನ ಪ್ರಕಾರ ಎಂದು ಸರ್ಕಾರದ ಅಧಿಕೃತ ಇತಿಹಾಸ ಹೇಳುತ್ತದೆ. ಆದರೆ ಈಗಲೂ ರೈತರ ಬದುಕನ್ನು ನೋಡಿದರೆ ಈ ತಥಾಕಥಿತ ಸುಧಾರಣೆಗಳ ಮಿತಿಯೇನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಏಕೆಂದರೆ 47ರ ನಂತರ ಬಂದ ಪ್ರತಿಯೊಂದು ಸರ್ಕಾರವನ್ನೂ ಆಳುತ್ತಿದ್ದುದು ದೊಡ್ಡ ದೊಡ್ಡ ಭೂಮಾಲೀಕರೇ. ಹೀಗಾಗಿ ಯಾವ ಸರ್ಕಾರಕ್ಕೂ ಪರಿಪೂರ್ಣವಾದಂತಹ ಭೂಸುಧಾರಣೆಯನ್ನು ತರುವ ಯೋಜನೆಯಾಗಲಿ, ಮನಸ್ಸಾಗಲಿ ಇರಲಿಲ್ಲ, ಆದರೆ 1792ರಷ್ಟು ಹಿಂದೆಯೇ ಟಿಪ್ಪು ಸುಲ್ತಾನ್ ಎಂದೂ ಜಮೀನಿನ ಕನಸನ್ನೂ ಕಾಣದಿದ್ದ ಲಕ್ಷಾಂತರ ಶೂದ್ರ-ದಲಿತ ಸಮುದಾಯಕ್ಕೆ ಭೂ ಒಡೆತನದ ಹಕ್ಕನ್ನು ನೀಡಿದ್ದ.

ಕಬೀರ್ ಕೈಸರ್ ಎಂಬ ಮತ್ತೊಬ್ಬ ಇತಿಹಾಸಕಾರ ದಾಖಲಿಸುವಂತೆ ಟಿಪ್ಪುವಿನ ಸೈನ್ಯದಲ್ಲಿ ಒಂದೂವರೆ ಲಕ್ಷ ಸ್ಥಿರ ಸೈನಿಕರೂ, ಇನ್ನು ಒಂದೂವರೆ ಲಕ್ಷ ಅರೆಕಾಲಿಕ ಸೈನಿಕರೂ ಇದ್ದರು. ಇವರಲ್ಲಿ ಬಹುಪಾಲು ಸೈನಿಕರು ಬೇಡ, ಕುರುಬ, ಈಡಿಗ, ಲಂಬಾಣಿ, ಹೊಲೆಯ ಇತ್ಯಾದಿ ಜಾತಿಗಳಿಗೆ ಸೇರಿದವರೇ ಆಗಿದ್ದರು. ಟಿಪ್ಪು ಸುಲ್ತಾನ್ ಇವರೆಲ್ಲರಿಗೂ ತಿಂಗಳಿಗೆ ಏಳು ರೂಪಾಯಿಯಿಂದ ಹತ್ತು ರೂಪಾಯಿಯವರೆಗಿನ ಸಂಬಳ ಮಾತ್ರವಲ್ಲದೆ, ಪ್ರತಿಯೊಬ್ಬ ಸೈನಿಕನಿಗೂ ಜಮೀನನ್ನು ನೀಡಿದ್ದ. ಹೀಗಾಗಿ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಈ ಲಕ್ಷ ಲಕ್ಷ ಕುಟುಂಬಗಳು ಭೂ ಒಡೆತನವನ್ನು ಅನುಭವಿಸಿದವು.

ಇದರಿಂದಾಗಿಯೇ ಭಾರತದಲ್ಲಿ ಉಳಿದ ಭಾಗಗಳಿಗಿಂತ ದಕ್ಷಿಣ ಮೈಸೂರು ಪ್ರಾಂತ್ಯದಲ್ಲಿ ಶೂದ್ರಶಕ್ತಿ ಬಹುಬೇಗ ಜಾಗೃತಗೊಂಡು ತನ್ನ ರಾಜಕೀಯ ಅಧಿಕಾರವನ್ನು ಪ್ರತಿಪಾದಿಸಲು ಆರಂಭಿಸಿತು. ಅದರ ಭಾಗವಾಗಿಯೇ ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಸಾಮ್ರಾಜ್ಯದ ಪ್ರಜಾಪ್ರತಿನಿಧಿ ಸಭೆಗಳಲ್ಲೂ ಮತ್ತು ಆಡಳಿತದಲ್ಲೂ ಶೂದ್ರರಿಗೆ ಮೀಸಲಾತಿ ಬೇಕೆಂಬ ಧ್ವನಿ ಮೊಟ್ಟಮೊದಲು ಕೇಳಿಸಿದ್ದು ಇದೇ ಪ್ರಾಂತ್ಯದಲ್ಲಿ. ಶೂದ್ರಶಕ್ತಿಯ ಈ ಒತ್ತಾಯಕ್ಕೆ ಮಣಿದು ಕೃಷ್ಣರಾಜ ಒಡೆಯರ್ ಭಾರತದಲ್ಲೇ ಮೊಟ್ಟಮೊದಲನೇ ಬಾರಿಗೆ ಮೀಸಲಾತಿಯನ್ನು ನೀಡಲೇಬೇಕಾಯಿತು. ಆದರೆ ಆಗ ಮೈಸೂರು ಸಂಸ್ಥಾನದ ದಿವಾನರಾಗಿದ್ದ ವಿಶ್ವೇಶ್ವರಯ್ಯ ಅದನ್ನು ವಿರೋಧಿಸಿ ರಾಜೀನಾಮೆ ನೀಡಿದ್ದರು. ಡಿ.ಎಚ್. ಶಂಕರಮೂರ್ತಿ ಟಿಪ್ಪುಸುಲ್ತಾನನ್ನು ಇತಿಹಾಸದ ಪುಟದಿಂದ ತೆಗೆದು ಇಂತಹ ವಿಶ್ವೇಶ್ವರಯ್ಯರ ಇತಿಹಾಸವನ್ನು ಸೇರಿಸಬೇಕೆಂದು ಕೇಳುತ್ತಾರೆ!


ಹೀಗೆ ಟಿಪ್ಪುಸುಲ್ತಾನ್ ಈ ನಾಡಿನಲ್ಲಿ ಶತಶತಮಾನಗಳಿಂದ ಬೇರೂರಿ ನಿಂತ ಪುರೋಹಿತಶಾಹಿ ಶಕ್ತಿಗಳ ಮಗ್ಗಲು ಮುರಿದು ದುಡಿಯುವ ಜನತೆಯ ಬದುಕಿನ ಪರವಾಗಿ ನೀತಿಗಳನ್ನು ಜಾರಿ ಮಾಡಿದ. ಟಿಪ್ಪೂ ಸುಲ್ತಾನನ ಕಾಲಾವಧಿಯುದ್ದಕ್ಕೂ ಈ ಪುರೋಹಿತಶಾಹಿ ಊಳಿಗಮಾನ್ಯ ಶಕ್ತಿಗಳು ತಲೆಯೆತ್ತಲು ಸಾಧ್ಯವಾಗಲಿಲ್ಲ, ಮಾತ್ರವಲ್ಲ ಟಿಪ್ಪುವಿನ ನಂತರವೂ ಹಳೇ ಮೈಸೂರು ಪ್ರಾಂತ್ಯದಲ್ಲಿ ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ, ಏಕೆಂದರೆ ಟಿಪ್ಪುವಿನ ಕಾಲದಲ್ಲಿ ಬಿಡುಗಡೆಯ ಅನುಭವವನ್ನು ಪಡೆದಿದ್ದ ರೈತಾಪಿ ಜನತೆ ಮತ್ತೊಮ್ಮೆ ಜೀತಗಾರರಾಗಲು ಸಿದ್ಧರಿರಲಿಲ್ಲ.

ಹೀಗಾಗಿ ಟಿಪ್ಪುವಿನ ನಂತರ ಮತ್ತೆ ಆಳಿದ ಒಡೆಯರೂ ಮತ್ತು ಬ್ರಿಟಿಷರೂ ದಕ್ಷಿಣ ಮೈಸೂರು ಪ್ರಾಂತ್ಯದಲ್ಲಿ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತರಲು ಯತ್ನಿಸಿದಾಗ ಈ ಭಾಗದಲ್ಲಿ ಹಲವಾರು ಸಶಸ್ತ್ರ ರೈತ ದಂಗೆಗಳು ನಡೆದದ್ದು ಇತಿಹಾಸದಲ್ಲಿ ದಾಖಲಾಗಿವೆ. ಇಂತಹ ಹಲವು ಬಗೆಯ ದಂಗೆಗಳಿಗೆ ನಾಯಕತ್ವ ವಹಿಸಿದ್ದು ದೋಂಡಿಯಾವಾಗ್‌ನಂಥ, ಬೂದಿ ಬಸವ ನಾಯಕನಂಥ ಟಿಪ್ಪುವಿನ ಸೈನ್ಯದಲ್ಲಿದ್ದ ಸೈನಿಕರೇ. ಏಕೆಂದರೆ ಟಿಪ್ಪುವಿನ ಸೈನಿಕರು ಕೇವಲ [illegible]. ಹಾಗೂ ಕೂಲಿಗಾಗಿ ಸೈನ್ಯ ಸೇರಿದವರಾಗಿರಲಿಲ್ಲ. ಟಿಪ್ಪುವಿನ ಆಡಳಿತದಲ್ಲಿ ಅವರು ಬ್ರಿಟಿಷ್ ವಸಾಹತುಶಾಹಿ ತಮ್ಮ ಬದುಕಿನ ಮೇಲೆ ಯಾವ ರೀತಿ ಪರಿಣಾಮ ಬೀರಬಹುದೆಂದು ಸ್ಪಷ್ಟವಾಗಿ ಅರಿತ ನಾಡಪ್ರೇಮಿ ಸೈನಿಕರಾಗಿದ್ದರು. ಆದ್ದರಿಂದಲೇ ಉಳಿದೆಲ್ಲಾ ಸಂಸ್ಥಾನಗಳನ್ನು ವಶಪಡಿಸಿಕೊಂಡಾಗ ಆಯಾ ಸೇನೆಯನ್ನು ಬ್ರಿಟಿಷ

(12ನೇ ಪುಟಕ್ಕೆ)

ಸಗಣಿಯ ಬೆನಕಂಗೆ ಸಂಪಗೆಯರಳಲ್ಲಿ ಪೂಜಿಸಿದಡೆ ರಂಜನೆಯಹುದಲ್ಲದೆ ಅದರ ಗಂಜಳ ಬಿಡದಣ್ಣಾ

ಚೆಡ್ಡಿ ಚತುರ ದೇವೇಗೌಡ



ದೇವೇಗೌಡರು ಇದೇ ಮೊದಲ ಬಾರಿಗೆ ಕನ್ನಡಿಗರ [illegible]ಮೆ ಕೇಳಿದ್ದಾರೆ. ಉನ್ನತ ಶಿಕ್ಷಣ ಸಚಿವ ಶಂಕರಮೂರ್ತಿ [illegible]ಪ್ಪು ಸುಲ್ತಾನ್ ಬಗ್ಗೆ ಮಾಡಿದ್ದ ಟೀಕೆಗೆ ಸ್ವತಃ [illegible]ಕರಮೂರ್ತಿಯೇ ಕ್ಷಮೆ ಕೇಳಬೇಕಿತ್ತು, ಆದರೆ ಅವರ [illegible]ದಲಾಗಿ ದೇವೇಗೌಡರೇ ಅರ್ಜೆಂಟಾಗಿ ಕ್ಷಮೆ ಕೇಳಿದ್ದಾ[illegible]ಬುದನ್ನು ನೋಡಿದರೆ ಅದರಲ್ಲೂ ಅಪ್ಪ ಮಕ್ಕಳ [illegible]ಧಿಕಾರದಾಹ ಹಾಗೂ ಅವಕಾಶ[illegible]ವಿತನಗಳು ಎದ್ದು ಕಾಣುತ್ತಿವೆ.



ಹೆಸರಿಗೆ ಜಾತ್ಯತೀತ ದಳವೆಂದಿ[illegible]ರೂ ದೇವೇಗೌಡ ಹಾಗೂ ಇಬ್ಬರು [illegible]ಷಕಾರಣಿ ಮಕ್ಕಳಲ್ಲಿ ಅರೆಬರೆ [illegible]ದ್ಧಿ ನಿಲುವುಗಳೇ ಇವೆ ಎಂಬುದು [illegible]ಗಾಗಲೇ ಬಯಲಾಗಿದೆ. ದೇವೇ[illegible]ಡರು ಗಣಿ ಲಂಚದ ಬಗ್ಗೆ ಜನರ [illegible]ಮೆ ಕೇಳಲಿಲ್ಲ, ಮಕ್ಕಳ ಅಕ್ರಮ [illegible] ಸಂಪಾದನೆ ಬಗ್ಗೆ ಕ್ಷಮೆ ಕೇಳಲಿಲ್ಲ, [illegible]ಸೆಯಂದಿರ ಅಕ್ರಮ ಆಸ್ತಿ ಖರೀದಿ [illegible]ಗ್ಗೆ ಕ್ಷಮೆ ಕೇಳಲಿಲ್ಲ. ಬಹಳ [illegible]ಖ್ಯವಾಗಿ ತಮ್ಮದು ಸೆಕ್ಯುಲರ್ ಜನತಾದಳ ಪಾರ್ಟಿ [illegible]ವಿದ್ದರೂ ಕೋಮುವಾದಿ ಬಿಜೆಪಿಗಳ ಜೊತೆ ಮೈತ್ರಿ [illegible]ಮಾಡಿಕೊಂಡಿದ್ದಕ್ಕೂ ನಾಡಿನ ಜನರ ಕ್ಷಮೆ ಕೇಳಲಿಲ್ಲ. [illegible]ಗಿರುವಾಗ ಬಿಜೆಪಿಯ ಶಂಕರಮೂರ್ತಿ ಟಿಪ್ಪು ಬಗ್ಗೆ [illegible]ವಹೇಳನಕಾರಿಯಾಗಿ ಮಾತಾಡಿದ್ದಕ್ಕೆ ಕ್ಷಮೆ ಕೋರಿ[illegible]ರೆಂಬುದೇ ಅವರ ಎಲೆಕ್ಷನ್ ಲೆಕ್ಕಾಚಾರಗಳನ್ನು [illegible]ರಿಸುತ್ತದೆ.

ಗೌಡ ಮತ್ತವರ ಅಧಿಕಾರದಾಹಿ ಮಕ್ಕಳು ಕೋಮು[illegible]ದಿಗಳ ತಾಳಕ್ಕೆ ತಕ್ಕಂತೆ ಕುಣಿಯಲು ಸಿದ್ಧರಿದ್ದಾರಾ[illegible]ದೂ ಅದರಿಂದ ಅವರ ಪಾರ್ಟಿಗೆ 'ಹಿಂದೂ ಓಟ್ [illegible]ಂಕ್' ಒಲಿಯುವುದಿಲ್ಲ. ಅದೇನಿದ್ದರೂ ಬಿಜೆಪಿ [illegible]ಪಾಲಿಗೆ ಹೋಗುತ್ತದೆ. ಆದರೆ ಜೆಡಿಎಸ್ ಕೋಮು[illegible]ದಿಗಳ ರೀತಿ ಮಾತಾಡಿದರೆ ಅಳಿದುಳಿದಿರುವ [illegible]ಸ್ಲಿಂ, ಹಿಂದುಳಿದವರ ಹಾಗೂ ದಲಿತರ ಓಟುಗ[illegible]ತೂ ದೂರವಾಗುವುದು ನಿಶ್ಚಿತ. ಈ ಕಾರಣದಿಂದಾ[illegible] ದೇವೇಗೌಡರು ಶಂಕರಮೂರ್ತಿ ಪರವಾಗಿ ಕ್ಷಮೆ ಕೇಳುವ ನಾಟಕವಾಡಿದ್ದಾರೆ.

ಇಷ್ಟಾದರೂ ಕಳೆದ ಒಂದೂವರೆ ವರ್ಷದಲ್ಲಿ ಗೌಡರ ಕುಟುಂಬ ಹಾಗೂ ಜಾತ್ಯತೀತ ದಳ ನಿಧಾನವಾಗಿ ಕೇಸರೀಕರಣಗೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿ ಹಲವಾರು ಘಟನೆಗಳು ಜರುಗಿವೆ.

ಗೌಡರ ನಕಲಿ ಸೆಕ್ಯುಲರಿಸಂ

ಈಗ್ಗೆ ಎರಡು ವರ್ಷಗಳ ಹಿಂದೆ ಹಲವು ಒಕ್ಕಲಿಗರು ಮತ್ತು ಲಿಂಗಾಯತರು ಗೋಮಾಂಸ ತಿನ್ನುತ್ತಾರೆಂದು ಗೌಡರು ಒಂದು ಹೇಳಿಕೆ ನೀಡಿದ್ದರು. ಕೂಡಲೇ ಅವರ ವಿರುದ್ಧ ಭಜರಂಗ ದಳದವರು ಒಂದೆರಡು ಹೇಳಿಕೆ ನೀಡಿದ್ದಕ್ಕೇ ಹೆದರಿಕೊಂಡ ಗೌಡರು ತಮ್ಮ ಹೇಳಿಕೆ ವಾಪಸ್ ಪಡೆದರು.

ಗೌಡರ ಸೆಕ್ಯುಲರಿಸಂನ ಸತ್ವಪರೀಕ್ಷೆಯಾಗಿದ್ದು 2006ರ ಫೆಬ್ರವರಿಯಲ್ಲಿ; ಕೋಮುವಾದಿ ಹಾಗೂ ಜಾತ್ಯತೀತ ದಳದ ಸಮ್ಮಿಶ್ರ ಸರ್ಕಾರ ರಚನೆಯಾದಾಗ ಅದನ್ನು ವಿರೋಧಿಸಿದಂತೆ ಉದ್ದಕ್ಕೂ ನಟಿಸಿಕೊಂಡು ಬಂದ ಗೌಡರು ಇವತ್ತು 'ಕುಮಾರಸ್ವಾಮಿ ಸರ್ಕಾರ ಉಳಿಸಲು ಅವರಪ್ಪ ನಾನು ಇನ್ನೂ ಬದುಕಿದ್ದೀನಿ' ಎಂದು ಅಬ್ಬರಿಸುವ ಮಟ್ಟಕ್ಕೆ ಹೋಗಿದ್ದಾರೆ.

ಟಿಪ್ಪು ವಿವಾದದಲ್ಲಿ ಗೌಡರೇನೊ ಕ್ಷಮೆ ಕೇಳಿಬಿಟ್ಟರು. ಆದರೆ ಇವತ್ತು ಕರ್ನಾಟಕದ ಕರಾವಳಿಯುದ್ದಕ್ಕೂ ಈಗಲೂ ಪ್ರತಿನಿತ್ಯ ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಸಂಘ ಪರಿವಾರದವರ ದಾಳಿ ದೌರ್ಜನ್ಯಗಳು ನಡೆಯುತ್ತಲೇ ಇವೆ.

ಇದರ ಬಗ್ಗೆ ಉಸಿರೆತ್ತುತ್ತಿಲ್ಲ ಸೆಕ್ಯುಲರ್ ಗೌಡರು.

ಕುಮಾರಸ್ವಾಮಿಯ ಕೋಮುವಾದ

'ಸೆಕ್ಯುಲರಿಸಂನ ಅರ್ಥ ನನಗೆ ಯಾವ ಡಿಕ್ಷನರಿಯಲ್ಲೂ ಸಿಗಲಿಲ್ಲ.'

ಇದು ಮುಖ್ಯಮಂತ್ರಿಯಾದೇಟಿಗೆ ಕುಮಾರಸ್ವಾಮಿ ಕೊಟ್ಟ ಹೇಳಿಕೆ. ದೇಶದ ಸಂವಿಧಾನದ ಆಶಯಗಳಲ್ಲಿ ಒಂದಾದ, ಸ್ವತಃ ಜನತಾದಳದ ಘೋಷಿತ ನಿಲುವೂ ಆಗಿದ್ದ 'ಜಾತ್ಯತೀತತೆ' ಬಗ್ಗೆ ಈ ಭಂಡತನದ ಪ್ರತಿಕ್ರಿಯೆ ನೀಡುವಾಗ ಕುಮಾರಸ್ವಾಮಿಯ ಮನಸ್ಥಿತಿ ಏನಿತ್ತು ಎಂಬುದು ಈಗ ಗುಟ್ಟಾಗಿ ಉಳಿದಿಲ್ಲ. ಅದು ಅಧಿಕಾರದಾಹ ಹಾಗೂ ಸರ್ಕಾರದ ಮೈತ್ರಿ ಪಕ್ಷವಾದ ಬಿಜೆಪಿಯನ್ನು ಖುಷಿಪಡಿಸುವ ಉದ್ದೇಶದಿಂದ ನೀಡಿದ್ದ ಹೇಳಿಕೆಯಾಗಿತ್ತು. ನಂತರ ಹೊಸ ಸರ್ಕಾರದಲ್ಲಿ ಮಂತ್ರಿಯಾದ ಬಜೆಪಿಯ ಬಂಟ್ವಾಳ ಶಾಸಕ ನಾಗರಾಜ ಶೆಟ್ಟಿ 'ಗುಜರಾತಿನ ನರೇಂದ್ರ ಮೋದಿಯೇ ನನ್ನ ಆದರ್ಶ ನಾಯಕ' ಎಂದು ಬಹಿರಂಗವಾಗಿ ಘೋಷಿಸಿದ್ದರು. ಆತ ಮಂತ್ರಿಯಾದ ದಿನವೇ ಕ್ಷೇತ್ರದಲ್ಲಿನ ಕೆಲ ಮುಸ್ಲಿಮರ ಅಂಗಡಿ, ಮುಂಗಟ್ಟುಗಳ ಮೇಲೆ ದಾಳಿಗಳಾದವು. ಕುಮಾರಸ್ವಾಮಿ ಈ ಗಲಭೆಗಳನ್ನು ನಿಯಂತ್ರಿಸಿ ತಪ್ಪಿತಸ್ಥರನ್ನು ಶಿಕ್ಷಿಸಲು ಮನಸ್ಸು ಮಾಡಲಿಲ್ಲ.

ಬಿಳಿದಾಳೆ ಈಶ

ಅಷ್ಟೇ ಅಲ್ಲ, ಈಗಲೂ ಕರಾವಳಿಯುದ್ದಕ್ಕೂ ಮುಸ್ಲಿಂ ವ್ಯಾಪಾರಿಗಳು, ವಿದ್ಯಾರ್ಥಿಗಳು, ಯುವಕರ ಮೇಲೆ ಸಂಘ ಪರಿವಾರ ಹಲ್ಲೆ ನಡೆಸುತ್ತಲೇ ಇದೆ. ಸರ್ಕಾರ ಇದನ್ನು ತಡೆಯುವ ಪ್ರಯತ್ನ ಮಾಡುತ್ತಿಲ್ಲ. ಇವೆಲ್ಲಕ್ಕೂ ಕಳಶವಿಟ್ಟಂತೆ ಕಳೆದ ತಿಂಗಳು ಪ್ರಧಾನಿಗಳ ಜೊತೆಗಿನ ಮುಖ್ಯಮಂತ್ರಿಗಳ ಸಭೆಯಲ್ಲಿ ಇದೇ ಕುಮಾರಸ್ವಾಮಿ ಮದರಸಾಗಳು ಭಯೋತ್ಪಾದಕರ ತಾಣಗಳಾಗಿವೆ ಎಂಬರ್ಥದ ಮಾತುಗಳನ್ನಾಡಿದ್ದರು. ಈ ನಿಲುವಂತೂ ಅಪ್ಪಟ ಭಜರಂಗಿ ಧೋರಣೆ. ನಂತರ ಈ ಹೇಳಿಕೆ ವಿರುದ್ಧ ಮುಸ್ಲಿಂ ಸಂಘಟನೆಗಳು ಪ್ರತಿಭಟಿಸಿದಾಗ 'ಮದರಸಾದಲ್ಲೇ ಹೋಗಿ ನಿದ್ದೆ ಮಾಡುವ' ಸಿಎಂ ಪ್ರೋಗ್ರಾಂ ಅನೌನ್ಸ್ ಆಯಿತು. ಆದರೆ ಮುಸ್ಲಿಮರು ಕುಮಾರಸ್ವಾಮಿ ವಿರುದ್ಧ ಎಷ್ಟು ಕೆರಳಿದ್ದರೆಂದರೇ 'ಯಾವುದೇ ಮದರಸಾಗಳಿಗೂ ಕುಮಾರಸ್ವಾಮಿಗೆ ಪ್ರವೇಶ ನೀಡುವುದಿಲ್ಲ'ವೆಂದು ನಿರ್ಣಯ ಮಾಡಿದ್ದಾರೆ.

ಈ ವರ್ಷ ಬಾಬಾಬುಡನ್ ಗಿರಿಯಲ್ಲಿ ಮತ್ತೆ ಹಿಂದೂತ್ವವಾದಿಗಳು ಶೋಭಾಯಾತ್ರೆ ಹಾಗೂ ದತ್ತಮಾಲೆ ಕಾರ್ಯಕ್ರಮ ಘೋಷಿಸಿದ್ದು ಇದೂ ಸಹ ಜನತಾದಳ (ಜಾತ್ಯತೀತ)ದ ಕೋಮುವಾದಿ ಪರ ಒಲವನ್ನು ತೋರಿಸಿದೆ.

ಈಗಾಗಲೇ ಸುಪ್ರೀಂಕೋರ್ಟ್ ಸಹ 1973ಕ್ಕಿಂತಾ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶವಿರಬೇಕೆಂದು ಸ್ಪಷ್ಟವಾಗಿ ಹೇಳಿದ್ದರೂ ಹಾಲಿ ಕೋ-ಜಾ ಸರ್ಕಾರವು ಅದನ್ನು ನಿರ್ಲಕ್ಷಿಸಿ ದತ್ತಮಾಲೆ ಬಗ್ಗೆ ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸುವುದಾಗಿ ಹೇಳಿದೆ. ಇದು ತೋರಿಕೆಗೆ ಮಾತ್ರ. ಏಕೆಂದರೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಈಗಾಗಲೇ ಶೋಭಾಯಾತ್ರೆ, ದತ್ತಮಾಲೆಯನ್ನು ವಿಜೃಂಭಣೆಯಿಂದ ಆಚರಿಸುವಂತೆ ಕರೆಯನ್ನೇ ನೀಡಿದ್ದಾರೆ. ಇದು ಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆಯಾಗಿದೆ. ಆದರೆ ಅಧಿಕಾರವೇ ಮುಖ್ಯವಾದವರಿಂದ ಸಂವಿಧಾನದ ಆಶಯ, ಕೋರ್ಟ್ ಆದೇಶದ ಪಾಲನೆ, ಶಾಂತಿ ಸಾಮರಸ್ಯಗಳನ್ನು ನಿರೀಕ್ಷಿಸಲಾಗದು. ■

ಪುರೋಹಿತರ ಗುಲಾಮ ಗಿರಿಯಲ್ಲಿ ರೇವಣ್ಣ

ದೇವೇಗೌಡರು ಹಾಗೂ [illegible]ದಿಚುಂಚನಗಿರಿ ಮಠದ ಸಂಬಂಧ [illegible]ಳಸಿದ ಮೇಲೆ ಈಗ ಬ್ರಾಹ್ಮಣ [illegible]ಠಗಳ ಮೊರೆ ಹೋಗಿದ್ದಾರೆ.



ರಸ್ತೆಯ ಕಾಮಗಾರಿಯನ್ನು ಉದ್ಘಾಟಿಸುತ್ತಿರುವ ಕುಮಾರಸ್ವಾಮಿ ಮತ್ತು ರೇವಣ್ಣ

ಶೃಂಗೇರಿಯ ಬ್ರಾಹ್ಮಣ ಮಠ [illegible]ಗ ಗೌಡರ ಕುಟುಂಬದ [illegible]ಭಯಾಶ್ರಮವಾಗಿ ಹೋಗಿದೆ. [illegible]ಗಿನ ಕೋ-ಜಾ ಸರ್ಕಾರವಂತೂ [illegible]ಗೇರಿಯ ಪುರೋಹಿತರು [illegible]ಲ್ಲಿ ತೋರಿಸಿದ್ದನ್ನು ತಲೆ ಮೇಲೆ [illegible]ತ್ತು ನಡೆಸಿಕೊಡುತ್ತಿದ್ದಾರೆ. ಕಳೆದ [illegible] ಗುರುಗಳ ವಾಸ್ತವ್ಯದ [illegible]ಸಿಂಹವನದಿಂದ ಶೃಂಗೇರಿ [illegible]ವಸ್ಥಾನದವರೆಗೆ 1.5 ಕೋಟಿ [illegible] ಸರ್ಕಾರಿ ಹಣ ಖರ್ಚು [illegible] ರಸ್ತೆ ನಿರ್ಮಿಸಿಕೊಡಲಾಗಿದೆ. ಇನ್ನು ಸ್ವಾಮಿಗಳ [illegible]ಪಲ್ಲಕ್ಕಿ, ಉತ್ಸವ ಮೆರವಣಿಗೆಗೆ ತಡೆಯಾಗುತ್ತಿದೆ [illegible]ದು ಹೇಳಿ ಶೃಂಗೇರಿ ಟೌನಿನ ರಸ್ತೆಯಲ್ಲಿದ್ದ ಕರೆಂಟು [illegible]ಗಳನ್ನು ತೆಗೆ[illegible] ಅಂಡರ್‌ಗ್ರೌಂಡ್ ಕೇಬಲ್ ಹಾಕಿಸ[illegible]ದೆ.

[illegible] ಶೃಂಗೇರಿಯಲ್ಲಿ 17 ಕೋಟಿ ರೂಪಾಯಿ [illegible] ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ [illegible]ಲಾಯಿತು. ಆದರೆ ಈ ಕಾರ್ಯಕ್ರಮದ [illegible] ನೋಡಿದವರಿಗೆ ಇದೇನು ಸರ್ಕಾರಿ [illegible] ಬರುವಷ್ಟು ಇದೇ ಪ್ರೋಗ್ರಾಂ ಮಠ[illegible]ಗಿತ್ತು, ಇದೇ ಸರ್ಕಾರಿ ಕಾರ್ಯಕ್ರಮ [illegible] ಸ್ವಾಮಿಗಳ ಆಶೀರ್ವಾದದೊಂದಿಗೆ [illegible] ಎಂದೇ [illegible]ಲಾಗಿತ್ತು, ವಾಸ್ತವವಾಗಿ [illegible] ಶೃಂಗೇರಿಯಲ್ಲಿ ಯಾವುದೇ ಸಮಸ್ಯೆ ಇರಲಿ, [illegible] ಕಾರ್ಯಕ್ರಮವಿರಲಿ [illegible] ವಿಷಯವೇ [illegible]ವುದು ಮಠವೇ ವಿನಃ ಜನಪ್ರತಿನಿಧಿಗಳೂ ಅಲ್ಲ ಸರ್ಕಾರವೂ ಅಲ್ಲ ಎಂಬಂತಿದೆ.

ಜನರ ಸಮಸ್ಯೆಗಳಿಂದ ಸದಾ ದೂರವಿರುವ, ಲೌಕಿಕ-ರಾಜಕೀಯ ನಮಗೇಕೆ ಎನ್ನುವ ಮಠ ನಿತ್ಯ ಲೌಕಿಕದಲ್ಲೇ ಮುಳುಗೇಳುತ್ತಿದೆ.

ಸಚಿವ ರೇವಣ್ಣ ಕೆಲ ತಿಂಗಳ ಹಿಂದೆ ಗುರುಗಳ ಪಾದಪೂಜೆಗಾಗಿ ಶೃಂಗೇರಿಗೆ ಹೋಗಿ ನಂತರ ಪೂಜೆಗೆಂದು ದೇವಸ್ಥಾನಕ್ಕೆ ಹೋದಾಗ ಪುರೋಹಿತ ಕೃಷ್ಣಭಟ್ಟರ ಆಗಮನಕ್ಕೆ ಅರ್ಧ ಗಂಟೆ ತಡವಾಗಿತ್ತು. ರೇವಣ್ಣ ಕಾರಣ ಕೇಳಿದಾಗ 'ದಾರಿ ಸರಿ ಇಲ್ಲ, ಹಳ್ಳದಾಟ ಕಾಡು ಹಾದೀಲಿ ಬರಬೇಕು' ಎಂದಿದ್ದಾರೆ ಭಟ್ಟರು. ಈ ರೇವಣ್ಣ ಎಂತಾ ದಾನಶೂರ ಕರ್ಣನೆಂದರೆ ಸ್ಥಳದಲ್ಲೇ 'ಎಕ್ಸನಹಳ್ಳಕ್ಕೆ ಸೇತುವೆ ನಿರ್ಮಾಣಕ್ಕೆ 50 ಲಕ್ಷ ರೂ' ಮಂಜೂರು ಮಾಡಿ ಹೋಗಿದ್ದಾರೆ. ವಾಸ್ತವವಾಗಿ ಈಗಾಗಲೇ ಎಕ್ಸನಹಳ್ಳಕ್ಕೆ ಒಂದು ಸೇತುವೆ ಇದೆ. ಬಸವಲಿಂಗಪ್ಪ ಸಚಿವರಾಗಿದ್ದಾಗ ಕಟ್ಟಿದ ಸೇತುವೆ [illegible]

ಈ ಪುರೋಹಿತ ಕೃಷ್ಣಭಟ್ಟ ಎಂತಾ ಗಟ್ಟಿಗರೆಂದರೆ ತನ್ನ ಮನೆಗೂ ಗುರುಗಳು ವಾಸಿಸುವ ನರಸಿಂಹವನಕ್ಕೂ ಮಧ್ಯೆ ಹಾಯುವ ತುಂಗಾ ನದಿಗೇ ಪ್ರತ್ಯೇಕ ಸೇತುವೆ ಹಾಗೂ 1.5 ಕೋಟಿ ರೂ. ವೆಚ್ಚದಲ್ಲಿ ಹೊಸರಸ್ತೆ ಮಂಜೂರು ಮಾಡಿಸಿಕೊಂಡಿದ್ದಾರೆ. ವಿದ್ಯಾರಣ್ಯಪುರ ಅಗ್ರಹಾರ ಕಾಲು ಹಾದಿಯಲ್ಲಿ ಕ್ರಮಿಸಿದರೆ 1 ಕಿ.ಮೀ. ಆಗುತ್ತದೆ. ಈ ಊರಿಗೆ ಈಗಾಗಲೇ ಸರ್ವಋತು ಟಾರ್ ರೋಡಿದೆ.

ಇಲ್ಲಿರುವ ಜನಸಂಖ್ಯೆ ಎಷ್ಟು ಗೊತ್ತೆ?

ಕೇವಲ 21 ಬ್ರಾಹ್ಮಣರ ಕುಟುಂಬ, ಇಬ್ಬರು ವಿದೇಶಿಯರು ಹಾಗೂ ಒಂದು ಒಕ್ಕಲಿಗರ ಸಂಸಾರ. ವಿದ್ಯಾರಣ್ಯಪುರಕ್ಕೆ ರಾಷ್ಟ್ರೀಯ ಹೆದ್ದಾರಿಯಿಂದ ಸಾಗಿದರೆ 3ಕಿ.ಮೀ. ಆಗುತ್ತದೆ. ಆದರೆ ದೇವಬ್ರಾಹ್ಮಣರು ಕಷ್ಟ ಪಡಬಾರದೆಂದು ರೇವಣ್ಣ 1.5 ಕೋಟಿ ರೂ.ಗಳ ಹೊಸ ರಸ್ತೆ ಮಂಜೂರು ಮಾಡಿದ್ದಾರೆ.



ಈ ಉದ್ದೇಶಿತ ವಿದ್ಯಾರಣ್ಯಪುರ ರಸ್ತೆಯು ಸಂಪೂರ್ಣ ಖಾಸಗಿ ಜಮೀನುಗಳ ಮಧ್ಯೆಯೇ ಹೋಗಬೇಕಿದ್ದು ಭಾರತೀಬೀದಿಯ ಒಂದು ಲಾಡ್ಜ್ ಎರಡು ಮನೆಗಳು ಹಾಗೂ ಹತ್ತಾರು ಎಕರೆ ತರಿ ಜಮೀನು, ಅಡಿಕೆ ತೋಟಗಳು ನಾಶವಾಗಲಿವೆ. ವಿದ್ಯಾರಣ್ಯಪುರದಲ್ಲೂ ಕೆಲ ಮನೆಗಳು ಹೋಗಲಿವೆ. ಈ ರಸ್ತೆ ಮಠದ ಜಮೀನಿನ ಪಕ್ಕದಲ್ಲೇ ಹೋದರೂ ಸಹ ಮಠದ ವಿರೋಧಿಗಳೆಂದು ಪರಿಸರವಾದಿ ಹೋರಾಟಗಾರ ಕಲ್ಕುಳಿ ವಿಠಲ ಹೆಗಡೆ ಹಾಗೂ ಇತರ ಶೂದ್ರರ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ರಸ್ತೆ ಮಾಡಿಸಲು ಹೊರಟಿದ್ದಾರೆ ಸಚಿವ ರೇವಣ್ಣ. ಇದರ ವಿಪರ್ಯಾಸ ನೋಡಿ, ಕೇವಲ 50 ಜನ ಬ್ರಾಹ್ಮಣರಿರುವ ವಿದ್ಯಾರಣ್ಯಪುರಕ್ಕೆ 50 ಲಕ್ಷದ ಎರಡನೇ ಸೇತುವೆ, ಒಂದೂವರೆ ಕೋಟಿ ರೂ.ಗಳ ಹೊಸ 2 ನೇ ರಸ್ತೆ ಮಂಜೂರು ಮಾಡಿದೆ ಸರ್ಕಾರ.

ಆದರೆ ಅದೇ ಮಲೆನಾಡಿನಲ್ಲಿ ಸಾವಿರಾರು ಆದಿವಾಸಿಗಳು ರಸ್ತೆ, ನೀರು, ವಿದ್ಯುತ್, ಶಾಲೆ ಆಸ್ಪತ್ರೆಗಳಿಲ್ಲದೆ ಕೊನೆಗೆ ರೇಷನ್ ಕಾರ್ಡಿಗೂ ಗತಿಯಿರದೆ ಅತಂತ್ರ ಸ್ಥಿತಿಯಲ್ಲೇ ಕಾಲಹಾಕುತ್ತಿದ್ದಾರೆ. ಸರ್ಕಾರ ಇವರ ಕಡೆ ಕಣ್ಣೆತ್ತಿಯೂ ನೋಡು[illegible]ತ್ತಿಲ್ಲ. ಬದಲಾಗಿ ಗುರುಗಳು ಆದೇಶಿಸಿ[illegible]


ಕ್ಯಾಬಿನೆಟ್ ಮಂತ್ರಿಯೊಬ್ಬ ಪೊಲೀಸ್ ಠಾಣೆಗೇ ಬಂದು ಬೊಬ್ಬೆಯಿಟ್ಟರೂ ಇನ್‌ಸ್ಪೆಕ್ಟರ್ ಕ್ಯಾರೇ ಎನ್ನುವುದಿಲ್ಲ. ಆತನ ಮಾತಿನ ಮುಂದೆ ಕೋರ್ಟ್ ಆದೇಶ ಕೂಡ ಪೊಲೀಸರಿಗೆ ಲೆಕ್ಕಕ್ಕಿಲ್ಲ. ಇದು ಕಬಡ್ಡಿ ಬಾಬು ಎಂಬ ಮುಖ್ಯಮಂತ್ರಿಯ ಪಾರ್ಟ್‌ನರ್‌ನ ರಕ್ಕಸ ರಾಜಕೀಯಕ್ಕೆ ಸಣ್ಣ ಸ್ಯಾಂಪಲ್ಲು!

ಮಂತ್ರಿ ರಾಮಚಂದ್ರಗೌಡರಿಗೇ ಮುಖಭಂಗ

ಕಬಡ್ಡಿ ಬಾಬು ಅಟ್ಟಹಾಸ

ಎಂ.ವಿ. ಪ್ರಸಾದ್‌ಬಾಬು ಅಲಿಯಾಸ್ ಕಬಡ್ಡಿ ಬಾಬು ಎಂಬ ಮಾಜಿ ರೌಡಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಕೇಬಲ್ ಧಂದೆಯ ಬೇನಾಮಿ ಮತ್ತು ಅವರ ಭವಿಷ್ಯದ ಕನಸಾದ ಕಸ್ತೂರಿ ಟೀವಿ ಚಾನಲ್ಲಿಗೂ ಪಾಲುದಾರನೆಂಬುದು ಎಷ್ಟು ಸತ್ಯವೋ ಆತ ಮುಖ್ಯಮಂತ್ರಿಯ ರಿಯಲ್ ಎಸ್ಟೇಟ್ ಬುಸಿನೆಸ್‌ಗೂ 'ಫ್ರಂಟ್‌ಮನ್' ಎಂಬುದು ಕೂಡ ರಹಸ್ಯವೇನಲ್ಲ. ಇಮತ್ತು ಉತ್ತರಹಳ್ಳಿ, ಬನಶಂಕರಿ, ಕನಕಪುರ ರಸ್ತೆ, ಕೆಂಗೇರಿ, ಬಿಡದಿ ಸುತ್ತಮುತ್ತ ಆತ ಹುಟ್ಟು ಹಾಕಿದ ನೆಲಗಳ್ಳರ ಸಂತತಿ ಹೇಗೆ ಜನಸಾಮಾನ್ಯರ ಪಾಲಿಗೆ ಕಂಟಕವಾಗಿದೆ ಮತ್ತು ಆತನ ಅಟ್ಟಹಾಸದ ಮುಂದೆ ಕೋರ್ಟು, ಕಾನೂನು, ಪೊಲೀಸು ಅದೆಷ್ಟು ನಿರ್ವೀರ್ಯಗೊಂಡಿವೆ ಎಂಬುದಕ್ಕೆ ಈ ಘಟನೆಯೇ ಪುರಾವೆಯಂತಿದೆ.

ಇದೇ ಸೆಪ್ಟೆಂಬರ್ 16 ರ ಸಂಜೆ ಲಾಟರಿ ಮಂತ್ರಿ ರಾಮಚಂದ್ರೇಗೌಡ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ಬಂದು ಇನ್‌ಸ್ಪೆಕ್ಟರ್ ಶಿವಣ್ಣನ ಮುಂದ ಬಾಯಿಬಡಿದುಕೊಂಡಿದ್ದು, ಅದು ಪತ್ರಿಕೆಗಳಲ್ಲಿ ವರದಿಯಾದದ್ದು ಸುದ್ದಿಯಾಯಿತೇ ಹೊರತು ಅದು ಕಬಡ್ಡಿ ಬಾಬು ಕಾರಣಕ್ಕೇ ನಡೆದ ಘರ್ಷಣೆಯೆಂಬುದು ನಿಗೂಢವಾಗೇ ಉಳಿಯಿತು. ಅದಕ್ಕೆ ಕಾರಣನಾದವನು ಸುಬ್ರಹ್ಮಣ್ಯಪುರದ ಇನ್‌ಸ್ಪೆಕ್ಟರ್ ಶಿವಣ್ಣ. ಈತ ಕಂಡಕಂಡ ಪತ್ರಿಕೆಗಳಿಗೆ ಫೋನ್ ಮಾಡಿ ಮಂತ್ರಿ ರಾಮಚಂದ್ರೇಗೌಡರು ಪೊಲೀಸ್ ಠಾಣೆಗೆ ನುಗ್ಗಿ ರಂಪ ಮಾಡಿಬಿಟ್ಟರು ಎಂಬ ಸುದ್ದಿ ಕೊಟ್ಟನೇ ಹೊರತು ಅವರು ಯಾವ ಕಾರಣಕ್ಕೆ ಬಂದಿದ್ದರು ಎಂಬುದನ್ನು ವಿವರಿಸಲಿಲ್ಲ.


ಕಬಡ್ಡಿ ಬಾಬು

ಹಕೀಕತ್ತೇನೆಂದರೆ; ಕಬಡ್ಡಿ ಬಾಬು ತಮ್ಮ ನರೇಂದ್ರನ ಗ್ಯಾಂಗ್ ಕೋರ್ಟ್ ಆದೇಶವನ್ನೂ ಧಿಕ್ಕರಿಸಿ ಹಾಡು ಹಗಲೇ ಕಟ್ಟಿದ ಮನೆಯೊಂದನ್ನು ನೆಲಸಮಗೊಳಿಸಿದೆ. ಸಾರ್ವಜನಿಕ ರಸ್ತೆಗೇ ಬೇಲಿ ಹಾಕಿ ಅದನ್ನು ಸೈಟು ಮಾಡಿ ಮಾರಿ ಹಾಕಲು ಮುಂದಾಗಿದೆ. ಅದರ ವಿರುದ್ಧ ಉತ್ತರಹಳ್ಳಿಯ ಜನ ರೊಚ್ಚಿಗೆದ್ದಿದ್ದಾರೆ.

ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದೇ ರಕ್ಕಸನಂತೆ ಎದ್ದು ನಿಂತವನು ಉತ್ತರಹಳ್ಳಿಯ ಭೂಪ ಕಬಡ್ಡಿ ಬಾಬು. ಆತನ ತಂದೆ ಗಾರೆ ಕಾಲುವೆ ವೆಂಕಟಸ್ವಾಮಿ ನಾಯ್ಡು 1970 ರ ಹೊತ್ತಿಗೆ ಉತ್ತರಹಳ್ಳಿ ಸರ್ವೆ ನಂಬರ್ ನಲವತ್ತರಲ್ಲಿ ಇಪ್ಪತ್ತೆರಡು ಗುಂಟೆ ಜಮೀನು ಕೊಂಡು ಸೈಟು ಮಾಡಿ ಮಾರಿದ್ದ. ಆತನಿಂದ ಸೈಟು ಕೊಂಡಿದ್ದ ಸುಬ್ರಮಣಿನಾಯ್ಡು ಎಂಬಾತ ಉತ್ತರಹಳ್ಳಿಯ ಮೂರನೇ ಮುಖ್ಯರಸ್ತೆಯಲ್ಲಿ 23, 24 ಮತ್ತು 25 ನೇ ನಂಬರಿನ ಮೂರು ಸೈಟುಗಳನ್ನು ನಾರಾಯಣ ಎಂಬುವವನಿಗೆ ಮಾರಿದ್ದಾನೆ. ಆ ಕಾಲಕ್ಕೇ ಅದನ್ನು ನಾಲ್ಕೂವರೆ ಸಾವಿರ ರೂಪಾಯಿ ತೆತ್ತು ನಾರಾಯಣ ಕೊಂಡಿದ್ದ. ಅದರಲ್ಲಿ ಒಂದು ಸೈಟಿನಲ್ಲಿ ನಾರಾಯಣನ ಅಣ್ಣ ನಾಗರಾಜ್ ಮನೆ ಕಟ್ಟಿಸಿಕೊಂಡರೆ ಮುಂಭಾಗದಲ್ಲಿ ನಾರಾಯಣ ಮನೆ ಕಟ್ಟಿಸಲಾರಂಭಿಸಿದ.



ರಸ್ತೆಗೆ ಬೇಲಿ ಹಾಕುತ್ತಿರುವ ಬಾಬು ಗ್ಯಾಂಗ್

ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಅಪ್ಪ ವೆಂಕಟಸ್ವಾಮಿ ಆ ಕಾಲಕ್ಕೆ ನಾಲ್ಕೋ-ಐದೋ ಸಾವಿರಕ್ಕೆ ಮಾರಿದ್ದ ಸೈಟುಗಳಿಗೆಲ್ಲ ಕಬಡ್ಡಿ ಬಾಬು ಕಾಟ ಶುರುವಾಯಿತು. ಅದಕ್ಕೆಂದೇ ತನ್ನ ಪರಮಾಪ್ತ ಇನ್‌ಸ್ಪೆಕ್ಟರ್ ಶಿವಣ್ಣನನ್ನು ಸುಬ್ರಹ್ಮಣ್ಯಪುರಕ್ಕೆ ಬಾಬು ಹಾಕಿಸಿಕೊಂಡಿದ್ದ. ಈಗ ಒಂದೊಂದು ಸೈಟೂ ಕಮ್ಮಿಯೆಂದರೂ ಹದಿನೈದಿಪ್ಪತ್ತು ಲಕ್ಷ ಬೆಲೆ ಬಾಳುತ್ತದೆ. ಸೈಟು ಖರೀದಿಸಿದವರು ಹಾಕಿದ ಕಾಂಪೌಂಡನ್ನೋ ಪಾಯವನ್ನೋ ರೌಡಿಗಳನ್ನು ಬಿಟ್ಟು ಹೊಡೆಸಿದರೆ ಅವರು ಹೋಗಿ ಇನ್‌ಸ್ಪೆಕ್ಟರ್ ಶಿವಣ್ಣನಿಗೆ ತಾನೇ ಕಂಪ್ಲೇಂಟ್ ಕೊಡುತ್ತಾರೆ. ಶಿವಣ್ಣ 'ನೋಡ್ರೀ ಇದು ಸಿವಿಲ್ ಮ್ಯಾಟ್ರು ಕೋರ್ಟಲ್ಲಿ ನೋಡ್ಕಳ್ಳೀ....' ಎಂದು ಸಾಗ ಹಾಕುತ್ತಾನೆ. ಅಲ್ಲಿಗೆ ಸೈಟು ಮಾಲೀಕ ಬಾಬು ಗ್ಯಾಂಗ್ ಕೊಟ್ಟಷ್ಟು ಈಸಿಕೊಂಡು ಖಾಲಿ ಮಾಡುತ್ತಾನೆ. ಇದು ಕಬಡ್ಡಿ ಬಾಬು ಗ್ಯಾಂಗ್‌ನ ಹುನ್ನಾರ.

ಕುಮಾರಣ್ಣ ಮುಖ್ಯಮಂತ್ರಿಯಾದಾಗಿನಿಂದ ಉತ್ತರಹಳ್ಳಿಯೊಂದರಲ್ಲೇ ಕಬಡ್ಡಿ ಬಾಬು ಪಡೆ ಇಂಥ ಹದಿನೆಂಟು ಸೈಟುಗಳನ್ನು ನುಂಗಿ ಹಾಕಿದೆ. ಇದು ತನ್ನ ಬುಡಕ್ಕೇ ಬರುತ್ತದೆಯೆಂಬ ಲೆಕ್ಕಾಚಾರ ನಾರಾಯಣನಿಗಿರಲಿಲ್ಲ. ಏಕೆಂದರೆ ಆತನ ಅಣ್ಣ ನಾಗರಾಜ್ ಉತ್ತರಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯ. ಆ ಕಾಲದಿಂದಲೂ ಕಬಡ್ಡಿ ಬಾಬು ಅಟ್ಟಹಾಸದ ವಿರುದ್ಧ ಹೋರಾಡಿಕೊಂಡೇ ಬಂದವನು. ಬಾಬು ತಮ್ಮ ತಂಟೆಗೆ ಕೈಹಾಕುವ ಧೈರ್ಯ ಮಾಡಲಿಕ್ಕಿಲ್ಲ ಎಂದೇ ಭಾವಿಸಿದ್ದ ಅವರಿಗೆ ಆಗಸ್ಟ್ 18 ರ ಬೆಳಿಗ್ಗೆ ಆಘಾತ ಕಾದಿತ್ತು. ಬಾಬು ಆತನ ತಮ್ಮ ನರೇಂದ್ರ ಮತ್ತು ಹತ್ತು ಮಂದಿಯಿದ್ದ ಗ್ಯಾಂಗ್ ಇದ್ದಕ್ಕಿದ್ದಂತೆ ನಾರಾಯಣ ಕಟ್ಟಿಸುತ್ತಿದ್ದ ಮನೆ ಮೇಲೆ ದಾಳಿ ಮಾಡಿ ಮಾಡಿನ ಶೀಟ್ ಹೊಡೆದು ಹಾಕಿತ್ತು.

ಇದಕ್ಕಿಂತಲೂ ದೊಡ್ಡ ಆಘಾತ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಯಲ್ಲಿ ಕಾದಿತ್ತು. ಬಾಬು ಗ್ಯಾಂಗ್ ಬಂದು ಮನೆ ಒಡೆದ ಬಗ್ಗೆ ಅಣ್ಣ ನಾಗರಾಜ್ ಮತ್ತು ನಾರಾಯಣ ದೂರು ಕೊಟ್ಟರೆ ಇನ್‌ಸ್ಪೆಕ್ಟರ್ ಶಿವಣ್ಣ ತನ್ನ ಪಕ್ಕದಲ್ಲೇ ನರೇಂದ್ರನನ್ನು ಕೂಡ್ರಿಸಿಕೊಂಡು 'ನೋಡ್ರಿ... ಇದು ಸರಿಯಾಗಿದೆಯಾ?' ಎಂದು ಕಣಿ ಕೇಳುತ್ತಿದ್ದ!

'ಅಲ್ರೀ ಯಾರ ಮೇಲೆ ಕಂಪ್ಲೇಂಟ್ ಕೊಟ್ಟಿದ್ದೇವೋ ಅವನಿಗೇ ಕೇಳ್ತಾ ಇದ್ದೀರಲ್ರೀ, ನ್ಯಾಯಾನಾ ಇದು' ಎಂದು ನಾಗರಾಜ್ ಪ್ರಶ್ನಿಸಿದರೆ ಶಿವಣ್ಣ 'ಜಾಸ್ತಿ ಮಾತಾಡ್‌ಬೇಡ. CRPC ಸೆಕ್ಷನ್ ಪ್ರಕಾರ ನಿನ್ನ ಆಸ್ತೀನೆಲ್ಲ ಸರ್ಕಾರಕ್ಕೆ ಅಟ್ಯಾಚ್ ಮಾಡ್ಬೋಬೇಕಾಗುತ್ತೆ' ಎಂದು ಹೂಂಕರಿಸಿಬಿಟ್ಟ. ಈ ಬಗ್ಗೆ ಆಗಸ್ಟ್ 20 ರಂದೇ ನಾಗರಾಜ್ ಕೋರ್ಟಿಗೆ ಅರ್ಜಿ ಹಾಕಿದ್ದಾರೆ. ಕೋರ್ಟು ಬಾಬು ಗ್ಯಾಂಗ್ ವಿರುದ್ಧ ಪ್ರತಿಬಂಧಕಾಜ್ಞೆ ನೀಡಿದೆ. ಅದನ್ನು ಹಿಡಿದು ನಾಗರಾಜ್ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ಬಂದರೆ ಇನ್‌ಸ್ಪೆಕ್ಟರ್ ಶಿವಣ್ಣ 'ಕೋರ್ಟಿಗೆ ಹೋಗಿಬಿಟ್ರೆ ನಾನು ಕೇಳ್ತೀನಾ? ಹೋಗು ಅವರನ್ನೇ ಕೇಳು' ಎಂದು ಸಾಗಹಾಕಿದ್ದಾನೆ. ಇನ್ನೂ ವಿಚಿತ್ರವೆಂದರೆ ಅದರ ಮರುದಿನವೇ ಬಾಬು ತಮ್ಮ ನರೇಂದ್ರ ಮತ್ತೆ ಇಪ್ಪತ್ತು ಮಂದಿಯ ಗ್ಯಾಂಗ್ ಕಟ್ಟಿಕೊಂಡು ಬಂದು ಮನೆಯ ಪಾಯದ ಸಮೇತ ನೆಲಸಮಗೊಳಿಸಿದ್ದಾನೆ. ನಾಗರಾಜ್ ಈ ಬಗ್ಗೆ ಪೊಲೀಸ್ ಕಮೀಷನರ್ ಅಚ್ಯುತರಾವ್‌ಗೇ ಹೋಗಿ ದೂರಿತ್ತರು. ನಯಾಪೈಸೆಯ ಪ್ರಯೋಜನವಾಗಲಿಲ್ಲ.


ಉತ್ತರಹಳ್ಳಿ ನಾಗರಾಜ್

ಇದು ಇಲ್ಲಿಗೇ ನಿಲ್ಲಲಿಲ್ಲ. ಇದಾಗಿ ಎರಡು ದಿನಕ್ಕೇ ನರೇಂದ್ರನ ಗ್ಯಾಂಗ್ ನಾಗಾರಾಜ್ ಮನೆ ಪಕ್ಕದ ನಾಲ್ಕನೇ ಮುಖ್ಯರಸ್ತೆಗೇ ಬೇಲಿ ಹಾಕಿತು. ನಾರಾಯಣ ಸೈಟಿಗೇ ಅಡ್ಡ ಬರುವಂತೆ ರಸ್ತೆಯನ್ನು ತಿರುಚಿತು. ಇದರರ್ಥ ಪಕ್ಕದ ರಸ್ತೆಯ ಜಮೀನನ್ನು ತಾವು ಕಬಳಿಸಿ, ರಸ್ತೆಗೆಂದು ನಾಗರಾಜನ ಮನೆ ... ಗೊಳಿಸುವುದು ಬಾಬು ಗ್ಯಾಂಗ್‌ನ ಉದ್ದೇಶವಾಗಿ...

ಹೀಗೆ ನಾಗರಾಜನಿಗೆ ಕಾಟ ಕೊಟ್ಟು ಮ... ಆತನ ತಮ್ಮನ ಮನೆ ಧ್ವಂಸ ಮಾಡಿದ ಕಬಡ್ಡಿ ... ಗ್ಯಾಂಗ್ ಆನಂತರ ಆತನ ಮನೆಗೇ ರಸ್ತೆಯ ನೆ... ಬುಲ್ಡೋಜರ್ ನುಗ್ಗಿಸಲು ಷಡ್ಯಂತ್ರ ರೂಪಿಸಿತ್ತು. ನಾಗರಾಜನನ್ನು ಬಗ್ಗಿಸಿ ಕೆಂಗೇರಿ ಸಮೀಪದ ವಡ್ಡರ... ಒಂದೆಕರೆ ಜಮೀನನ್ನು ಕಿತ್ತುಕೊಳ್ಳುವುದು ಕಬಡ್ಡಿ ಬಾ... ಮೂಲ ಉದ್ದೇಶವಾಗಿತ್ತು. ವಡ್ಡರಪಾಳ್ಯದ ಸ.ನಂ.8... ತಿಮ್ಮಯ್ಯ ಉರ್ಫ್ ಕದಿರಪ್ಪ ಎಂಬಾತನ ಒಂದೆಕರೆ ಜ... ಗಾಗಿ ನಾಗರಾಜ್ ಮತ್ತು ಕಬಡ್ಡಿ ಬಾಬು ಮಧ್ಯೆ ಕೋ... ನಲ್ಲಿ ವಿವಾದವಿದೆ. ಈಗ ಇನ್‌ಸ್ಪೆಕ್ಟರ್ ಶಿವಣ್ಣ... ಮುಂದಿಟ್ಟುಕೊಂಡು ನಾಗರಾಜನಿಗೆ ಕಾಟ ಕೊಟ್ಟರ... ತನ್ನ ಮನೆ ಉಳಿಸಿಕೊಳ್ಳುವುದಕ್ಕಾದರೂ ಆತ ವಡ್ಡರ... ಒಂದೆಕರೆಯನ್ನು ಬಿಟ್ಟುಕೊಡುತ್ತಾನೆಂಬುದು ಕಬಡ್ಡಿ ... ಲೆಕ್ಕಾಚಾರ.

ದುರಂತವೆಂದರೆ ಸಾರ್ವಜನಿಕ ರಸ್ತೆಗೇ ಬಾಬು ... ಬೇಲಿ ಹಾಕಿದಾಗಲೂ ಉತ್ತರಹಳ್ಳಿ ... ಪಂಚಾಯ್ತಿ ತೆಪ್ಪಗಿದೆ. ಅಷ್ಟಕ್ಕೂ ರಸ್ತೆ... ತಿರುಚುವಂತೆ ಪಂಚಾಯ್ತಿ ಯಾ... ನಿರ್ಣಯ ಕೈಗೊಂಡಿಲ್ಲ. ಈ ಬಗ್... ಮಂತ್ರಿ ರಾಮಚಂದ್ರೇಗೌಡರ ಬಳಿ ... ಎದೆ ಬಡಿದುಕೊಂಡಿದ್ದಾರೆ. ... ಅನ್ಯಾಯವನ್ನು ಪೊಲೀಸರೇ ನಿಂತು ... ದ್ದನ್ನು ಕೇಳಿ ರಾಮಚಂದ್ರೇಗೌಡರಿ... ಕೆಟ್ಟಿದೆ. ಇನ್‌ಸ್ಪೆಕ್ಟರ್ ಶಿವಣ್ಣನ ದ... ಹೇಗಿತ್ತೆಂದರೆ, ಸಾಕ್ಷಾತ್ ರಾಮಚ... ಗೌಡರೇ ಫೋನ್ ಮಾಡಿ ಕರೆದ... ಅದನ್ನು ಧಿಕ್ಕರಿಸಿದ್ದ. ಕೊನೆಗೆ ಕು... ಸೆಪ್ಟೆಂಬರ್ ಹದಿನಾರರ ಸಂಜೆ ರಾಮ... ಗೌಡರೇ ಸುಬ್ರಹ್ಮಣ್ಯಪುರ ಪೊಲೀಸ್ ಠಾಣೆಗೆ ... ಶಿವಣ್ಣನ ಭೂತ ಬಿಡಿಸಿದ್ದಾರೆ.

ತಮಾಷೆಯೆಂದರೆ ಇನ್‌ಸ್ಪೆಕ್ಟರ್ ಶಿವಣ್ಣ ಮ... ಠಾಣೆಗೆ ಬಂದು ರಂಪ ಮಾಡಿದ್ದಾರೆಂದು ಬಣ್ಣ ಕಟ...

ಒಬ್ಬ ಕ್ಯಾಬಿನೆಟ್ ಮಂತ್ರಿಯೇ ಪೊಲೀಸ್ ... ಬಂದು ಕೋರ್ಟ್ ಆದೇಶದ ಪರ ವಹಿಸಿದ... ನಯಾಪೈಸೆಯ ಪ್ರಯೋಜನವಾಗುವುದಿಲ್ಲವೆಂದರೆ... ಬಾಬು ಅಟ್ಟಹಾಸಕ್ಕೆ ಅಂಕುಶವುಂಟೆ?

ತನ್ನ ಪಾರ್ಟನರ್ ಕಂ ಬಲಗೈ ಬಂಟನ ದು... ವನ್ನು ಮುಖ್ಯಮಂತ್ರಿ ಹೇಗೆ ಸಮರ್ಥಿಸಿಕೊಳ್ಳುತ್ತಾ...

-ರಾ. ಸೋಮನಾ...

ದಯಾನಂದ ಪೈ ಜೊತೆ ಜಂಟಿ ಭೂಕಬಳಿ...

2006 ಜೂನ್ 21 ರ ಸಂಚಿಕೆಯಲ್ಲಿ ... ಬನಶಂಕರಿ 6 ನೇ ಹಂತದ ತುರಳ್ಳಿ ಕಾಡನ್ನು ಬೇ... ದಯಾನಂದ ಪೈ ಮತ್ತು ಆರೋಗ್ಯ ಮಂತ್ರಿ ಅಶೋ... ಪಟಾಲಂ ಕಬಳಿಸುತ್ತಿರುವುದರ ವಿರುದ್ಧ ವರದಿ ಮಾ... ಸರಿಯಷ್ಟೇ. ಅಷ್ಟಕ್ಕೇ ಎಚ್ಚೆತ್ತುಕೊಂಡ ಅಶೋಕ್ ಅ... ಮತ್ತೊಂದು 'ಲಾಲ್‌ಬಾಗ್' ಮಾಡುವತ್ತ ಪಣತೊ... ಹಾಗಂಥ ಭೂಕಂಟಕ ದಯಾನಂದ ಪೈ ಸುಮ್ಮನಾ... ಮುಖ್ಯಮಂತ್ರಿಯ ಆಪ್ತನೆಂದೇ ಭಾವಿಸಿ ಕಬಡ್ಡಿ ... ಬೆನ್ನಿಗೆ ಬಿದ್ದ. ಇನ್ನು ಬಾಬು ಕೇಳಬೇಕೆ? ತುರಳ್ಳಿ ... ದರೆ ಕಮ್ಮಿಯೆಂದರೂ ಸಾವಿರ ಕೋಟಿಯ ವ್ಯವ... ಈ ಹೊತ್ತಿಗಾಗಲೇ ತುರಳ್ಳಿ ಕಾಡಿಗೆ ಬೋಗಸ್ ದಾ... ಸೃಷ್ಟಿಸಿಕೊಂಡಿದ್ದ ಭೈರಪ್ಪ, ಕಾವೇರಪ್ಪ ಮತ್ತು ಶ... ಮುಂತಾದ ಪುಡಿ ನೆಲಗಳ್ಳರನ್ನು ಮುಂದಿಟ್ಟುಕೊಂ... ಸೆಪ್ಟೆಂಬರ್ ಒಂದರಂದು ಒಂದು ಬುಲ್ಡೋ... ಮತ್ತೊಂದು ಬೋರ್‌ವೆಲ್ ಲಾರಿಯನ್ನು ತುರಳ್ಳಿ ಕಾ... ನುಗ್ಗಿಸಿ ಕಾಂಪೌಂಡ್ ಹಾಕಲು ಯತ್ನಿಸಿದ್ದಾರೆ. ಅದಕ್... ಸರ್ವೇಯರ್ ರಾಜಗೋಪಾಲ ರೆವಿನ್ಯೂ ಸೂಪರ್‌ವೈ... ನಾರಾಯಣ ಬಂಟ ಜೈರಾಂರೆಡ್ಡಿ ಮತ್ತು ಗುಬ್ಬ... ಸುರೇಶರನ್ನು ಕರಕೊಂಡು ಕಾಡಿಗೆ ನುಗ್ಗಿದ್ದಾನೆ.

ಹೇಳಿಕೇಳಿ ತುರಳ್ಳಿ ಕಾಡು ಸೇರಿದ್ದು ಅರಣ್ಯ ಇಲಾ... ಇದು ಗೊತ್ತಾಗಿದ್ದೇ ಅರಣ್ಯ ಇಲಾಖೆಯ ಅಧಿಕಾರಿ... ಧಾವಿಸಿ ಬಂದ ಬಾಬು ತಂದಿದ್ದ ಬುಲ್ಡೋಜರ್ ... ಬೋರ್‌ವೆಲ್ ಲಾರಿಯನ್ನು ಜಪ್ತಿ ಮಾಡಿ ಕ್ರಿಮಿ... ಕೇಸು ದಾಖಲಿಸಿದ್ದಾರೆ. ಅರಣ್ಯ ಸಿಬ್ಬಂದಿಯನ್ನು ಕಂ... ಬಾಬು ಗೂಂಡಾ ಪಡೆ ಪರಾರಿಯಾಗಿದೆ. ದುರಂತವೆ... ಬಾಬು ಮೇಲೆ ಎಫ್‌ಐಆರ್ ಹಾಕದಂತೆ ಮುಖ್ಯ... ಕಚೇರಿಯಿಂದಲೇ ಅರಣ್ಯಾಧಿಕಾರಿಗಳಿಗೆ ಧ... ಹೋಗಿದೆ. ಇಷ್ಟಾದ ಮೇಲೂ ಮುಖ್ಯಮಂತ್ರಿ ಕು... ಸ್ವಾಮಿ ಈತನನ್ನು ಹೊರಹಾಕುತ್ತಿಲ್ಲ ಎಂದರೆ ಮ... ಇನ್ನೆಂಥ ಅನಾಹುತ ಕಾದಿದೆಯೋ?

ಸ್ವತಂತ್ರ ಕರ್ನಾಟಕದ ಹರಿಕಾರ...!

(10ನೇ ಪುಟದಿಂದ)

ಸೇನೆಯ ಭಾಗವಾಗಿ ಉಳಿಸಿಕೊಳ್ಳುತ್ತಿದ್ದ ಬ್ರಿಟಿಷರು ಟಿಪ್ಪುವಿನ ಸೇನೆಯನ್ನು ಮಾತ್ರ ಸಂಪೂರ್ಣವಾಗಿ ವಿಸರ್ಜಿಸಿದರು.

ಹೀಗೆ ಟಿಪ್ಪು ಬ್ರಿಟಿಷರಿಗೂ, ಬ್ರಾಹ್ಮಣಶಾಹಿಗೂ ಸಮಾನ ಶತ್ರುವಾಗಿದ್ದ. ಆದರೆ ಅದೇ ಸಮಯದಲ್ಲಿ ಶೂದ್ರ ರೈತಾಪಿಗೂ, ದಲಿತ ದಮನಿತರಿಗೂ ಬಿಡುಗಡೆ ತಂದುಕೊಟ್ಟ ಜನನಾಯಕನೂ ಆಗಿದ್ದ. ಇಂದು ಖಾಸಗೀಕರಣ, ಜಾಗತೀಕರಣದ ಹೆಸರಿನಲ್ಲಿ ಮತ್ತೊಮ್ಮೆ ನವ ಮಸಾಹತುಶಾಹಿ ಮತ್ತು ಹಳೇ ಬ್ರಾಹ್ಮಣಶಾಹಿಗಳು ರೈತರು, ದಲಿತ-ದುಡಿಯುವ ಜನತೆಯ ಬದುಕಿನ ಮೇಲೆ ದಾಳಿ ನಡೆಸುತ್ತಿವೆ. ಈ ದಾಳಿ ದಮನಿತ ಜನತೆಯ ಹೋರಾಟದ ಸ್ಫೂರ್ತಿಯ ಸೆಲೆಗಳ ಮೇಲಿನ ದಾಳಿಯೂ ಆಗಿದೆ. ಜನತೆಯ ಇತಿಹಾಸದ ಮೇಲಿನ ದಾಳಿಯೂ ಆಗಿದೆ.

ವರ್ತಮಾನದಲ್ಲಿ ಶೋಷಣೆಯನ್ನು, ಸುಲಿಗೆಯನ್ನು ಮುಂದುವರಿಸಬೇಕೆಂದರೆ ಇತಿಹಾಸದ ಸ್ಮೃತಿಗಳನ್ನು ಅಳಿಸಿಹಾಕುವುದು ವಸಾಹತುಶಾಹಿಗಳು ಹಾಗೂ ಈ ನೆಲದ ಬ್ರಾಹ್ಮಣಶಾಹಿಗಳು ಹುದುಕಿಕೊಂಡಿರುವ ಅತ್ಯಂತ ಹಳೆಯ ಕುತಂತ್ರವಾಗಿದೆ. ಆ ನಿಟ್ಟಿನಲ್ಲೇ ಕನಕ ಗೋಪುರವನ್ನು ಕೆಡವಲಾಗುತ್ತದೆ, ಬುದ್ಧನನ್ನು ದೇಶ ಬಿಟ್ಟು ಓಡಿಸಲಾಗುತ್ತದೆ, ಅಂಬೇಡ್ಕರರ ಭಾವಚಿತ್ರವನ್ನು ವಿಧಾನಸೌಧದ ಕೊಠಡಿಯಿಂದ ತೆಗೆಯಲಾಗುತ್ತದೆ, ಬಾಬಾಬುಡನ್‌ಗಿರಿಯನ್ನು ದತ್ತಪೀಠ ಮಾಡುವ ಸಂಚು ಹುಟ್ಟುತ್ತದೆ. ಹಾಗೂ ಇದೀಗ ಟಿಪ್ಪೂ ಸುಲ್ತಾನನನ್ನು ನಾಡದ್ರೋಹಿ ಎಂದು ಕರೆಯುವ ಸಂಚು ಹುಟ್ಟಿಕೊಳ್ಳುತ್ತದೆ.

ದಮನಿತ ಜನ ವರ್ತಮಾನದ ಬದುಕಿಗೆ ಟಿಪ್ಪು ಸುಲ್ತಾನನಂಥ ಜನನಾಯಕನ ಇತಿಹಾಸವನ್ನು ಉಳಿಸಿಕೊಳ್ಳಬೇಕಾಗುತ್ತದೆ. ಶಂಕರಮೂರ್ತಿಗಳಂತಹ ಪುರೋಹಿತಶಾಹಿಗಳನ್ನು, ಅವರನ್ನು ಪೋಷಿಸುವ ನವ ಮಸಾಹತುಶಾಹಿಗಳನ್ನು ಹಿಮ್ಮೆಟ್ಟಿಸಲು ಇದೂ ಒಂದು ರಣರಂಗವೆಂಬುದನ್ನು ಮರೆಯದಿರೋಣ.

* * * * * * * * * *

ನಾಡಿನ ಬದುಕಿನಲ್ಲಿ ಟಿಪ್ಪು ತಂದ ಕ್ರಾಂತಿಕಾರಕ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಹೆಚ್ಚಿನ ಓದಿಗಾಗಿ ಈ ಕೆಳಗಿನ ಕೆಲವು ಪುಸ್ತಕಗಳನ್ನು ಪರಿಶೀಲಿಸಿ:

"ಮೇಕಿಂಗ್ ಹಿಸ್ಟರಿ" -ಸಾಕೇತ್ ರಾಜನ್

"ಸನ್‌ಸೆಟ್ ಅಟ್ ಶ್ರೀರಂಗಪಟ್ಟಣ" -ಮಹಮದ್ ಮೊಯಿನುದ್ದೀನ್

"ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದ ಕಂಟ್ರೀಸ್ ಆಫ್ ಮೈಸೂರು, ಮಲಬಾರ್, ಕೆನರಾ" - ಫ್ರಾನ್ಸಿಸ್ ಬುಕಾನನ್

"ಸ್ಟಾರ್ಮ್ ಓವರ್ ಶ್ರೀರಂಗಪಟ್ಟಣ" - ಪ್ರಾಕ್ಸಿ ಫರ್ನಾಂಡಿಸ್

"ಪ್ರಿ ಬ್ರಿಟಿಷ್ ಸ್ಟೇಟ್ ಸಿಸ್ಟಂ ಇನ್ ಸೌತ್ ಇಂಡಿಯಾ, ಮೈಸೂರ್" - ನಿಖಿಲೇಶ್ ಗುಹಾ

"ಮಾರ್ಡನ್ ಮೈಸೂರ್" - ಶಾಮರಾವ್

"ಟಿಪ್ಪು ಸುಲ್ತಾನ್" - ಷೇಕ್ ಅಲಿ

ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದು ಸಂತೆಯ ಮಂದಿ ಮಂಡಯ್ಯಾ

ಮಕ್ಕಳ ಭವಿಷ್ಯದೊಂದಿಗೆ ಹೊರಟ್ಟಿ ಹುಡುಗಾಟ!

ಮತ್ತೊಮ್ಮೆ ಬಡವರ ಮಕ್ಕಳ ಶಿಕ್ಷಣಕ್ಕೆಯೇ ಕತ್ತರಿಪೆಟ್ಟು... ಅಧಿಕಾರಿಗಳು, ರಾಜಕಾರಣಿ ಮತ್ತು ಬುದ್ಧಿಜೀವಿಗಳ ಪ್ರತಿಷ್ಠೆಯ ತೆವಲುಗಳಿಗೆ 2,73,840 ಮಂದಿ ಕೆಳಮಧ್ಯಮ ವರ್ಗಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರ ವಿದ್ಯೆಗೆ ಹಠಾತ್ ಸಂಚಕಾರ... 1420 ಅನಧಿಕೃತ ಇಂಗ್ಲಿಷ್ ಮಾಧ್ಯಮ ಶಾಲೆಗಳ ಪರವಾನಗಿ ರದ್ದು....


ಮೇಲ್ನೋಟಕ್ಕೆ ಇದು ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ದಿಟ್ಟ(!) ಕನ್ನಡಪರ ನಿಲುವು... ಬಸವರಾಜ ಹೊರಟ್ಟಿಯವರ ಧೀರೋದಾತ್ತ ಹೋರಾಟ! ಅಸಲಿಗೆ ಇದು ತನ್ನದೇ ಆದ ಸರ್ಕಾರಿ ಶಾಲೆಗಳ ಕನ್ನಡ ಮಾಧ್ಯಮ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲಿಕ್ಕಾಗದ ರಣಹೇಡಿ ಸರ್ಕಾರದ ಆಟಾಟೋಪ!

ಕರ್ನಾಟಕವನ್ನಾಳುತ್ತ ಬಂದ ಬಹುತೇಕ ಸರ್ಕಾರಗಳ, ಆಡಳಿತಾರೂಢ ಪಾರ್ಟಿಗಳ ಜನರಂಜಕ ನೀತಿ-ನಿರ್ಧಾರಗಳಂತೆಯೇ ಅಸ್ತಿತ್ವಕ್ಕೆ ಬಂದ ಈ ಅನಧಿಕೃತ ಇಂಗ್ಲಿಷ್ ಮೀಡಿಯಂ ಶಾಲೆಗಳ ಖಾಸಗಿ ಆಡಳಿತ ಮಂಡಲಿಗಳ ವಹಿವಾಟು ಇವತ್ತು ನಿನ್ನೆಯದಲ್ಲ... 1994 ರಷ್ಟು ಹಿಂದೆಯೇ ಅಂದರೆ ವೀರಪ್ಪ ಮೊಯ್ಲಿಯವರ ಕಾಂಗ್ರೆಸ್ ಸರ್ಕಾರದಿಂದ ಶುರುವಾಗಿ ತದನಂತರದ ದೇವೇಗೌಡ-ಪಟೇಲ್ ನಾಯಕತ್ವದ ಜನತಾದಳ ಆಡಳಿತದಲ್ಲಿಯೇ ಪ್ರವರ್ಧಮಾನಕ್ಕೆ ಬಂದಿರುವಂತಹದ್ದು.

ಸುಶಿಕ್ಷಿತ ಮೇಲ್ಮಧ್ಯಮ ವರ್ಗದ ಕುಟುಂಬಗಳ ಮಕ್ಕಳ ಯಶಸ್ವಿ ಮಾದರಿಯನ್ನೇ ಅನುಕರಿಸುತ್ತ ಬರುವ ಕೆಳವರ್ಗದ ಶ್ರಮಜೀವಿ ಪಾಲಕರೂ ತಮ್ಮ ಮಕ್ಕಳಿಗೂ ಇಂಗ್ಲಿಷ್ ಮಾಧ್ಯಮದ ಶಿಕ್ಷಣವೇ ದೊರೆಯಲಿ ಎಂದು ಹಂಬಲಿಸುವುದರಿಂದಲೇ ಈ ಖಾಸಗಿ ಅನುದಾನರಹಿತ ಇಂಗ್ಲಿಷ್ ಮೀಡಿಯಂ ಶಾಲೆಗಳ ಧಂದೆಗೆ ಯಥೇಚ್ಛ ಡಿಮ್ಯಾಂಡು ಸೃಷ್ಟಿಯಾಗುತ್ತ ಬಂತು.

ದುಬಾರಿ ಫೀಜು, ಭಾರಿ ಡೊನೇಶನ್ನುಗಳ ಜತೆ ಪ್ರಭಾವಿ ಗಣ್ಯರ ವಶೀಲಿಬಾಜಿಯನ್ನೂ ಪುರಸ್ಕರಿಸುವ ಪ್ರತಿಷ್ಠಿತ ಕಾನ್ವೆಂಟುಗಳು ಮತ್ತು ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲುಗಳ ಬಾಗಿಲು ತಟ್ಟುವುದೂ ಸಾಧ್ಯವಾಗದೇ ಜನಸಾಮಾನ್ಯರೆಲ್ಲ ಇಂತಹ ಲೋಕಲ್ ಶಾಲೆಗಳಲ್ಲೇ ತಮ್ಮ ಮಕ್ಕಳನ್ನು ದಾಖಲಿಸಿ ಅವರ ಭವಿಷ್ಯ ಅಷ್ಟರ ಮಟ್ಟಿಗಾದರೂ ಸುರಕ್ಷಿತ ಎಂಬ ನೆಮ್ಮದಿಯ ಭ್ರಮಾಲೋಕದಲ್ಲಿ ತೇಲುತ್ತ ಬಂದರು...

ಇತ್ತ ಸರ್ಕಾರಿ ಶಾಲೆಗಳನ್ನು ತೀರ ನಿರ್ಗತಿಕರ ಅನಾಥಾಲಯಗಳಂತೆ ಕಡೆಗಣಿಸುತ್ತ ಬಂದ ಸರ್ಕಾರ ಮತ್ತು ಸಮಾಜದ ಪ್ರತಿಷ್ಠಿತ ವರ್ಗಗಳು ದಿಢೀರನೇ ಭಾರೀ ಪ್ರಚಾರದೊಂದಿಗೆ 'ಬಿಸಿಯೂಟ' ಯೋಜನೆಯನ್ನು ಜಾರಿಗೊಳಿಸಿ ತಮ್ಮ ಅಕ್ಷರ-ಕಾಳಜಿಯ ಪ್ರದರ್ಶನ ನೀಡಿದವು....



ಆದರೆ 'ಅಕ್ಷರ ದಾಸೋಹ' ಅಥವಾ 'ಅಕ್ಷಯ ಪಾತ್ರೆ'ಯಂತಹ ಸರ್ಕಾರಿ ಶಾಲೆಗಳ ಕಾರ್ಯಕ್ರಮಗಳ ಉಸ್ತುವಾರಿಯನ್ನು ಇವತ್ತಿನ ಸರ್ಕಾರಗಳು ಸಾಫ್ಟ್‌ವೇರ್ ಉದ್ಯಮದಂತೆ ಹೊರಗುತ್ತಿಗೆ ನೀಡಿ ಕೈತೊಳೆದುಕೊಳ್ಳಲು ಹೊರಟವು.... ಇನ್‌ಫೋಸಿಸ್ ಫೌಂಡೇಷನ್, ವಿಪ್ರೋ ಪ್ರೇಮ್‌ಜೀ ಫೌಂಡೇಷನ್‌ಗಳ ಕುಬೇರರ ಔದಾರ್ಯಕ್ಕೊಪ್ಪಿಸಿಬಿಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಣ ಮಂತ್ರಿವರ್ಯರುಗಳನ್ನು ಸಂಪ್ರೀತಗೊಳಿಸಲು ಬೇಕಾದ ಪತ್ರಿಕಾ ಜಾಹೀರಾತುಗಳ ಮೂಲಕವೇ ಅಕ್ಷರ-ಕ್ರಾಂತಿಯ ಕಹಳೆಯೂದುತ್ತ ಬಂದವು!

ಇಂದು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳ ಗುಣಮಟ್ಟ ಸುಧಾರಣೆಯ ಹೊಣೆಯನ್ನು ನಿಭಾಯಿಸುವುದಾಗಿ ಪ್ರಚಾರ ಪಡೆಯುತ್ತಿರುವವರೆಂದರೆ ಸುಧಾಮೂರ್ತಿ, ರೋಹಿಣಿ ನಿಲೇಕಣಿ ಹಾಗು ತೇಜಸ್ವಿನಿ ಅನಂತ್‌ಕುಮಾರ್‌ಗಳಂತಹ ಗಣ್ಯ ಮಹಿಳೆಯರಷ್ಟೇ.... ಇವರ ಶಿಕ್ಷಣ ಸೇವೆಯ ಮಹಿಮೆಯೆಲ್ಲವೂ ಬಿತ್ತರಿಸಲ್ಪಡುವುದೂ "ಟೈಮ್ಸ್ ಆಫ್ ಇಂಡಿಯಾ"ದಂತಹ ಬಡಿವಾರದ ಇಂಗ್ಲಿಷ್ ಪತ್ರಿಕೆಗಳಲ್ಲಿಯೇ...

ಅಂದಹಾಗೆ ಈಗ್ಗೆ ಒಂದು ವರ್ಷದ ಹಿಂದೆಯೇ ಪ್ರಗತಿಪರ ಬರಹಗಾರರು ಹಾಗು ದಲಿತ-ಬಂಡಾಯ ಸಾಹಿತಿಗಳ ಒಂದು ಒಕ್ಕೂಟ ಕನ್ನಡ ಶಾಲೆಗಳಲ್ಲಿ ಒಂದನೇ ತರಗತಿಯಿಂದಲೇ ಕಡ್ಡಾಯ ಇಂಗ್ಲಿಷ್ ಕಲಿಕೆ ಶುರುವಾಗಲಿ ಎಂದು ಆಗ್ರಹಿಸುತ್ತ ಬಂದಿತಲ್ಲವೇ. ಶೈಕ್ಷಣಿಕ ಸಮಾನತೆಯನ್ನೇ ಆಧಾರವಾಗಿಟ್ಟುಕೊಂಡ "ಕನ್ನಡವಿರಲಿ ಆದರೆ ಇಂಗ್ಲಿಷ್ ಕಲಿಯಲಿ" ಎಂಬ ಈ ಬೇಡಿಕೆಯ ಬಗ್ಗೆ ನಮ್ಮ ರಾಜ್ಯ ಸರ್ಕಾರ ಬರೀ ಸಮಾಲೋಚನಾ ಸಭೆಗಳನ್ನು ನಡೆಸಿದ್ದಷ್ಟೇ ಬಂತು.... ಇವತ್ತಿಗೂ ಆ ಬಗ್ಗೆ ಖಚಿತವಾದ ನಿಲುವು ಪ್ರಕಟಿಸಲೇ ಇಲ್ಲ...

ಹೆಜ್ಜೆ ಹೆಜ್ಜೆಗೂ ಚಂಪಾ, ಚಿದಾನಂದ ಮೂರ್ತಿ, ಚಂದ್ರಶೇಖರ ಕಂಬಾರ, ಲಲಿತಾ ನಾಯಕ್‌ರಂತಹ ಕನ್ನಡ-ಕಲಿಗಳನ್ನು ಮುಂದಿಟ್ಟುಕೊಂಡೇ ಕನ್ನಡಪರ ಸಂವಾದಗಳನ್ನು ಗೊಂದಲಮಯಗೊಳಿಸುವ ನಮ್ಮ ಸರ್ಕಾರಕ್ಕೆ ಅಂತಿಮವಾಗಿ 25 ವರ್ಷಗಳಷ್ಟು ಹಳೆಯದಾದ ಗೋಕಾಕ್ ವರದಿಯ ಬಗ್ಗೆಯೂ ಮುಂದಡಿಯಿಡಲಿಕ್ಕಾಗಲಿಲ್ಲ... ಇತ್ತೀಚಿನ ಇಂಗ್ಲಿಷ್ ಕಲಿಕೆಯ ಬೇಡಿಕೆಗೂ ಸಕಾರಾತ್ಮಕವಾಗಿ ಸ್ಪಂದಿಸುವುದಾಗಲಿಲ್ಲ.

ಸ್ವತಃ ಹೊರಟ್ಟಿ, ಕುಮಾರಸ್ವಾಮಿ, ಶಂಕರಮೂರ್ತಿಗಳಾದಿಯಾಗಿ ಅವರೊಂದಿಗೆ ಬೌದ್ಧಿಕ ಸಮಾಲೋಚನೆ(!) ನಡೆಸುವ ಸರ್ಕಾರಿ ಬುದ್ಧಿಜೀವಿಗಳೆಲ್ಲರೂ ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಅಧಿಕೃತ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ಕಳಿಸುವ ಧೈರ್ಯ, ಇಚ್ಛಾಶಕ್ತಿಯನ್ನೇ ಪ್ರದರ್ಶಿಸದಿರುವಾಗ ಇದೀಗ ಸಾಮೂಹಿಕವಾಗಿ ನೂರಾರು ಶಾಲೆಗಳನ್ನು ಮುಚ್ಚಿಸಿ, ಎರಡೂ ಮುಕ್ಕಾಲು ಲಕ್ಷ ಜನ ನತದೃಷ್ಟ ಮಕ್ಕಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದಾಗಿ ಸಾರುವುದು ಬರೀ ಬೂಟಾಟಿಕೆಯಷ್ಟೇ...

ಶಿಕ್ಷಕ ವೃತ್ತಿಯನ್ನೇ ಶಾಸನಸಭೆಯಲ್ಲಿ ಪ್ರತಿನಿಧಿಸುತ್ತ ಬಂದ ಹೊರಟ್ಟಿಯವರಿಗೆ ಹೀಗೆ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅವರ ಪ್ರಚಲಿತ ಶಾಲೆ ಮತ್ತು ಶಿಕ್ಷಣ ಮಾಧ್ಯಮದಿಂದ ದಿಢೀರನೇ ಸ್ಥಾನಪಲ್ಲಟಗೊಳಿಸಿ ಬಲವಂತವಾಗಿ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಿಗೆ ತುರುಕುತ್ತೇವೆಂದು ಹೇಳುವುದರ ದುರ್ಬುದ್ಧಿತನ ಅರ್ಥವಾಗಿಲ್ಲವೆಂದು ಕಾಣುತ್ತದೆ....

ಶಾಲೆಗಳನ್ನು ಬದಲಿಸುವುದು ಕೆರೆ ಹಾವಳಿ ಪೀಡಿತರಿಗೆ ಅಥವಾ ಮುಳುಗಡೆ ಪ್ರದೇಶಗಳ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವ ಮಾದರಿಯಲ್ಲೇ ಸಾಧ್ಯವೆಂದು ಭಾವಿಸಿದ್ದಾರೆ ಮಾನ್ಯ ಸಚಿವರು....! ಒಂದು ನಿರ್ದಿಷ್ಟ ಮಾಧ್ಯಮದಲ್ಲಿ ನಿರಂತರ ಕಲಿಕೆ, ನಿರ್ದಿಷ್ಟ ಶಾಲಾ ಸಂಸ್ಕೃತಿಯಲ್ಲಿ ಬೋಧನೆ, ಹಾಗೂ ಒಂದು ರೂಢಿಗತ ಶೈಕ್ಷಣಿಕ ವ್ಯವಸ್ಥೆಯಲ್ಲಿನ ತರಬೇತಿ ಇವುಗಳಿಂದ ಏಕಾಏಕಿ ಲಕ್ಷಾಂತರ ಮಂದಿ ವಿದ್ಯಾರ್ಥಿಗಳನ್ನು ಕದಲಿಸುವುದೆಂದರೆ ಹುಡುಗಾಟವಲ್ಲವೇ ಆನರೇಬಲ್ ಮಿ. ಹೊರಟ್ಟಿ?

ಶಿಕ್ಷಣ ಮಾಧ್ಯಮದ ಬಗ್ಗೆ, ಶಿಕ್ಷಣದ ಗುಣಮಟ್ಟದ ಬಗ್ಗೆ, ಶೈಕ್ಷಣಿಕ ಶುಲ್ಕದ ನಿಯಂತ್ರಣದ ಬಗ್ಗೆ ಹಾಗು ಒಟ್ಟಾರೆ ಬಡವರ ಮಕ್ಕಳ ವಿದ್ಯೆಯ ಹಕ್ಕಿನ ಬಗ್ಗೆ ಸ್ಪಷ್ಟತೆಯಿಲ್ಲದ ಸರ್ಕಾರಗಳು, ರಾಜಕೀಯ ಪಕ್ಷಗಳು ಈಗಾಗಲೇ ವೃತ್ತಿಶಿಕ್ಷಣ ಮತ್ತು ಪದವಿ ಶಿಕ್ಷಣವನ್ನು ಸಂಪೂರ್ಣವಾಗಿ ಕ್ಯಾಪಿಟೇಶನ್ ಲಾಬಿಯ ಸುಪರ್ದಿಗೊಪ್ಪಿಸಿ ಹಾಯಾಗಿರುವಾಗ ಇದ್ದಾಕೆ ಇದ್ದಕ್ಕಿದ್ದಂತೆಯೇ ಶಾಲಾ ಮಕ್ಕಳ ಭವಿಷ್ಯದ ಜತೆಗೆ ಚೆಲ್ಲಾಟ ಇವರುಗಳದ್ದು?

ಅಕ್ರಮ ಸಾಗುವಳಿ ಸಕ್ರಮ, ಅನಧಿಕೃತ ಒತ್ತುವರಿ ಅಧಿಕೃತ, ಮುಂತಾದ 'ಜನಪರ' ಕಾರ್ಯಕ್ರಮಗಳ ಮೂಲಕವೇ ತಮ್ಮ ಓಟ್‌ಬ್ಯಾಂಕ್ ರಾಜಕೀಯ ಮಾಡುವ ನಾಯಕಗಣಕ್ಕೆ ಅದ್ಯಾಕೆ ಈ ಕನ್ನಡ ಲೈಸೆನ್ಸ್-ಇಂಗ್ಲಿಷ್ ಮೀಡಿಯಂ ಶಾಲೆಗಳ ಸಕ್ರಮೀಕರಣ ಕಷ್ಟವಾಗಿಬಿಟ್ಟದೆ ಎಂದು ಪ್ರಶ್ನಿಸಬೇಕಾಗಿದೆ... ಕ್ಷಮಿಸಿ, ಈ ಪ್ರತಿಭಟನೆಯ ದನಿಯನ್ನು ದಾಖಲಿಸುತ್ತಿರುವ ಈ ಅಂಕಣಕಾರ ಕೂಡ ಹಿಂದುಳಿದ ಹೈದ್ರಾಬಾದ್ ಕರ್ನಾಟಕದ ಕನ್ನಡ ಮಾಧ್ಯಮ ಸರ್ಕಾರಿ ಹೈಸ್ಕೂಲಿನಲ್ಲಿ ಓದಿ 'ಮುಂದಕ್ಕೆ ಬಂದ' ಸಾಹಸಿಯೇ!!


-ರವೀಂದ್ರ ರೇಶ್ಮೆ

ಗ್ಯಾರಳ್ಳಿ ತಮ್ಮಯ್ಯ ಕೊಲೆ ಹಾ.ರಾ. ನಾಗರಾಜ್ ಕೊಲೆಗೆ ಪ್ರತೀಕಾರ?



ಇದು ನಿರೀಕ್ಷಿತ. ಹಾಸನದ ಕೊಳಕುಕ್ರಿಮಿ ಗ್ಯಾರಳ್ಳಿ ತಮ್ಮಯ್ಯ ಕೊಲೆಯಾಗಿದ್ದಾನೆ. ಸೆಪ್ಟೆಂಬರ್ 19ರ ಮುಂಜಾನೆ ಹಾಸನದ ಸರ್ಕಾರಿ ಕಾಲೇಜಿನ ಆಟದ ಮೈದಾನದಲ್ಲಿ ವಾಕಿಂಗ್ ಮಾಡುತ್ತಿದ್ದ ತಮ್ಮಯ್ಯನ ಮೇಲೆರಗಿದ ನಾಲ್ವರು ಆತನ ಕಣ್ಣಿಗೆ ಖಾರದ ಪುಡಿ ಎರಚಿ ದೇಹದ 17 ಕಡೆ ತಿವಿದು, ಕತ್ತು ಕತ್ತರಿಸಿ ಪರಾರಿಯಾಗಿದ್ದಾರೆ. ವಾಕಿಂಗ್ ಜೊತೆಗಾರರಾಗಿದ್ದ ಹಾಸನ ಶಾಸಕ ಎಚ್.ಎಸ್. ಪ್ರಕಾಶ್ ಸೋದರ ಅನಿಲ್ ಮತ್ತು ಸ್ನೇಹಿತ ಈರುಳ್ಳಿ ಗೋಪಾಲ್ ಎಂಬುವರು ತಮ್ಮಯ್ಯನಿಗೆ ಮೊದಲ ಏಟು ಬೀಳುತ್ತಿದ್ದಂತೆಯೇ ಪರಾರಿಯಾದುದರಿಂದ ಹಂತಕರು ಯಾರೆಂದು ಹೇಳಲು ಪ್ರತ್ಯಕ್ಷದರ್ಶಿಗಳ್ಯಾರೂ ಇಲ್ಲ.

ಕಳೆದ ವರ್ಷ ಹಾಸನದಲ್ಲಿ ನಡೆದ ಹಾ.ರಾ. ನಾಗರಾಜ ಅಲಿಯಾಸ್ ಕಡ್ಡಿ ನಾಗರಾಜನ ಕೊಲೆಯ ಪ್ರಕರಣದಲ್ಲಿ ತಮ್ಮಯ್ಯನ ಬಂಧನವಾಗಿ ಆತ ಅತಿ ಶೀಘ್ರವಾಗಿ ಬಿಡುಗಡೆಯಾಗಿ ಬಂದ ಹಿಂದೆಯೇ ಅವನು ಕೊಲೆಯಾಗಬಹುದೆಂಬ ಸೂಚನೆಗಳು ಕಾಣತೊಡಗಿದವು.



ಹಾ.ರಾ. ನಾಗರಾಜ್ ಕೊಲೆ ಪ್ರಕರಣದಿಂದ ಆರೋಪಿ ತಮ್ಮಯ್ಯ ಸಲೀಸಾಗಿ ಹೊರಬರಲು ಅನಂತರ ಈಗ ಆತ ಕೊಲೆಯಾಗಲು ಸಂಪೂರ್ಣ ಕಾರಣವಾದೇ ಪೊಲೀಸರ ಭ್ರಷ್ಟತೆ ಮತ್ತು ಬೇಜವಾಬ್ದಾರಿತನ.

ನಾಗರಾಜ್ ಕೊಲೆ ಪ್ರಕರಣದಿಂದ ತಮ್ಮಯ್ಯ ಬಚಾವಾಗಲು ಸೃಷ್ಟಿಯಾದವರು 61 ಜನ ಸಾಕ್ಷಿಗಳು. ... ಹೊತ್ತಿಗೆ ನಾಗರಾಜ ಕೊಲೆಯಾದಾಗ ಹಾಕಿದ ... ಮಾಹಿತಿ ವರದಿಯಲ್ಲಿ ಆರೋಪಿ ಒಂದರ ... ತಮ್ಮಯ್ಯ, ಒಂಭತ್ತು ತಿಂಗಳ ನಂತರ ಪೊಲೀಸರು ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಆರೋಪಿ 7 ... ಸ್ಥಾನಕ್ಕೆ ಹಿಂಬಡ್ತಿ ಪಡೆದು, 'ಕೊಲೆ ಮಾಡಲು ಕುಮ್ಮಕ್ಕು ನೀಡಿದ' ಎಂಬ ಆರೋಪ ಮಾತ್ರ ಎದುರಿಸುತ್ತಿದ್ದ. ಮಂಜ ಎಂಬ 17 ವರ್ಷದ ಹುಡುಗ ಒಂದನೇ ಆರೋಪಿ ಸ್ಥಾನಕ್ಕೆ ಬಂದಿದ್ದ.

ಕೇವಲ ಮೂರು ತಿಂಗಳು ನ್ಯಾಯಾಂಗ ಬಂಧನದಲ್ಲಿದ್ದ ನಾಟಕವಾಡಿದ ತಮ್ಮಯ್ಯ ಈ ಅವಧಿಯನ್ನು ಆಸ್ಪತ್ರೆಯಲ್ಲಿ ಕಳೆಯುವ ವ್ಯವಸ್ಥೆ ಮಾಡಿಕೊಟ್ಟಿದ್ದು ಸಹ ಇದೇ ಪೊಲೀಸರು. ಕೊಲೆಯಾದ ನಾಗರಾಜನ ಕುಟುಂಬದವರಿಗೆ ರಕ್ಷಣೆ ಕೊಡುವುದರ ಬದಲು ತಮ್ಮಯ್ಯನ ಆಸ್ತಿ-ಪಾಸ್ತಿಗಳನ್ನು ಕಾಯುತ್ತಾ ಕೂತಿದ್ದ ಪೊಲೀಸರು, ಪ್ರತಿನಿತ್ಯ ಆತನ ವಾಕಿಂಗ್‌ಗೆ ಬೆಂಗಾವಲು ಸಹ ಒದಗಿಸಿದ್ದರು. ಆದರೆ ಆತ ಕೊಲೆಯಾದ ದಿನ ಯಾವುದೇ ಬೆಂಗಾವಲಿರಲಿಲ್ಲ.

2005 ಸೆಪ್ಟೆಂಬರ್ 10 ರಂದು ಹಾಸನದ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ, ಮುನಿಸಿಪಾಲಿಟಿ ಸದಸ್ಯ ಹಾಗೂ ಸ್ಥಳೀಯ ಪತ್ರಿಕೆಯ ಸಂಪಾದಕ ಹಾ.ರಾ. ನಾಗರಾಜನನ್ನು ಗ್ಯಾರಳ್ಳಿ ತಮ್ಮಯ್ಯ ಮತ್ತವನ ಗ್ಯಾಂಗು ಹೆರಿಟೇಜ್ ಕ್ಲಬ್ ಬಳಿ ಅವನ ಮಕ್ಕಳಾದ ಪ್ರಶಾಂತ್ ಮತ್ತು ನವೀನ್ ಎದುರಿಗೇ ಕತ್ತರಿಸಿ ಕೊಂದರು. ಈ ಪ್ರಕರಣದಲ್ಲಿ ತಮ್ಮಯ್ಯನನ್ನು ಆರೋಪಿ ನಂಬರ್ 1 ಎಂದು ಗುರುತಿಸಿದ ಪೊಲೀಸರು, ತಮ್ಮಯ್ಯ ಸೇರಿದಂತೆ ಒಟ್ಟು 14 ಜನರನ್ನು ಬಂಧಿಸಿ ಜೈಲಿಗಟ್ಟಿತ್ತು, ಇದಾಗಿ ಮೂರು ತಿಂಗಳಲ್ಲಿ ಗ್ಯಾರಳ್ಳಿ ತಮ್ಮಯ್ಯ ಮತ್ತವನ ಅಕ್ಕನ ಮಗನಿಗೆ ಜಾಮೀನು ಸಿಕ್ಕಿತು.

ಆಗಲೇ 'ಲಂಕೇಶ್' ಈ ಹುನ್ನಾರದ ಹಿಂದೆ ರಾಜಕೀಯ ಶಕ್ತಿಗಳ ಪ್ರಭಾವ, ಪೊಲೀಸರ ಶಾಮೀಲು, ಹಣದ ಆಮಿಷ ಮತ್ತು ತಮ್ಮಯ್ಯ ಕೊಲೆಯಾಗುವ ಸಂಶಯ ವ್ಯಕ್ತಪಡಿಸಿ ಬರೆದಿತ್ತು, ಈಗ ಅದೆಲ್ಲವೂ ನಿಜವಾಗಿದೆ.

ಹೀಗೆ ತನ್ನ ಪ್ರಭಾವದ ಮೂಲಕ ಹೊರಬರುವ ಮುನ್ನ ಹಾ.ರಾ. ನಾಗರಾಜ ಕೊಲೆ ಪ್ರಕರಣದಲ್ಲಿ ಜೈಲಿನಲ್ಲೇ ಉಳಿದಿದ್ದ ವಲ್ಲಭಬಾಯಿ ರಸ್ತೆಯ ಹುಡುಗರು ಹಾಗು ದಾಸರ ಕೊಪ್ಪಲು ಹುಡುಗರ ಮನೆ ಕಡೆಯವರಿಗೆ ಪ್ರತಿ ತಿಂಗಳು 10 ಸಾವಿರ ರೂಪಾಯಿ ಕೊಡುವುದಾಗಿ ತಮ್ಮಯ್ಯ ಭಾಷೆ ಕೊಟ್ಟು ಬಂದಿದ್ದಾನೆ. ಆದರೆ ಅದು ಕೇವಲ ಭಾಷೆಯಾಗಿಯೇ ಉಳಿದಿದೆ. ಈ ಮಧ್ಯೆ ಜೈಲಿನಲ್ಲಿರುವ ದಾಸರ ಕೊಪ್ಪಲಿನ ರಘು ಉರುಫ್ ಬಕಾರ್ಡಿಯ ತಂದೆ ಕೃಷ್ಣೇಗೌಡ ತಮ್ಮಯ್ಯನ ಮನೆಗೆ ದುಡ್ಡು ಕೇಳಲು ಹೋಗಿ ಥೂ... ಛೀ ಎನಿಸಿಕೊಂಡು ಬಂದಿದ್ದಾರೆ. ಇವೆಲ್ಲಾ ಸಿಟ್ಟು ಆ ಹುಡುಗರಿಗಿತ್ತು.

ಇದೆಲ್ಲಾ ಹೋಗಲಿ ಎಂದರೆ ಜೈಲಿನಿಂದ ಹೊರಬಂದ ತಮ್ಮಯ್ಯ ನೇರವಾಗಿ ತಾನು ಕೈಯ್ಯಾರೆ ಕೊಲೆ ಮಾಡಿದ್ದ ಹಾ.ರಾ. ನಾಗರಾಜನ ಮಕ್ಕಳಾದ ಪ್ರಶಾಂತ ಮತ್ತು ನವೀನರೊಂದಿಗೇ ರಾಜಿ ಮಾಡಿಕೊಂಡಿದ್ದಾನೆಂಬ ಸುದ್ದಿ ಜೈಲಿನಲ್ಲಿದ್ದ ಹಂತಕರ ಕಿವಿ ಮುಟ್ಟಿದೆ. ಇಲ್ಲಿ ಆಗಿದ್ದೇನಪ್ಪ ಅಂದರೆ, ಮೈತುಂಬಾ ಒಡವೆ ಹಾಕ್ಕೊಂಡು ಊರ ತುಂಬಾ ಗೂಳಿ ತರ ಮೆರೀತಿದ್ದ ನಾಗರಾಜ ಕೈತುಂಬಾ ಸಾಲಾ ಮಾಡಿದ್ದ, ಅವ್ನು ಸತ್ತಾಗ ಅವ್ನ ಮನೆಯವರಿಗೇ ಅಂತ ಬಿಟ್ಟುಹೋಗಿದ್ದ 'ಆಸ್ತಿ' ಅಂದ್ರೆ ಸಾಲ ಮಾತ್ರ. ಈ ವಿಷಯ ತಿಳಿದಿದ್ದ ಗ್ಯಾರಳ್ಳಿ ತಮ್ಮಯ್ಯ ನೇರವಾಗಿ ಮರ್ಮಕ್ಕೆ ಬಲೆ ಬೀಸಿದ್ದ. ಹಾ.ರಾ. ನಾಗರಾಜನ ಮನೆಯವರ ಪರವಾಗಿ ಮಟ್ಕಾ ಮಾಸ್ಟರ್ ಗಬ್ಬಾ ಕುಮಾರ್ ಮಧ್ಯಸ್ಥಿಕೆ ವಹಿಸಿಕೊಂಡ. ಒಟ್ಟಿನಲ್ಲಿ ಡೀಲು 29 ಲಕ್ಷಕ್ಕೆ ಕುದುರಿತು. ಸಹಜವಾಗಿ ಅಪ್ಪನ ಕೊಲೆಗೆ ಐ ವಿಟ್ನೆಸ್‌ಗಳಾಗಿದ್ದ ಪ್ರಶಾಂತ ಮತ್ತು ನವೀನ್ ಉಲ್ಟಾ ಆದ್ರು. ತಮ್ಮಯ್ಯ ಕೇಸ್‌ನಿಂದ ಖುಲಾಸೆ ಆದ.

ಕೇಸ್‌ನಲ್ಲಿದ್ದ ಇತರೇ ಹುಡುಗರೂ ಜೈಲ್‌ನಿಂದ ಹೊರಗೆ ಬಂದಿದ್ರು. "ನಮ್ ಲೈಫ್ ಸೆಟ್ಲ್ ಆಗಕ್ಕೆ ತಲಾ ... ಲಕ್ಷ ಕೊಡು" ಅಂತ ತಮ್ಮಯ್ಯನ ಕೇಳ್ತಾ ಅಂತ ಇದೆಲ್ಲಾ ಮಾತಾಡ್ಕಂಡಿದ್ದಂತೆ. ಕೇಳುದೊ... ಬಿಟ್ರೊ... ತಮ್ಮಯ್ಯ ಕೊಟ್ನೊ.. ಬಿಟ್ನೊ, ಯಾರ್ಗೂ ಗೊತ್ತಿಲ್ಲ, ಅಷ್ಟರಲ್ಲಿ ಕೊಲೆ ಆಗಿದೆ.

ಒಂದು ಮೂಲದ ಪ್ರಕಾರ ಹಾ.ರಾ. ನಾಗರಾಜ ಕೊಲೆಯಾದ ನಂತರ ಆತನ ಶವಸಂಸ್ಕಾರದ ಸಂದರ್ಭದಲ್ಲಿ ಲಾಂಗು, ಮಚ್ಚುಗಳನ್ನಿಟ್ಟು ಅದಕ್ಕೆ ಕುಂಕುಮ-ಅರಿಶಿನ ಬಳಿದು ಪೂಜೆ ಮಾಡಲಾಗಿತ್ತಂತೆ. ಈಗ ಕೊಲೆಯಾದ ಗ್ಯಾರಳ್ಳಿ ತಮ್ಮಯ್ಯನ ಶವದ ಬಳಿ ದೊರೆತಿರುವ ಲಾಂಗ್ ಮತ್ತು ಮಚ್ಚಿಗೂ ಕುಂಕುಮ-ಅರಿಶಿನ ಬಳಿಯಲಾಗಿದೆ. ತಮ್ಮಯ್ಯನ ಶವದ ಬಳಿ ಕುಳಿತು ರೋಧಿಸುತ್ತಿದ್ದ ಆತನ ಪತ್ನಿ ವರಮಹಾಲಕ್ಷ್ಮಿ "ಪಾಪಿಗಳು ರಾಜಿ ಮಾಡ್ಕಂತೀವಿ ಅಂತ ದುಡ್ಡು ತಗಂಡು ನನ್ ಗಂಡನ ಮುಗ್ಸುದ್ರು" ಅಂತ ಗೋಳಾಡಿದ್ದಾಳೆ. ಅಂದ್ರೆ ಹಾ.ರಾ. ನಾಗರಾಜನ ಮಕ್ಕಳೇ ಹಂತಕರು. ಅಪ್ಪನ ಸಾವಿಗೆ ಮಕ್ಕಳು ಬಹಳ ಬುದ್ಧಿವಂತಿಕೆಯಿಂದ ಸೇಡು ತೀರಿಸಿಕೊಂಡಿದ್ದಾರೆ. ತಮ್ಮಯ್ಯನಿಂದ ಹಣವನ್ನು ಪಡೆದು ಹಣಕಾಸಿನ ತೊಂದರೆಯಲ್ಲಿರುವ ಸಂಸಾರಕ್ಕೂ ಸಹಾಯ ಮಾಡಿ, ತಂದೆಯ ಋಣವನ್ನು ತೀರಿಸಿದ್ದಾರೆ ಎಂದು ಅರ್ಥ. ಮತ್ತೊಂದು ಮೂಲದ ಪ್ರಕಾರ ನಾಗರಾಜನ ಮಕ್ಕಳು ಲಾಂಗು, ಮಚ್ಚನ್ನು ಬಲ್ಲವರಲ್ಲ, ಖುದ್ದು ನಾಗಾರಾಜನೇ ಚಾಕು, ಚೂರಿ ಮೀರಿದವನಲ್ಲ, ಇದು ಗ್ಯಾರನಹಳ್ಳಿ ತಮ್ಮಯ್ಯ ನಾಗರಾಜನ ಹತ್ಯೆಗೆ ಬಳಸಿದ ದಾಸನಕೊಪ್ಪಲು ಮತ್ತು ವಲ್ಲಭಬಾಯಿ ರೋಡಿನ ಹುಡುಗರ ಕೃತ್ಯ. ಯಾವ ವೈಯಕ್ತಿಕ ದ್ವೇಷವೂ ಇಲ್ಲದೆ ವಿನಾಕಾರಣ ನಾಗರಾಜನನ್ನು ಕೊಲೆಗೈದು ಜೈಲಿಗೆ ಹೋದ ಈ ಹುಡುಗರನ್ನು ನಡು ನೀರಿನಲ್ಲಿ ಕೈಬಿಟ್ಟವನು ತಮ್ಮಯ್ಯ. ಹೀಗಾಗಿ ಅವರಿಗೆ ಇವನ ಮೇಲೆ ದ್ವೇಷವಿದೆ. ಇದು ಅವರದೇ ಕೃತ್ಯ.

ಈ ಥಿಯರಿಗಳೇನೇ ಇರಲಿ, ಸಾರಾಯಿ ಮಾರಿಕೊಂಡು, ನಂತರ ಲಾಡ್ಜ್ ಮಾಲೀಕನಾಗಿ, ಬಡ್ಡಿ ವ್ಯಾಪಾರಿಯಾಗಿ, ಶಿಕ್ಷಣ ಸಂಸ್ಥೆಯ ಮಾಲೀಕನಾಗಿ ಜನರಿಗೆ ಕಂಟಕಪ್ರಾಯನಾಗಿದ್ದ ಗ್ಯಾರಳ್ಳಿ ತಮ್ಮಯ್ಯನ ಸಾವಿನಿಂದ ದುಃಖ ಪಡುವವರು ಯಾರೂ ಇಲ್ಲ. ಬದಲಿಗೆ ನಾಗರಿಕರು ಪೀಡೆ ಕಳೆಯಿತೆಂದು ಸಂತಸಪಟ್ಟಿದ್ದಾರೆ. ಸದ್ಯಕ್ಕೆ ಹಾ.ರಾ. ನಾಗರಾಜನ ಮಕ್ಕಳಾದ ಪ್ರಶಾಂತ್, ನವೀನ್ ಮತ್ತು ಮಯೂರ್ ಊರು ಬಿಟ್ಟಿದ್ದಾರೆ. ಪೊಲೀಸರು ತಮ್ಮಯ್ಯ ಮತ್ತು ನಾಗರಾಜನ ಮಕ್ಕಳ ನಡುವೆ ರಾಜಿ ಮಾಡಿಸಿದ್ದ ಮಟ್ಕಾ ಮಾಸ್ಟರ್ ಗಬ್ಬಾಕುಮಾರ ಮತ್ತು ... ಹಳ್ಳದ ... ತಂದು ಕುಳ್ಳಿಸಿದ್ದಾರೆ

ಮಾರಿಗುಡಿಯ ಹಂತಕ. ... ನಾಗರಾಜನನ್ನು ಮುಟ್ಟಿಸಾಕಿದ್ದ ಅಂದಿನ ... ತಮ್ಮಯ್ಯ ಈಗ ಅದೇ ... ಬಂದಿದ್ದಾರೆ. ಇನ್ನಾದರೂ ಹಾಸನದಲ್ಲಿ ಶಾಂತಿ ನೆಲೆಸಬಹುದೇ ಎಂದು ನಾಗರಿಕರು ಎದುರು ನೋಡುತ್ತಿದ್ದಾರೆ.

-...

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ

ರೇಪಿಸ್ಟುಗಳಿಗೆ ಖಾಕಿಗಳ ರಕ್ಷಣೆ!

ಮೊನ್ನೆಯೇ ಜಿಲ್ಲಾ ರಕ್ಷಣಾಧಿಕಾರಿಯಾಗಿದ್ದ ದಾವಣಗೆರೆಯಲ್ಲಿ ಕೇವಲ ಒಂದೇ ತಿಂಗಳಲ್ಲಿ ಮೂವರು ಹೆಣ್ಣು ಮಕ್ಕಳ ಭೀಕರ ಹತ್ಯೆಗಳಾಗಿವೆ. ದಾವಣಗೆರೆ ಮತ್ತು ಹರಿಹರ ತಾಲ್ಲೂಕುಗಳಲ್ಲಿ ತಲಾ ಒಂದೊಂದರಂತೆ ವರದಕ್ಷಿಣೆಗಾಗಿ ಇಬ್ಬರು ಹೆಣ್ಣು ಮಕ್ಕಳು ಬರ್ಬರ ಹತ್ಯೆಯಾಗಿದ್ದಾರೆ.

ದಾವಣಗೆರೆ

ಇತ್ತೀಚಿಗೆ ಹರಪನಹಳ್ಳಿ ತಾಲ್ಲೂಕು ನೀಲಗುಂದ ಗ್ರಾಮದ ಶೀಲಾ ಎಂಬ 14 ವರ್ಷದ ದಲಿತ ವಿದ್ಯಾರ್ಥಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಹಾಗೂ ಬರ್ಬರ ಹತ್ಯೆಯು ಮಧ್ಯಯುಗದ ಪೈಶಾಚಿಕತೆಯನ್ನು ಮೀರಿಸುವಂತಿದೆ.

ದಿನಾಂಕ: 11-9-2006 ರಂದು ಸಂಜೆ ಬಹಿರ್ದೆಸೆಗೆಂದು ಹೋದ ಶೀಲಾಳನ್ನು ಟ.ಮಹಾಂತೇಶ, ತಿರುಪತಿ, ಆನಂದ, ರಘು, ಮಾಳಗಿ ಅಂಜನಿ, ಟ.ರಾಜಪ್ಪ ಎಂಬ ಕಿರಾತಕರು ಹತ್ತಿರದ ದಾದಾಪುರ ಮಟ್ಟಿಗೆ ಹೊತ್ತೊಯ್ದು ಸಾಮೂಹಿಕ ಅತ್ಯಾಚಾರವನ್ನೆಸಗಿ, ಇಡೀ ರಾತ್ರಿ ಚಿತ್ರಹಿಂಸೆ ನೀಡಿ ಮನುಷ್ಯರಾದವರು ಕಲ್ಪಿಸಿಕೊಳ್ಳಲೂ ಸಾಧ್ಯವಾಗದಂತಹ ಕ್ರೌರ್ಯವನ್ನು ಮೆರೆದಿದ್ದಾರೆ. ಸಾಮೂಹಿಕ ಅತ್ಯಾಚಾರವೆಸಗಿರುವುದನ್ನು ಶೀಲಾ ಬಹಿರಂಗಗೊಳಿಸಬಹುದೆಂದು ಆಕೆಯನ್ನು ಕೊಲ್ಲಲು ತೀರ್ಮಾನಿಸಿರೊಂಡಿ, (ಸೊಂಟದ ಭಾಗಕ್ಕೆ) ಬಲಭುಜವನ್ನು ಬಡಿಗೆ ಗಳಿಂದ ಬಡಿದು ಮುರಿದುಹಾಕಿದ್ದಾರೆ. ಈ ನೀಚರ ರಾಕ್ಷಸ ದಾಳಿಯಿಂದಾಗಿ ಆಕೆಯ ಬೆನ್ನು ಮೇಲಿನ ಚರ್ಮ ಅಂಗೈ ಅಗಲಕ್ಕಿಂತಲೂ ಹೆಚ್ಚು ಕಿತ್ತುಹೋಗಿ ದೊಡ್ಡ ಗಾಯವಾಗಿದೆ.

ಇಷ್ಟಾದರೂ ಶೀಲಾ ಸಾಯದಿದ್ದಾಗ ಅಪ್ಪೊತ್ತಿನಲ್ಲಿ ನೀಲಗುಂದಕ್ಕೆ ಹೋಗಿ ಪೈರಿಗೆ ಸಿಂಪಡಿಸುವ ಕೀಟ ನಾಶಕವನ್ನು ತಂದು ಶೀಲಾಳ ಮೂಗುಮುಚ್ಚಿ ಬಾಯಿಗೆ ಹೊಯ್ದಿದ್ದಾರೆ. ಆಗಲೂ ಶೀಲಾ ಸತ್ತಿಲ್ಲ! ಅಮಾನುಷ ಅತ್ಯಾಚಾರವೆಸಗಿ ಐದು ಮಂದಿ ಅಲ್ಲಿಂದ ಕಾಲು ಕಿತ್ತಾಗ ಟ.ಮಹಾಂತೇಶ ಎಂಬುವನು ಶೀಲಾಳನ್ನು ಹತ್ತಿರದ ತೆಲಗಿ ಎಂಬ ಊರಿಗೆ ಕರೆದೊಯ್ದು ಆಸ್ಪತ್ರೆಗೆ ಸೇರಿಸುವ ನಾಟಕವಾಡಿದ್ದಾನೆ. ಶೀಲಾ ಬದುಕುಳಿಯಲಾರಳೆಂದು ವೈದ್ಯರು ಹೇಳಿದ್ದೇ ತಡ ಮಹಾಂತೇಶ ಅಲ್ಲಿಂದ ಓಡಿ ಹೋಗಿದ್ದಾನೆ. ಮಧ್ಯಾಹ್ನದ ಹೊತ್ತಿಗೆ ಶೀಲಾ ಸತ್ತು ಹೋಗಿದ್ದಾಳೆ.


ಸಂಜೆಯಾದರೂ ಶೀಲಾ ಕಾಣೆಯಾಗಿದ್ದರಿಂದ ಶೀಲಾ ಬಂಧುಗಳು ಹರಪನಹಳ್ಳಿ ಹಾಗೂ ಹರಿಹರದ ನೆಂಟರ ಮನೆಗಳಲ್ಲಿ ಹುಡುಕಿದ್ದಾರೆ. ಆದರೆ, ಅಂದು ರಾತ್ರಿಯೇ ಶೀಲಾಳನ್ನು ಹೊತ್ತೊಯ್ದು ಅತ್ಯಾಚಾರವೆಸಗುತ್ತಿರುವ ಬಗ್ಗೆ ಗುಸುಗುಸು ಹಬ್ಬಿ ಮರುದಿನ ಬೆಳಗ್ಗೆಯ ಹೊತ್ತಿಗೆ ಶೀಲಾ ತೆಲಗಿ ಆಸ್ಪತ್ರೆಯಲ್ಲಿರುವುದು ಗೊತ್ತಾಗಿದೆ. ಆಸ್ಪತ್ರೆಗೆ ಬಂದ ತನ್ನ ಚಿಕ್ಕಪ್ಪನ ಹತ್ತಿರ ಶೀಲಾ, ಟ.ಮಹಾಂತೇಶ,



ಅತ್ಯಾಚಾರಕ್ಕೀಡಾದ ಯುವತಿ

ಆನಂದ, ತಿರುಪತಿ, ಮಾಳಿಗಿ ಅಂಜಿನಿ, ರಘು ಟ., ರಾಜಪ್ಪ ಇವರು ತನ್ನ ಮೇಲೆ ಅತ್ಯಾಚಾರವೆಸಗಿ ಬಾಯಿಗೆ ವಿಷ ಸುರಿದಿರುವ ಬಗ್ಗೆ ಮತ್ತು ಬಡಿಗೆಗಳಿಂದ ಹೊಡೆದು ತನ್ನ ಸೊಂಟ ಹಾಗೂ ಕೈಯನ್ನು ಮುರಿದಿರುವುದರಿಂದ ತಾನು ಮೇಲಕ್ಕೇಳಲಾರನೆಂದು ಗೋಳಿಟ್ಟಿದ್ದಾಳೆ.

ಈ ಸಂದರ್ಭದಲ್ಲಿ ತೋಲೆ ತುಂಡುಗಳಂತೆ ಎದುರಿಗೆ ನಿಂತಿದ್ದ ಪೊಲೀಸರು ಶೀಲಾಳ ಹೇಳಿಕೆಯನ್ನು ರೆಕಾರ್ಡ್ ಮಾಡಲಿಲ್ಲ. ಶೀಲಾಳ ತಂದೆ ದುರುಗಪ್ಪ ನೀಡಿದ ದೂರಿನ ಮೇರೆಗೆ ಒಲ್ಲದ ಮನಸ್ಸಿನಿಂದ ಎಫ್.ಐ.ಆರ್. ಹಾಕಿ ಈ ಆರೂ ಮಂದಿಯ ಹೆಸರನ್ನು ಸೇರಿಸಿದ್ದರೂ, ಈ ಆರೂ ಮಂದಿಯಲ್ಲಿ ಆರ್ಥಿಕವಾಗಿ ಅಷ್ಟಕ್ಕಷ್ಟೇ ಇರುವ ಮಹಾಂತೇಶನಿಗೆ ಲಕ್ಷಗಟ್ಟಲೆ ಹಣ ನೀಡುವ ಆಸೆ ತೋರಿಸಿರುವ ಪ್ರಭಾವಿ ರೇಪಿಸ್ಟುಗಳು ಕೇಸನ್ನು ತನ್ನ ಮೇಲೆಳೆದುಕೊಳ್ಳುವಂತೆ ಮಹಾಂತೇಶನನ್ನು ಒಪ್ಪಿಸಿ ಇವನನ್ನು ಪೊಲೀಸರಿಗೆ ಕೊಟ್ಟಿದ್ದಾರೆ. ಒಬ್ಬನ ಅಣ್ಣ ಸಬ್‌ಇನ್ಸ್‌ಪೆಕ್ಟರ್, ಇನ್ನೊಬ್ಬನ ಅಣ್ಣ ದಫೇದಾರ. ಹೀಗಾಗಿ ಪೊಲೀಸರು ಕೇಸಿನ ಕತ್ತು ಹಿಸುಕುವ ವ್ಯವಸ್ಥಿತ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇಲ್ಲಿಗೆ ಭೇಟಿ ನೀಡಿದ ಎಸ್ಪಿ ಸೋನಿಯಾ ನಾರಂಗ್ ತಕ್ಷಣಕ್ಕೆ ವೀರಾವೇಶದಿಂದ ಮಾತನಾಡಿದ್ದರೂ ನಂತರದಲ್ಲಿ ಸ್ಥಳೀಯ ಪೊಲೀಸ್ ಅಧಿಕಾರಿಗಳಿಗೆ ರೇಪಿಸ್ಟುರು ಮತ್ತು ಕೊಲೆಗಡುಕ ರಾಜಕೀಯ ನಾಯಕರು ನೀಡಿದ ಆರೇಳು ಲಕ್ಷ ರೂ.ಗಳ ಬಟವಾಡೆಯಿಂದಾಗಿ ಸೋನಿಯಾ ಉಸ್ಸೆಂದಿದ್ದಾಳೆ. ಹಾಗಾಗಿಯೇ ಇಲ್ಲಿನ ಪೊಲೀಸರು ಮಹಾಂತೇಶನನ್ನು ಹೊರತುಪಡಿಸಿ ಇನ್ನಾರನ್ನೂ ಬಂಧಿಸಿಲ್ಲ. ಈ ಕೇಸನ್ನು ಹಳ್ಳ ಹಿಡಿಸಲು ರೇಪಿಸ್ಟುಗಳೊಂದಿಗೆ ಪೊಲೀಸರು ನೇರವಾಗಿ ಶಾಮೀಲಾಗಿರುವುದಲ್ಲದೇ ಹೊಸ ಕತೆಯೊಂದನ್ನು ಸೃಷ್ಟಿಸಿದ್ದಾರೆ.



ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿ ಜಾಥಾ

ಟ.ಮಹಾಂತೇಶ ಹಾಗೂ ಶೀಲಾ ಪರಸ್ಪರ ಪ್ರೀತಿಸುತ್ತಿದ್ದರು. ಇವರ ಪ್ರೀತಿಗೆ ಅಡ್ಡಿಗಳು ಬಂದಿದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ ಇಬ್ಬರೂ ವಿಷವನ್ನು ಕುಡಿದಿದ್ದಾರೆ. ಮಹಾಂತೇಶ ಶೀಲಾಳನ್ನು ಬದುಕಿಸಲು ಪ್ರಯತ್ನಿಸಿದ್ದಾನೆ ಎಂಬ ಹೊಚ್ಚ ಹೊಸ ಕತೆಯನ್ನು ಸೃಷ್ಟಿಸಿ ರೇಪಿಸ್ಟುಗಳಿಗೆ ಸಂಬಂಧಿಸಿದ ಪ್ರಭಾವಿ ವ್ಯಕ್ತಿಗಳು ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಇದೇ ಹಾಡನ್ನು ಪೊಲೀಸರೂ ಹಾಡುತ್ತಿದ್ದಾರೆ. 'ಶೀಲಾಳ ಕೈ, ಕಾಲುಗಳು ಮುರಿದಿದ್ದೇಕೆ? ಆಕೆಯ ಬೆನ್ನ ಮೇಲಿನ ಚರ್ಮ ಕಿತ್ತು ಹೋಗಿದ್ದೇಕೆ?' ಎಂದು ಕೇಳಿದರೆ 'ಮೆಟ್ಟಿಲ ಮೇಲಿಂದ ಹೊತ್ತು, ಎಳೆದು ತಂದಿದ್ದರಿಂದ ಹೀಗಾಗಿದೆ' ಎಂಬ ಸಿದ್ಧ ಉತ್ತರವನ್ನು ಕೊಡುತ್ತಿದ್ದಾರೆ. ವಾಸ್ತವವೆಂದರೆ ವಿಷ ಕುಡಿದಿದ್ದಳೆನ್ನುವ ಶೀಲಾ ಸತ್ತಾಗ ಆಕೆಯ ಬಿಳುಪಿನ ದೇಹ ಒಂದು ಚೂರೂ ಕಪ್ಪಿಟ್ಟಿರಲಿಲ್ಲ! ಇನ್ನೊಂದು ಕಡೆ ವಿಷ ಕುಡಿ... ದ್ದಾನೆನ್ನುವ ಮಹಾಂತೇಶನಿಗೆ ಏನೂ ಆಗದೇ ಗೂ... ಯಂತಿದ್ದಾನೆ. ಪೊಲೀಸ್ ರಾಜ್ಯದಲ್ಲಿ ಮಾತ್ರ ಇಂತಹ ವಿಸ್ಮಯಗಳು ನಡೆಯಬಹುದೇನೋ?

ದಲಿತ ಸಂಘರ್ಷ ಸಮಿತಿ, ಮಾದಿಗ ಮೀಸಲಾತಿ ಹೋರಾಟ ಸಮಿತಿ ಹಾಗೂ ಪ್ರಗತಿಪರ ಸಂಘಟನೆಗಳ ನಾಯಕರುಗಳಾದ ಎ.ಕೆ.ಹಾಲೇಶ್, ಕಣವಿಹಳ್ಳಿ ಮಂಜುನಾಥ, ಮೋತಿನಾಯ್ಕ, ಹೊಸಳ್ಳಿ ಮಲ್ಲೇಶ್ ಮುಂತಾದವರ ನಾಯಕತ್ವದಲ್ಲಿ ದಿ. 20.9.2006ರಂದು ಸುಮಾರು ನಾಲ್ಕು ಸಾವಿರ ಮಂದಿ ನೀಲಗುಂದದಿಂದ ಹರಪನಹಳ್ಳಿಯವರೆಗೆ ಹದಿನಾಲ್ಕು ಕಿಲೋಮೀಟರ್ ಕಾಲ್ನಡಿಗೆಯ ಜಾಥಾವನ್ನು ಮಾಡಿ ಎಲ್ಲ ರೇಪಿಸ್ಟುಗಳನ್ನು ಬಂಧಿಸುವಂತೆ ಒತ್ತಾಯಿಸಿದ್ದಾರೆ. ದಣಿದು ಬಂದಿದ್ದ ಇವರಿಗಾಗಿಯೇ ತಯಾರಿಸಿದ್ದ ಊಟವನ್ನು ತಿರಸ್ಕರಿಸಿ ಪೊಲೀಸ್ ಹಾಗೂ ರಾಜಕಾರಣಿಗಳನ್ನು ಶಪಿಸಿ ಊರಕಡೆ ಹೋಗಿದ್ದಾರೆ. ಇವರ ನೋವಿನ ಕಾವು ಸರ್ಕಾರಕ್ಕೆ ತಟ್ಟದಿರುತ್ತದೆಯೇ?

-ಚಂದ್ರಶೇಖರ ತೋರಣಘಟ್ಟ

ಇವತ್ತಿಗೂ ಹೆಣ್ಣು ಅಬಲೆ ಎಂಬುದಕ್ಕೆ ಇತ್ತೀಚಿಗೆ ನಡೆದಿರುವ ಈ ನಾಲ್ಕು ಲೈಂಗಿಕ ದೌರ್ಜನ್ಯಗಳೇ ಸಾಕ್ಷಿ. ಕೊಪ್ಪಳ, ದಾವಣಗೆರೆ, ಧಾರವಾಡಗಳಲ್ಲಿ ಮೂರು ರೇಪುಗಳು, ಸಿಂಧನೂರಿನಲ್ಲಿ ಕಾಮುಕ ಉಪನ್ಯಾಸಕರಿಂದ ವಿದ್ಯಾರ್ಥಿನಿಯರಿಗೆ ತೊಂದರೆ... ಮೂರು ರೇಪು ಕೇಸುಗಳಲ್ಲಿ ಪೊಲೀಸ್ ವ್ಯವಸ್ಥೆ ರೇಪಿಸ್ಟರ ಪರವಾಗಿಯೇ ಕಾರ್ಯನಿರ್ವಹಿಸುತ್ತಿರುವಂತಿದೆ. ಇದರ ಹಿಂದೆ ರಾಜಕಾರಣಿಗಳ ನೆರಳೂ ಇದೆ. ನಮ್ಮ ಪ್ರಗತಿಪರ ಸಂಘಟನೆಗಳು, ಮಹಿಳಾ ಸಂಘಟನೆಗಳು ಇನ್ನಷ್ಟು ಚುರುಕುಗೊಂಡು ರೇಪಿಸ್ಟರಿಗೆ ಶಿಕ್ಷೆ ಆಗುವಂತೆ ಮಾಡಬೇಕಿದೆ.


ಕುಷ್ಟಗಿ ಶಾಸಕನ ತಲೆತಿರುಕುತನ

ರೇಪ್‌ಗೆ ತಿಪ್ಪಮ್ಮಳ ಬಲಿ!

ಒಂದು ಸಂಬಂಧ.... ಅದರ ಸೇಡಿಗೆಂದು ಒಂದು ರೇಪು... ಕೊನೆಗೊಂದು ಹೆಣ್ಣು ಜೀವದ ಬಲಿ.. ಇಷ್ಟೆಲ್ಲಾ ನಡೆದರೂ ಕುಷ್ಟಗಿಯ ಹೊಣೆಗೇಡಿ ಚೆಡ್ಡಿ ಶಾಸಕ ದೊಡ್ಡನಗೌಡ ಪಾಟೀಲ್ ಮಾತ್ರ ತನ್ನೂರಿನ ಆರೋಪಿಯ ಪರ ನಿಂತು ತಾನು ನಾಲಾಯಕ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾನೆ.

ಹುಡುಗಿಯೊಬ್ಬಳ ಸಾವು ಇಲ್ಲಿ ರಾಜಕೀಯ ಜಗ್ಗಾಟಕ್ಕೂ ಕಾರಣವಾಗಿದೆ. ಹಳ್ಳಿ ಹಳ್ಳಿಯಲ್ಲಿ ಸಿಓಡಿ ತನಿಖೆಗೆ ಆಗ್ರಹಿಸಲಾಗುತ್ತಿದೆ.

ಕುಷ್ಟಗಿ ಶಾಸಕ ದೊಡ್ಡನಗೌಡನ ಸ್ವಗ್ರಾಮ ಕೊರಡಕೇರಾದಲ್ಲಿ ಈ ಘಟನೆ ನಡೆದಿದೆ. ಊರವರ‍್ಯಾರೂ ಬಾಯಿ ಬಿಡುತ್ತಿಲ್ಲ. ಅಷ್ಟು ಭಯದ ವಾತಾವರಣವಿದೆ. ಮೃತ ತಿಪ್ಪಮ್ಮಳ ಮನೆಗೆ ಭೇಟಿ ನೀಡುವುದೂ ಅಸಾಧ್ಯ. ಎಲ್ಲಿ ನೋಡಿದರಲ್ಲಿ ಹಲ್ಲೆಕೋರರ ಗುಂಪುಗಳೇ ನಿಂತಿವೆ. ಕಾರಣ? ಆರೋಪಿ ಪುತ್ರಪ್ಪ ಶಾಸಕ ದೊಡ್ಡನಗೌಡನ ಸಂಬಂಧಿ!



ಶಾಸಕ ದೊಡ್ಡನಗೌಡ

ಆಗಸ್ಟ್ 25, ಶುಕ್ರವಾರ- ತನ್ನವ್ವ ನಾಗವ್ವನಿಗೆ ಚಹಾ ತರಲೆಂದು ಚಹಾದಂಗಡಿಗೆ ತಿಪ್ಪಮ್ಮ ಎಂಬ ಇಪ್ಪತ್ತರ ಹರೆಯದ ಹುಡುಗಿ ಹೊರಟಿದ್ದಾಳೆ. ಆಗ ಕೇಡಿ ಪುತ್ರಪ್ಪ ಹಾಡು ಹಗಲೇ ನಡುಬೀದಿಯಲ್ಲಿ ಎಲ್ಲರ ಎದುರೇ ತಿಪ್ಪಮ್ಮಳನ್ನು ತನ್ನ ಮನೆಗೆ ಹೊತ್ತೊಯ್ದಿದ್ದಾನೆ! ರಾತ್ರಿಯಿಡೀ ತನ್ನ ಪೈಶಾಚಿಕ ಕೃತ್ಯ ನಡೆಸಿದ್ದಾನೆ!


ಬಾಗಿಲಿಗೆ ಕಾವಲಾಗಿ ಪುತ್ರಪ್ಪನ ತಮ್ಮಂದಿರಾದ ಶ್ರೀಕಾಂತ್, ಹನುಮಂತಪ್ಪ ನಿಂತಿದ್ದಾರೆ. ತಿಪ್ಪಮ್ಮಳನ್ನು ಹೊತ್ತೊಯ್ಯುವುದನ್ನು ಇಡೀ ಊರೇ ಮೂಕಪ್ರೇಕ್ಷಕರಂತೆ ನಿಂತು ನೋಡಿದೆ. ತನ್ನನ್ನು ಕಾಪಾಡಿ ಎದು ಚೀರಿಕೊಂಡ ತಿಪ್ಪಮ್ಮಳ ಸಹಾಯಕ್ಕೆ ಒಬ್ಬ ನರಪಿಳ್ಳೆಯೂ ಹೋಗಿಲ್ಲ! ಕೊರಡಕೇರಾ ಜನರ ಮನಸ್ಸು ಅಂದು ಕೊರಡು ಆಗಿತ್ತೆ?

ಮರುದಿನ ಹಾಜರಾದ ಕೊಪ್ಪಳ ಪೊಲೀಸರು ಆರೋಪಿ ಅಲ್ಲೇ ಇದ್ದರೂ ಬಂಧಿಸಿಲ್ಲ. ತಿಪ್ಪಮ್ಮ, ಅವಳ ತಾಯಿ ನಾಗಮ್ಮರನ್ನು ಸ್ಟೇಷನ್‌ಗೆ ಕರೆದೊಯ್ದಿದ್ದಾರೆ. ಆಗಲೇ ಶಾಸಕ ದೊಡ್ಡನಗೌಡನ ಫೋನ್ ಕಾಟ ಶುರುವಾಗಿದೆ. 'ಕಂಪ್ಲೇಂಟ್ ತೊಗೋಬೇಡಿ' ಎಂಬುದು ಈ ಮುಠ್ಠಾಳನ ಆದೇಶವಾಗಿತ್ತು. ಊರ ಹಿರಿಯರು ಸೇರಿ ಒಂದು ವಾರದೊಳಗೇ ತಿಪ್ಪಮ್ಮ, ಪುತ್ರಪ್ಪರಿಗೆ ಮದುವೆ ಮಾಡ್ತೀವಿ ಎಂದು ರಾಜಿ ಪಂಚಾಯ್ತಿ ಮಾಡಿದ್ದಾರೆ.

ಕೊಪ್ಪಳ

ತಿಪ್ಪಮ್ಮ ಸೀದಾ ಪುತ್ರಪ್ಪನ ಮನೆಗೇ ಹೋಗಿ ಇರತೊಡಗಿದ್ದಾಳೆ! ಆದರೆ ಅಲ್ಲಿ ಆಕೆಗೆ ಅನ್ನ, ನೀರು ಕೊಡದೇ ಕಿರುಕುಳ ನೀಡಿದ್ದಾರೆ. ತನ್ನೂರಿಗೆ ಬರದೇ ಸಮಸ್ಯೆ ಬಗೆಹರಿಸದೇ ವಾರ ಕಾಲ ನಾಪತ್ತೆ ಯಾಗಿದ್ದಾನೆ ನಾಲಾಯಕ್ ಶಾಸಕ.

ಅದೆಷ್ಟು ಅವಮಾನ, ನೋವು, ಅನುಭವಿಸಿದಳೋ ತಿಪ್ಪಮ್ಮ? ಸೆಪ್ಟೆಂಬರ್ 9 ರಂದು ಊರ ಮಧ್ಯದಲ್ಲಿರುವ ಬಾವಿಗೆ ಹಾರಿ ಜೀವ ಬಿಟ್ಟಿದ್ದಾಳೆ. ಜನ ಇದನ್ನೂ ನಿಂತು ನೋಡಿದ್ದಾರೆ! ಅಂದರೆ ಅಲ್ಲಿ ಮಾನವೀಯತೆ ಸತ್ತು ಹೋಗಿದೆಯಾ? ಅಥವಾ ಅಷ್ಟೊಂದು ಭಯದ ವಾತಾವರಣ ಸೃಷ್ಟಿಸಿದ್ದಾರಾ?



ಸ್ಯಾಡಿಸ್ಟ್‌ಗೆ ಬಲಿಯಾದ ತಿಪ್ಪಮ್ಮ

ಸುದ್ದಿ ತಿಳಿದ ಪುತ್ರಪ್ಪ ಬ್ರದರ್ಸ್ ಜೊತೆಗೆ ಊರೇ ಬಿಟ್ಟಿದ್ದಾನೆ. ಎಲ್ಲೆಲ್ಲೂ ಸುದ್ದಿಯಾದ ಮೇಲಷ್ಟೇ ಗಜೇಂದ್ರಗಡದಲ್ಲಿ ತಲೆ ಮರೆಸಿಕೊಂಡಿದ್ದ ಪುತ್ರಪ್ಪನನ್ನು ಹಿಡಿದು ತಂದು ಜೈಲಿಗೆ ದಬ್ಬಿದ್ದಾರೆ. ಇವತ್ತಿಗೂ ಯಾವ ಸಂಘಟನೆಯೂ ತಿಪ್ಪಮ್ಮಳ ಪರ ಮಾತಾಡಿಲ್ಲ. ಕೊನೆಗೆ ತಾವು ವಿರೋಧ ಪಾರ್ಟಿಯವರು ಎಂಬ ಕಾರಣಕ್ಕಷ್ಟೇ ಜಿ.ಪಂ. ಅಧ್ಯಕ್ಷೆ ವಿಜಯಲಕ್ಷ್ಮಿ ಸೇರಿದಂತೆ ಸದಸ್ಯೆಯರು ಸಿಓಡಿ ತನಿಖೆಗೆ ಆಗ್ರಹಿಸಿದ್ದಾರೆ. ಇತರ ಹಳ್ಳಿಗಳ ಜನರೂ ಸಿಓಡಿ ತನಿಖೆ ಆಗಲೇಬೇಕು ಎನ್ನುತ್ತಿದ್ದಾರೆ. ರೇಪು, ಸಾವು ಎಲ್ಲವನ್ನೂ ನೋಡಿ ಸುಮ್ಮನೇ ನಿಂತಿದ್ದ ಊರ ಹಿರಿಯರೀಗ ನಾಚಿಕೆ ಬಿಟ್ಟು 'ಶಾಸಕರ ಹೆಸರಿಗೆ ಮಸಿ ಬಳಿಯುವ ಯತ್ನ' ಎಂದು ಚೀರುತ್ತಿವೆ. ಇವರು ಶಾಸಕನ ಬಾಲಗಳಾದ ಬಸಯ್ಯ, ಭರಮಪ್ಪ ಟೆಂಗಿನಕಾಯಿ, ಶಂಕ್ರಿ, ಪೂಜಾರ ದಾನಪ್ಪ ಇವರೇ ಪ್ರಮುಖರು.

ಇದು ಸೇಡಿನ ರೇಪು ಅಂತೆ ಈ ಹೊಲಸು ಪುತ್ರಪ್ಪನಿಗೆ! ಜೀವ ಕಳೆದುಕೊಂಡ ತಿಪ್ಪಮ್ಮಳ ಅ... ದೊಡ್ಡನಗೌಡನಿಗೂ, ಪುತ್ರಪ್ಪನ ಹೆಂಡತಿಗೂ ಸಂಬಂಧವಿತ್ತು, ಇದನ್ನು 'ರೆಡ್‌ಹ್ಯಾಂಡಾಗಿ' ಪುತ್ರಪ್ಪ ಹಿಡಿದಿದ್ದ. ಅಂದೇ "ನಾನೂ ಅವ್ನ ಹೆಂ... ರೇಪು ಮಾಡಿಯೇ ತೀರುತ್ತೇನೆ" ಎಂದು ಶಪಥ ಮಾಡಿತಂತೆ ಈ ಸ್ಯಾಡಿಸ್ಟ್ ಪುತ್ರ... ಆಗ ತಿಪ್ಪಮ್ಮಳ ಅಣ್ಣ ತನ್ನ ಹೆಂ... ಯೊಂದಿಗೆ ಸಿಂಧನೂರಿಗೆ ಹೋಗಿಬಿಟ್ಟ... ಅಣ್ಣನ ಮೇಲಿನ ಸಿಟ್ಟನ್ನು ತಂಗಿ ತಿಪ್ಪಮ್ಮಳ ಮೇಲೆ ತಿರುಗಿಸಿದ ಮೃಗ ಪುತ್ರಪ್ಪ ಅಮಾಯಕ ಯುವತಿಯ ಜೀವ ತೆಗೆ... ದ್ದಾನೆ. ಚೆಡ್ಡಿ ಶಾಸಕ ದೊಡ್ಡನಗೌಡ ಪಾಟೀಲ್ ಹೊಣೆಗೇಡಿ ಆಗಿರುವು... ರಿಂದ ಸರ್ಕಾರವೇ ಈ ಪ್ರಕರಣದ ತನಿಖೆ ಮಾಡಿ ಪುತ್ರಪ್ಪನಂತಹ ಮೃಗಗಳಿಗೆ ಪಾಠ ಕಲಿಸ... ಬೇಕಾಗಿದೆ. ಅದೆಲ್ಲ ಇರಲಿ, ಕೊರಡಕೇರಾದ ಜನ ತಮ್ಮೂರ ಮುಠ್ಠಾಳ ಹಿರಿಯರ ಮಾತು ಕೇಳುವುದ... ಬಿಟ್ಟು, ತಿಪ್ಪಮ್ಮಳ ಸಾವಿಗೆ ನ್ಯಾಯ ದೊರಕಿಸಲು ಧ್ವನಿ ಎತ್ತಬೇಕಿದೆ. ಪ್ರಗತಿಪರ ಸಂಘಟನೆಗಳು ಇತ್ತ ಗಮನಹರಿಸುವವೆ?

-ಪಿ.ಕೆ. ಮಲ್ಲನಗೌಡರ

ಧಾರವಾಡ

ಪ್ರೇಯಸಿಯ ಅಶ್ಲೀಲ ಸಿಡಿ ಮಾರಾಟ ಡಿವೈಎಸ್‌ಪಿ ತಡಕೋಡ ಪುತ್ರನ ಕೈ!

ಒಬ್ಬ ತಲೆಕೆಟ್ಟ ಲವರ್... ಅವನಿಗೊಬ್ಬ ಖಾಕಿ ಖದೀಮನ ಪುತ್ರನ ಸಪೋರ್ಟು... ಪ್ರೀತಿಸಿದಾಕೆಗೆ ಅರಿವಿಲ್ಲದಂತೆ ಅಶ್ಲೀಲ ಸೀಡಿ ರೆಡಿ ಮಾಡಿ ಮಾರಾಟಕ್ಕೆ ಬಿಟ್ಟಿದ್ದ ಈ ಎರಡು ಕಾಮಪಿಶಾಚಿಗಳೂ ಕೊನೆಗೂ ಜೈಲು ಪಾಲಾಗಿವೆ. ಆದರೆ ಇವರ ಇನ್‌ಫ್ಲುಯೆನ್ಸು ಇವರನ್ನು ಬಚಾವು ಮಾಡುವಂತೆ ಕಾಣುತ್ತಿದೆ. ಬಲಿಯಾಗಿರುವ ಹುಡುಗಿ ಧಾರವಾಡದ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಯ ಹೆಡ್‌ಮಾಸ್ಟರ್ ಮಗಳು ಮಧುಭಟ್... ತಲೆತಿರುಕ ಲವರ್ ಆನಂದ ದೇಸಾಯಿ, ಖಾಕಿ ನೆರಳಿರುವ ಧೂರ್ತ ಜಾಫರ್ ತಡಕೋಡ್...

ಮಧು ಮತ್ತು ಆನಂದ ದೇಸಾಯಿ ಅಕ್ಕಪಕ್ಕದ ಮನೆಯವರು. ಹಿಂದೆ ಜೆಎಸ್‌ಎಸ್ ಕಾಲೇಜಿನಲ್ಲಿ ಓದುವಾಗಲೇ ಇವರಿಬ್ಬರ ನಡುವೆ ಪ್ರೇಮ ಅರಳಿತ್ತು. ನಂತರ ಆನಂದ ದೇಸಾಯಿ ಮೆಡಿಕಲ್ ಓದಲು ವಿದೇಶಕ್ಕೆ ಹೋದ. ಇತ್ತ ಮಧುಳನ್ನು ಕಾಲೇಜು ಬಿಡಿಸಿದ ಪಾಲಕರು ದುಬೈನ ಹುಡುಗನೊಂದಿಗೆ ಮದುವೆ ಫಿಕ್ಸ್ ಮಾಡಿದರು.

ರಜೆಗೆಂದು ಬಂದ ಆನಂದನಿಗೆ ಈ ಸುದ್ದಿ ಆಘಾತ ತಂದಿತ್ತು. ಮಧು ಸಹ ತಂದೆಯ ಮಾತಿನಂತೆ ಮದುವೆಗೆ ಒಪ್ಪಿದ್ದು ಈ ಆನಂದ ಎಂಬ ಹುಂಬನ ತಲೆತಿರುಗಿಸಿತು. ಆಗ ಹಲ್ಕಟ್ ಗೆಳೆಯ ಜಾಫರ್ ತಡಕೋಡ ನೊಡನೆ ಸೇರಿ ಮನೆಹಾಳ 'ಯೋಜನೆ' ಹಾಕಿದ. ಜಾಫರ್ ತಡಕೋಡನ ಮೊಬೈಲ್‌ನಿಂದ ಮಧುಗೆ ಮೆಸೇಜ್ ಕಳಿಸಿದ ಆನಂದ ದೇಸಾಯಿ "ಇನ್ನು ಕೆಲ ದಿನಗಳಲ್ಲಿ ನೀನು ದುಬೈ ಸೇರುತ್ತಿ, ನಿನಗಾಗಿ ಸಣ್ಣದೊಂದು ಪಾರ್ಟಿ ಆರೇಂಜ್ ಮಾಡಿದ್ದೇನೆ" ಎಂದು ಮಧುಳನ್ನು ಕರೆಸಿಕೊಂಡಿದ್ದಾನೆ. ಮನೆಯೊಂದರಲ್ಲಿ ಈ ಪಾರ್ಟಿ ನಡೆದಿದೆ. ಚಹದಲ್ಲಿ ಮತ್ತು ಭರಿಸುವ ಪುಡಿ ಬೆರೆಸಿದ್ದರಿಂದ ಮಧು ಅರೆಪ್ರಜ್ಞೆಗೆ ಜಾರಿದ್ದಾಳೆ. ಆನಂದ, ತಡಕೋಡ ಇಬ್ಬರೂ ಮಧು ಮೇಲೆ ಅತ್ಯಾಚಾರವೆಸಗಿ ಅದನ್ನು ಶೂಟ್ ಮಾಡಿಕೊಂಡಿದ್ದಾರೆ.


ಜಾಫರ್ ತಡಕೋಡ


ಸಿಪಿಐ ತಡಕೋಡ


ಆನಂದ್ ದೇಸಾಯಿ

ಈಗಾಗಲೇ ಇವರು ತಯಾರಿಸಿದ ಸಿಡಿಗಳು 'ಧಾರವಾಡ ಮಲ್ಲಿಗೆ', 'ಧಾರವಾಡ ಪೇಡಾ' ಎಂಬ ಹೆಸರಲ್ಲಿ ಓಡಾಡುತ್ತಿವೆ ಎಂಬ ಸುದ್ದಿಯೂ ಇದೆ. 'ಮೈಸೂರು ಮಲ್ಲಿಗೆ' ಸೀಡಿಯಂತೆ ಇದನ್ನೂ ರಾಜ್ಯಾದ್ಯಂತ ಹರಡುವ ಪ್ಲಾನೂ ಇತ್ತಂತೆ. ಮಧುಗೆ ಆನಂದನ ಬ್ಲ್ಯಾಕ್‌ಮೇಲೂ ಶುರುವಾಗಿದೆ. ಆಗ ಮಧು ತಂದೆತಾಯಿಗೆ ವಿಚಾರ ತಿಳಿಸಿದ್ದಾಳೆ.

ಆನಂದ, ತಡಕೋಡ ಮಧುಗೆ ಜೀವ ಬೆದರಿಕೆ ಒಡ್ಡಿದ್ದಾರೆ. ಮಧು ಸ್ನೇಹಿತ ತಾವಡೆ ಎಂಬಾತ ಸೀಡಿ ಕೇಳಲು ಹೋದರೆ, ಆತನ ಮೇಲೆಯೇ ದೂರು ನೀಡಿದ್ದಾರೆ ಆನಂದ ಮತ್ತು ತಡಕೋಡಗಳು. ಮಾಧ್ಯಮಗಳಿಗೆ ಈ ವಿಷಯ ಗೊತ್ತಾಗುತ್ತಿದ್ದಂತೆ ಕಮಿಷನರ್ ನಾರಾಯಣ ನಡಮನಿ ಡಿಸಿಪಿ ದಲೀಪ್‌ರನ್ನು ಕಳಿಸಿ ಮಧು ತಂದೆತಾಯಿಗಳಿಂದ ದೂರು ಪಡೆದು ತಡಕೋಡ, ಆನಂದರನ್ನು ಬಂಧಿಸಿದ್ದಾರೆ.

ಈಗ ಹೆಸರಿಗಷ್ಟೇ ಬಂಧನವಾಗಿದೆ. ಇಬ್ಬರು ಆರೋಪಿಗಳನ್ನು ಆಸ್ಪತ್ರೆಗೆ ಸೇರಿಸಿ ಎಲ್ಲ ಅನುಕೂಲಗಳನ್ನು ಮಾಡಿಕೊಡಲಾಗಿದೆ.

ಜಾಫರ್ ತಡಕೋಡನ ಅಪ್ಪ ಚಿಕ್ಕಪ್ಪರ ಪ್ರಭಾವವೇ ಇದಕ್ಕೆ ಕಾರಣ. ಜಾಫರ್‌ನ ಅಪ್ಪ ದಾವಣಗೆರೆಯಲ್ಲಿ ಡಿವೈಎಸ್‌ಪಿ, ಚಿಕ್ಕಪ್ಪ ಇಲ್ಲೇ ಹುಬ್ಬಳ್ಳಿಯಲ್ಲಿ ಸಿಪಿಐ! ಇಬ್ಬರೂ ಭ್ರಷ್ಟಾತಿಭ್ರಷ್ಟರೇ! ಸಬ್‌ಜೈಲ್‌ನಲ್ಲಿದ್ದ ಪುತ್ರನನ್ನು ಭೇಟಿಯಾದ ಡಿವೈಎಸ್‌ಪಿ ತಡಕೋಡ ಎದೆ ನೋವು ಎಂಬ ನೆಪ ಹೂಡಿಸಿ ಇಬ್ಬರೂ ಆರೋಪಿಗಳನ್ನು ಆಸ್ಪತ್ರೆಗೆ ಸೇರಿಸಿದ್ದಾನೆ. ಆನಂದ ಕಿಮ್ಸ್‌ನಲ್ಲಿ, ತಡಕೋಡ ಜಿಲ್ಲಾ ಆಸ್ಪತ್ರೆಯಲ್ಲಿ ಸಕಲ ಐಷಾರಾಮಗಳೊಂದಿಗೆ ಹಾಯಾಗಿದ್ದಾರೆ. ಧಾರವಾಡ ಜಿಲ್ಲಾ ಆಸ್ಪತ್ರೆಯಿಂದ ಜಾಫರ್ ತಡಕೋಡನನ್ನು ಕಿಮ್ಸ್‌ಗೆ ವರ್ಗಾಯಿಸಲು ಯತ್ನಿಸಿದ್ದಾರೆ. ಹೊರರೋಗಿ ವಿಭಾಗದಲ್ಲಿ ಚೆಕ್ ಮಾಡಿದಾಗ ಈ ಉಂಡಾಡಿ ಆರೋಗ್ಯವಾಗೇ ಇದ್ದಾನೆ. ಕಿಮ್ಸ್‌ನವರು ಅಡ್ಮಿಟ್ ಮಾಡಿಕೊಳ್ಳದ್ದರಿಂದ ತಿರುಗಿ ಜಿಲ್ಲಾ ಆಸ್ಪತ್ರೆಗೆ ಬಂದಿದೆ ಶನಿ ಜಾಫರ್.


ಇದೆಲ್ಲದರ ಮಧ್ಯೆ ಮಾನಸಿಕವಾಗಿ ಘಾಸಿಗೊಂಡಿರುವ ಮಧು ಬುಧವಾರ (20ನೇ ತಾರೀಖು) ಮನೆಯಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿ, ಹೇಗೋ ಬದುಕುಳಿದಿದ್ದಾಳೆ. ಡಿವೈಎಸ್‌ಪಿ ತಡಕೋಡ, ಸಿಪಿಐ ತಡಕೋಡಗಳ ಪ್ರಭಾವದಿಂದ ಆರೋಪಿಗಳಿಗೆ ರಕ್ಷಣೆ ನೀಡಲಾಗುತ್ತಿದೆ. ತಡಕೋಡಗಳ ಸಂಬಂಧಿ ಸಯ್ಯದ್‌ಪಾಶಾನೇ ಜೈಲರ್ ಬೇರೆ! ತನಿಖೆ ನಿಧಾನವಾಗಿ ಸಾಗಿದೆ. ತಲೆತಿರುಕ ಪ್ರೇಮಿ ಆನಂದ ದೇಸಾಯಿ, ಖಾಕಿ ಸೊಕ್ಕಿನ ತಡಕೋಡಗಳಿಗೆ ಪಾಠ ಕಲಿಸದೇ ಹೋದರೆ ಮಧುಳಂತಹ ಹುಡುಗಿಯರು ಬಲಿಯಾಗುತ್ತಲೇ ಇರುತ್ತಾರೆ.


–ವರದಿಗಾರ


ಡಿ.ಎಡ್. ಕಾಲೇಜ್ ಕಾಮುಕ ಉಪನ್ಯಾಸಕರಿಗೆ ಪಾಠ!

ರಾಯಚೂರು

ಸಿಂಧನೂರು ಸರ್ಕಾರಿ ಡಿ.ಎಡ್. ಕಾಲೇಜಿನ 'ಇಂಟರ್ನಲ್' ಮ್ಯಾಟರು ಎಕ್ಸ್‌ಪೋಸ್ ಆಯ್ತು. ಇಬ್ಬರು ಕಾಮುಕ ಶಿಕ್ಷಕರ ಅಮಾನತ್ತಾಯ್ತು. ಕೆಲ ಡಿ.ಎಡ್. ವಿದ್ಯಾರ್ಥಿನಿಯರಿಗೆ ಇಂಟರ್ನಲ್ ಅಸೆಸ್‌ಮೆಂಟ್ (ಆಂತರಿಕ ಮೌಲ್ಯಮಾಪನ) ಅಂಕಗಳನ್ನು ಹೆಚ್ಚಿಗೆ ನೀಡುವ ಭರವಸೆ ನೀಡಿ, ಅವರನ್ನು ಪಿಕ್‌ನಿಕ್‌ಗೆ ಬನ್ನಿ ಎನ್ನುವುದು, ಸ್ವಲ್ಪ ಅಡ್ಜಸ್ಟ್ ಆಗಿ ಎನ್ನುವುದು ಮುಂತಾದ ಚಟುವಟಿಕೆಗಳಿಗೆ ಪ್ರೇರೆಪಿಸುತ್ತಿದ್ದ ವಿಜಯ್ ಆಶ್ರಿತ್, ಕೊಟ್ರಬಸಯ್ಯ ಎಂಬಿಬ್ಬರು ಉಪನ್ಯಾಸಕರ ವಿರುದ್ಧ ವಿದ್ಯಾರ್ಥಿಗಳೆಲ್ಲ ಸಿಡಿದು ನಿಂತಿದ್ದರಿಂದ ಎರಡೂ ಕ್ರಿಮಿಗಳು ಕಾಲೇಜಿಂದ ಅವಮಾನತ್ತುಗೊಂಡಿವೆ. ಕೊಟ್ರಬಸಯ್ಯ ತಪ್ಪು ಒಪ್ಪಿಕೊಂಡಿದ್ದಾನೆ. ಆದರೆ ವಿಜಯ್ ಆಶ್ರಿತ್ ಎಲ್ಲೋ ಓಡಿಹೋಗಿದ್ದಾನೆ.


ಆಶ್ರಿತ


ಕೊಟ್ರಬಸಯ್ಯ


ಬೀರಪ್ಪ ಶಂಭೋಜಿ

ಡಿ.ಎಡ್. ಪ್ರಥಮ ವರ್ಷದಲ್ಲಿ ಓದ್ತಾ ಇರೋ ಬೀದರಿನ ಬಬಿತಾ ಮತ್ತು ರಾಯಚೂರಿನ ನಾಗವೇಣಿಯರಿಗೆ ಕಡಿಮೆ ಆಂತರಿಕ ಅಂಕಗಳನ್ನು ನೀಡುವ ಮೂಲಕ ಈ ವರ್ಷ ತನ್ನ ಕರಾಮತ್ತನ್ನು ಆರಂಭಿಸಿದ ಸೈನ್ಸ್ ಮತ್ತು ಸೈಕಾಲಜಿ ಮಾಸ್ತರ ವಿಜಯ ಆಶ್ರಿತ್‌ಗೆ ಸಾಥಿಯಾಗಿ ಡವಡು ಬಣ್ಣದ ತುತ್ತೂರಿ ಚಿತ್ರಕಲಾ ಮಾಸ್ತರು ಕೊಟ್ರಬಸಯ್ಯ! ನಂತರ ಬಬಿತಾ, ನಾಗವೇಣಿಯರನ್ನು ಹೊತ್ತಿಲ್ಲದ ಹೊತ್ತಲ್ಲಿ ಕಾಲೇಜಿಗೆ ಕರೆಸಿಕೊಂಡು ಹೆಚ್ಚಿನ ಅಂಕ ನೀಡುವುದಾಗಿ ಪ್ರಸಾದಿಸಲು ಶುರು ಮಾಡಿದ್ದಾರೆ. ವಿದ್ಯಾರ್ಥಿನಿಯರು ಹೆದರಿ ತಪ್ಪಿ ದೂರವಾಗಿಳಲ್ಲ ಕುಳಿತರೆ ಕಾಮುಕಕ್ರಿಮಿ ಉಪನ್ಯಾಸಕರು ಫೋನ್ ಮೂಲಕ ಕಾಟ ಕೊಡಲಾರಂಭಿಸಿದೆ. ತೀರಾ ಭಂಡತನಕ್ಕಿಳಿದ ... ಬಬಿತಾ, ನಾಗವೇಣಿಯರ ... ಆವರ ಮೇಲೆ ಒತ್ತಡ ತರಲು ಯತ್ನಿಸಿದ್ದಾರೆ. ತಮ್ಮ ಜೊತೆ ಪರ್ಸನಲ್ ಪಿಕ್‌ನಿಕ್‌ಗೆ ಬರಬೇಕೆಂದು ಕರೆದಿದ್ದಾರೆ ಈ ಮಾನಗೇಡಿ ಉಪನ್ಯಾಸಕರು.

ಮಾನಸಿಕವಾಗಿ ಕುಗ್ಗಿ ಹೋದ ಇಬ್ಬರು ವಿದ್ಯಾರ್ಥಿನಿಯರು ಗಣಿತ ಶಿಕ್ಷಕಿ ಸುಬ್ಬುಲಕ್ಷ್ಮಿಯವರ ಮೊರೆ ಹೋಗಿ, ಫೋನಲ್ಲಿ ಪುಂಡ ಮಾಸ್ತರುಗಳಾಡುತ್ತಿದ್ದ ಪೋಲಿ ಮಾತುಗಳನ್ನು ಕೇಳಿಸಿದ್ದಾರೆ.

ಇಳಿಹೊತ್ತಿನಲ್ಲಿ ಆಶ್ರಿತ್, ಕೊಟ್ರಬಸಯ್ಯ ಕಾಲೇಜಲ್ಲಿ ಇರುತ್ತಿದ್ದುದು ಎಲ್ಲರಿಗೂ ತಿಳದದ್ದೇ. ಮೊನ್ನೆ ಇಬ್ಬರು ವಿದ್ಯಾರ್ಥಿನಿಯರು ಅಳುತ್ತಾ ಬರುತ್ತಿರುವುದನ್ನು ವಿದ್ಯಾರ್ಥಿಗಳು ನೋಡಿದ್ದಾರೆ. ಮರುದಿನ ಇಡೀ ಕಾಲೇಜೇ ಭಂಡ ಉಪನ್ಯಾಸಕರ ವಿರುದ್ಧ ಪ್ರತಿಭಟನೆಗಿಳಿದಿದೆ. ಕೊನೆಗೆ ಇಬ್ಬರ ಸಸ್ಪೆಂಡೂ ಆಗಿ ಕಾಮ ಪೀಡೆಗಳು ಕಾಲೇಜಿಂದ ಹೊರಬಿದ್ದಂತಾಗಿದೆ.

ಮೂಲತಃ ಹಾವೇರಿ ಜಿಲ್ಲೆಯ ವನಾದ ವಿಜಯ್ ಆಶ್ರಿತ್ ಈ ಹಿಂದೆ ಎಲ್ಲೆಲ್ಲಿ ಕೆಲಸ ಮಾಡಿದ್ದಾನೋ ಅಲ್ಲೆಲ್ಲ ಹೆಸರು ಕೆಡಿಸಿಕೊಂಡೇ ಬಂದಿದ್ದಾನೆ. ಈ ಕಾಲೇಜಿನ ಪ್ರಭಾರಿ ಅಧೀಕ್ಷಕನಾಗಿರುವ ಬೀರಪ್ಪ ಶಂಭೋಜಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ಮನೆಗೊಂದು ಕಾರ್ಯಕ್ರಮ ಎಂದು ಮನೆಮನೆ ತಿರುಗುತ್ತಾ ಪ್ರತಿದಿನ ಪತ್ರಿಕೆಗಳಲ್ಲಿ ಮಿಂಚಲು ಹಾತೊರೆಯುತ್ತಿರುತ್ತಾನೆ. ಅದಕ್ಕೆ ಪಾಠಗಳು ಸರಿಯಾಗಿ ನಡೆಯದೇ ಕಾಲೇಜು ಅಧ್ವಾನವಾಗಿದೆ. ಜಿಪಂನ ಕೆಡಿಪಿ ಸಭೆಯಲ್ಲೂ ಈ ಕುರಿತು ಚರ್ಚೆಯಾಗಿ ಜಿ.ಪಂ. ಸದಸ್ಯ ಸಿದ್ಧರಾಮ ನೀರಮಾನ್ವಿ ಮುಂತಾದವರು ಕಾಮುಕ ಶಿಕ್ಷಕರನ್ನು ವಜಾಗೊಳಿಸುವಲ್ಲಿ ಯಶಸ್ವಿ ಆಗಿದ್ದಾರೆ. ಇನ್ನಾದರೂ ಸಿಂಧನೂರಿನ ಸರ್ಕಾರಿ ಡಿ.ಎಡ್. ಕಾಲೇಜು ಸುಧಾರಿಸಲಿ.


–ಅಶೋಕ್ ನೀಮಕರ್

ಬೆಳಗಾವಿ

ಕಾಟವಾ ಸಿಮೆಂಟ್ ಕಾಟ...

ಕಾರ್ಮಿಕರ ಪರದಾಟ

ರಾಜ್ಯದಲ್ಲಿ ಐವತ್ತಕ್ಕೂ ಹೆಚ್ಚು ಸಿಮೆಂಟ್ ಫ್ಯಾಕ್ಟರಿಗಳು ಸರಕಾರ, ಬ್ಯಾಂಕಿನ ಸಾಲ ಎತ್ತಿ ಶೇರುದಾರರಿಗೆ ಟೋಪಿ ಹಾಕಿ ಬೀಗ ಜಡಿದಿವೆ. ಆದರೆ ಬೆಳಗಾವಿ ಜಿಲ್ಲೆಯ ಕಾಟವಾ ಸಿಮೆಂಟ್ ಫ್ಯಾಕ್ಟರಿ ಮಾತ್ರ ಬಂಪರ್ ಲಾಭದಲ್ಲೇ ಇದೆ!


ಮಠಪತಿ

ಬೆಳಗಾವಿ ಜಿಲ್ಲೆ ಗೋಕಾಕ್ ತಾಲ್ಲೂಕಿನ ಯಾದವಾಡದಲ್ಲಿರುವ ಈ ಸಿಮೆಂಟ್ ಕಾರ್ಖಾನೆ ಸರಕಾರದ ಕಣ್ಣಿಗೆ ಮಣ್ಣೆರಚುತ್ತಾ, ಕಾರ್ಮಿಕರನ್ನು ಗೋಳು ಹೊಯ್ದುಕೊಳ್ಳುತ್ತಾ ಕೊಬ್ಬುತ್ತಲೇ ಇದೆ.

ದಿನಕ್ಕೆ 300 ಟನ್ ಸಿಮೆಂಟ್ ಉತ್ಪಾದಿಸುತ್ತಿದ್ದರೂ ಸರಕಾರಕ್ಕೆ ತೋರಿಸುವ ಲೆಕ್ಕ 20 ಟನ್ ಮಾತ್ರ! ಇದು ಫ್ಯಾಕ್ಟರಿಯ ಒಡೆಯ ತಮ್ಮಣ್ಣಸಾ ಕಾಟವಾ 22 ವರ್ಷಗಳಿಂದ ಮಾಡುತ್ತಾ ಬಂದಿರುವ ಪರಮದ್ರೋಹ. ಆರ್.ಟಿ.ಓ.ಗಳಿಗಂತೂ 'ಪಂಚಾಮೃತ' ಸರಿಯಾಗೇ ತಲುಪುತ್ತಿದೆ. ಇಳಕಲ್‌ನಲ್ಲಿ ಸೀರೆ ವ್ಯಾಪಾರ ಮಾಡುತ್ತಿದ್ದ ತಮ್ಮಣ್ಣಸಾ ಮುಂಬೈಗೆ ಎಗರಿ ಹೋದ.... ತಿರುಗಿ ಬರುವಾಗ ಅದೆಷ್ಟೋ ಕೋಟಿ ತಂದ. ಸಹೋದರ ಗೋಪಾಲನ ಸಲಹೆ ಮೇರೆಗೆ ಸಿಮೆಂಟ್ ಫ್ಯಾಕ್ಟರಿ ಎಬ್ಬಿಸಿದ. ಮಹಾರಾಷ್ಟ್ರದಲ್ಲಿ ಗೋಪಾಲ ನಿಗೂಢವಾಗಿ ಸತ್ತು ಹೋದ. ಈಗ ತಮ್ಮಣ್ಣಸಾನ ಸುಪರ್ದಿಯಲ್ಲಿ ಕಾರ್ಮಿಕರಿಗೆ ಇಲ್ಲದ ತೊಂದರೆ ನೀಡಲಾಗುತ್ತಿದೆ. ಇಂಟರ್‌ವ್ಯೂ ಇಲ್ಲ, ನೇಮಕಾತಿ ಆದೇಶವಿಲ್ಲ, ಮಾಸ್ಟರ್ ರೋಲ್‌ನಲ್ಲಿ 20 ಕಾರ್ಮಿಕರ ಹೆಸರಷ್ಟೇ ದಾಖಲಾಗಿದೆ. ಆದರೆ ನಿಜವಾಗಿ 550 ರಷ್ಟು ಕಾರ್ಮಿಕರಿದ್ದಾರೆ. ಇಂತಹ ಕಂತ್ರಿ ಕೆಲಸ ಮಾಡಲು ನಿಂಗಪ್ಪ ಮಠಪತಿ ಎಂಬ ಮ್ಯಾನೇಜರ್, ಡಿ.ಪಿ. ಜಾಂಬೈ ಎಂಬ ಲೇಬರ್ ಕಂಟ್ರಾಕ್ಟರ್‌ಗಳಿದ್ದಾರೆ. ಲೇಬರ್ ಕಮಿಷನರ್ ಎನ್. ನಂಜುಂಡಪ್ಪ, ಲೇಬರ್ ಆಫೀಸರ್ ಮಹಮ್ಮದ್ ಶರೀಫ್‌ಗಳಿಗೆ ಮಂಥ್ಲಿ ಬಂದರೆ ಸಾಕು, ಕಾರ್ಮಿಕರು ಏನಾದರೇನು?


ಡಿ.ಬಿ. ಜಾಂಬೈ

ಕಾರ್ಮಿಕರಿಗೆ ತಿಂಗಳಿಗೆ 2,500 ಕೊಡುತ್ತಾರೆ. ಓ.ಟಿ.ಗೆ ನೋ ಸ್ಯಾಲರಿ! ಹೆಲ್ಮೆಟ್, ಶೂ ಇತ್ಯಾದಿ ಏನೂ ಇಲ್ಲ. ಎ.ಸಿ. ಗೊಡಚಿ, ಎಮ್. ಆರ್ ತಿಡಗೊಂಡ, ಎ.ಎಚ್. ಮೇತ್ರಿ ಎಂಬ ಕಾರ್ಮಿಕರು ಸೇರಿದಂತೆ ನೂರಾರು ಜನ ಕೆಲಸ ಮಾಡುವಾಗ ಅಪಘಾತ ಸಂಭವಿಸಿ ಅಂಗವಿಕಲರಾಗಿದ್ದಾರೆ. ಜೆ.ಸಿ.ಬಿ. ಡ್ರೈವರ್ ಭೋಜನಾಸಾ ಸಿಂಗ್ರಿಗೆ ಅಪಘಾತವಾದರೆ, ಕ್ರೂರಿ ಮ್ಯಾನೇಜರ್ ನಿಂಗಪ್ಪ ಮಠಪತಿ ರಾತ್ರೋ ರಾತ್ರಿ ಆತನನ್ನು ಗೇಟ್‌ನಿಂದ ಆಚೆ ಎಸೆದಿದ್ದಾನೆ.

ಕಾಟವಾ ಸಿಮೆಂಟ್ ಕ್ವಾಲಿಟಿಯೂ ಕಳಪೆಯೇ! ಸಿಮೆಂಟ್ ತಯಾರಿಸಲು ಬಳಸುವ ಲೈಮ್‌ಸ್ಟೋನ್‌ನಲ್ಲಿ ಸಿಲಿಕಾನ್ ಪ್ರಮಾಣ ಕಡಿಮೆ. ಸಿಮೆಂಟ್ ತಯಾರಿಕೆಗೆ ಈ ಕಳ್ಳರು ಎರೆಮಣ್ಣನ್ನೂ ಬಳಸುತ್ತಿದ್ದಾರೆ. ಅದಕ್ಕಾಗಿ ರಾಮದುರ್ಗ ತಾಲ್ಲೂಕು ಬುದ್ನಿಯಲ್ಲಿ ಎರೆಹೊಲಗಳನ್ನು ಖರೀದಿಸಿದ್ದಾರೆ. ಎಲ್.ಡಿ. ಗಲಗಲಿ ಎನ್ನುವ ಟೆಕ್ನಿಷಿಯನ್ ಅದ್ಹೇಗೋ ಒಳ್ಳೆ ಕ್ವಾಲಿಟಿ ರಿಪೋರ್ಟ್ ತಂದೇಬಿಡುತ್ತಾನೆ.


1988ರಲ್ಲಿ ಕಾರ್ಮಿಕರು ಪ್ರತಿಭಟಿಸಿದಾಗ 154 ಜನರ ಮೇಲೆ ಸುಳ್ಳು ಕೇಸ್ ಹಾಕಲಾಯ್ತು. 10 ವರ್ಷ ಕೋರ್ಟ್ ವಾದ ನಡೆದು, ಆರು ಕಾರ್ಮಿಕರಿಗೆ ಮತ್ತೆ ಉದ್ಯೋಗಕ್ಕೆ ತೆಗೆದುಕೊಳ್ಳಲು ಆದೇಶವಾಯ್ತು. ಆದರೆ ಮ್ಯಾನೇಜರ್ ನಿಂಗಪ್ಪ ಮಠಪತಿ ಅವರಿಗೆ ಜೀವ ಬೆದರಿಕೆ ಹಾಕಿ ಕೆಲಸಕ್ಕೆ ಬರದಂತೆ ಮಾಡಿದ. ಈ ಫ್ಯಾಕ್ಟರಿಯಲ್ಲಿ ಕಾರ್ಮಿಕ ಸಂಘಟನೆ ಮಾಡಲು ಅವಕಾಶವೇ ಇಲ್ಲ!

ಮಾಲೀಕ ತಮ್ಮಣ್ಣಸಾ ಕಾಟವಾ ಮಾತ್ರ ಅಮೆರಿಕದಲ್ಲಿ ಮಜಾ ಟೂರ್ ಮಾಡುತ್ತಲೇ ಇರುತ್ತಾನೆ!

ಚಿಕ್ಕಿ ಸಂಸದ ಅಂಗಡಿ, ಚಿಕ್ಕಿ ಸಚಿವ ಶಶಿಕಾಂತ ನಾಯ್ಕ, ಸಣ್ಣ ಕೈಗಾರಿಕಾ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು, ಕಾರ್ಮಿಕ ಸಚಿವ ಇಕ್ಬಾಲ್ ಅನ್ಸಾರಿಗಳು ಕಾಟವಾನ ಕಾಟ ತಡೆದು, ಕಾರ್ಮಿಕರು ಉಸಿರಾಡುವಂತೆ ಮಾಡಬಲ್ಲರೆ!

–ಮೇಘರಾಜ್

ಭೂಮಿತಾಯಿ ಹಾಗೂ ಬಡವರ ಪರವಾದ ವಕಾಲತು!



ಲೇಖಕರು: ಟಿ.ಎಸ್.ವಿವೇಕಾನಂದ
ಇಂದ್ರಪ್ರಸ್ಥ ಪ್ರಕಾಶನ
ಬೆಂಗಳೂರು-19
ಪುಟ-260+XVI ಬೆಲೆ: 180/-

[illegible] ಘನೆಯ ವಿಷಯ. ಪರಿಸರ ಸಂಬಂಧಿ ವಿಷಯಗಳಲ್ಲಿ ಕನ್ನಡದಲ್ಲಿ ಗಂಭೀರ ಬರಹಗಳು ತೀರಾ ಕಡಿಮೆ. ಅದರಲ್ಲೂ ಪರಿಸರವೆಂಬ ಅತ್ಯಂತ ಗಹನವಾದ ವಿಷಯವನ್ನು 'ಗಿಡನೆಡಿ ಮತ್ತು ಪರಿಸರ ಚೊಕ್ಕಟವಾಗಿಡಿ' ಎಂಬ ಘೋಷಣೆಗಳಿಗೋ, ಇಲ್ಲವೇ ಬಸ್‌ಗಳ ಮೇಲಿರುವ 'ಉಳಿಸಬೇಕು ಪರಿಸರ, ಅದಕ್ಕೆ ಬನ್ನಿ ಸರಸರ' ಎಂಬಂಥ ಹಾಸ್ಯಾಸ್ಪದ ಪ್ರಾಸಗಳಿಗೋ ಇಳಿಸಿಬಿಟ್ಟರುವಾಗ ಮನುಷ್ಯರ ಹಾಗೂ ಭೂತಾಯಿಯ ಉಳಿವಿಗೇ ಸಂಚಕಾರ ತರುತ್ತಿರುವಂತ ಪರಿಸರ ಸಂಬಂಧೀ ವಿಷಯಗಳನ್ನು ವಿವೇಕಾನಂದರು ಮನೋಜ್ಞವಾಗಿ ವಿವರಿಸುತ್ತಾರೆ.

ಕಳೆದ ಮೂರು ವರ್ಷಗಳಲ್ಲಿ ಅವರು ವಿವಿಧ ಪತ್ರಿಕೆಗಳಿಗೆ ಅದರಲ್ಲೂ "ವಾರ್ತಾ ಭಾರತಿ" ಪತ್ರಿಕೆಗೆ ಬರೆದ ವಾರದ ಅಂಕಣದ 44 ಲೇಖನಗಳ ಸಂಗ್ರಹವೇ 'ಭೂಮಿಗೀತ'ವಾಗಿದೆ. ಈ ಎಲ್ಲಾ ಲೇಖನಗಳು ವಾರದ ಅಂಕಣಗಳಾಗಿರುವುದರಿಂದ ಒಂದೇ ವಿಷಯವನ್ನು ವಿವಿಧ ಕೋನಗಳಿಂದ ಪರಿಶೀಲಿಸಿ ಪ್ರತಿಪಾದಿಸುವ ವಕಾಲತ್ತಿನ ದನಿ ಎಲ್ಲಾ ಬರಹಗಳಲ್ಲಿದೆ. ಪ್ರತಿ ಬರಹಗಳಿಗೆ ಮುನ್ನ ಅಲ್ಲಮ, ಬಸವ ಹಾಗೂ ಇನ್ನಿತರರ ವಚನಗಳ ತಾತ್ವಿಕ ಮುನ್ನುಡಿಯೂ ಇರುವುದು ಲೇಖನಗಳಿಗೆ ಒಂದು ಬಗೆಯ ಆಪ್ತತೆಯನ್ನೂ ತಂದುಕೊಟ್ಟಿದೆ. ಬರಹದ ಶೈಲಿಯಲ್ಲೂ ಹಲವು ನಿಜಜೀವನದ ಉದಾಹರಣೆಗಳು ಮತ್ತು ಹರಿತವಾದ ವ್ಯಂಗ್ಯಗಳು ಬಳಕೆಯಾಗಿರುವುದರಿಂದ ಪರಿಸರಕ್ಕೆ ಸಂಬಂಧಪಟ್ಟ ಕ್ಲಿಷ್ಟಕರ ವಿಷಯವನ್ನೂ ನಮ್ಮ ಬದುಕಿನ ಸಂದರ್ಭದಲ್ಲಿಟ್ಟು ಅರ್ಥ ಮಾಡಿಕೊಳ್ಳುವಂತೆ ಮಾಡುತ್ತದೆ.

ಪರಿಸರಕ್ಕೆ ಸಂಬಂಧಪಟ್ಟಂತೆ ವಿವೇಕಾನಂದರ ಧೋರಣೆಯನ್ನು "ಸಾಮಾಜಿಕ ನ್ಯಾಯದ ಹಸಿರು" ಎಂದು ಕರೆಯಬಹುದು. ಸಾಮಾನ್ಯವಾಗಿ ಪರಿಸರದ ಪ್ರಶ್ನೆ ಬಂದಾಗ ಮನುಷ್ಯ ಕಾಡನ್ನು ನಾಶ ಮಾಡುತ್ತಿದ್ದಾನೆ ಎಂತಲೋ ಮನುಷ್ಯನಿಂದ ಪರಿಸರ ನಾಶವಾಗುತ್ತಿದೆ ಎಂತಲೋ ವಾದಿಸುವುದು ರೂಢಿ. ಅಂಥ ಪರಿಸರವಾದವನ್ನು ವಿವೇಕಾನಂದ 'ಕಾನ್ವೆಂಟ್ ಪರಿಸರವಾದ' ಎಂದು ಲೇವಡಿ ಮಾಡುತ್ತಾರೆ. ಅದೇ ರೀತಿ ಬಡತನವೇ ಪರಿಸರ ಮಾಲಿನ್ಯದ ಮೂಲ ಎಂಬ ಗಾಂಧೀವಾದಿ ಅಥವಾ ಉದಾರವಾದಿ ಅನುಕಂಪಶೀಲ ತಿಳವಳಿಕೆಯ ಸಾರಾಂಶವಾದ 'ಬಡವರು ತಮ್ಮ ಬದುಕಿಗಾಗಿ ಕಾಡು ಕಡಿಯುತ್ತಾರೆ..ಆದ್ದರಿಂದ ಪರಿಸರ ನಾಶವಾಗುತ್ತದೆ' ಎಂಬ ಬಲಿಪಶುಗಳನ್ನೇ ದೋಷಿಗಳನ್ನಾಗಿಸುವ ವಾದಗಳನ್ನು ಅವರು ಅಪ್ರಜ್ಞಾಪೂರ್ವಕವಾಗಿಯೇ ಟೀಕಿಸುತ್ತಾರೆ. ಆದರೆ ಅದು ಗಾಂಧಿ ಪ್ರಣೀತ ಪರಿಸರವಾದದ ಅಪ್ರಜ್ಞಾಪೂರ್ವಕ ವಿಮರ್ಶೆಯಾಗುವುದಿಲ್ಲ ಎಂಬುದೇ ಭಾಗಶಃ ಈ ಪುಸ್ತಕದ ಪ್ರಧಾನ ಮಿತಿಗಳಲ್ಲಿ ಒಂದು..!

ವಿವೇಕಾನಂದರು ಗಾಂಧಿ ಮತ್ತು ನೆಹರೂರವರನ್ನು ತಮ್ಮ ಬರಹಗಳಲ್ಲಿ ಮತ್ತು ತಮ್ಮ ಪರಿಸರ ದರ್ಶನದಲ್ಲಿ ಒಂದು ರೂಪಕವಾಗಿ ಬಳಸಿಕೊಳ್ಳುತ್ತಾರೆ. ಗಾಂಧಿ ಅವರಿಗೆ ಪರಿಸರ ಸ್ನೇಹಿ ಜೀವನದ ರೂಪಕವಾದರೆ ನೆಹರೂ ಆಧುನಿಕ ಕೈಗಾರಿಕಾವಾದಿ ಅರ್ಥಾತ್ ಪ್ರಮುಖವಾಗಿ ಮಾಲಿನ್ಯದ ಕಾರಣಗಳ ರೂಪಕವಾಗುತ್ತಾರೆ. ವಾಸ್ತವವೆಂದರೆ ವಿವೇಕಾನಂದರು ನಿರ್ವಹಿಸಲೆತ್ನಿಸುವ ಪರಿಸರ ಸಮಸ್ಯೆಗೆ ಕೇವಲ ನೆಹರೂತನಗಳಲ್ಲಿ ಸಂಪೂರ್ಣ ಕಾರಣಗಳಿಲ್ಲ. ಅದೇರೀತಿ ಈ ಎಲ್ಲಾ ಸಮಸ್ಯೆಗಳಿಗೆ ಗಾಂಧಿ ರೂಪಕದಲ್ಲಿರುವ ಪರಿಹಾರಗಳು ಸಮಸ್ಯೆಯನ್ನು ನಿವಾರಿಸುವುದಿಲ್ಲ. ಹಾಗೆ ಮಾಡಿದಲ್ಲಿ ಸಮಸ್ಯೆಯನ್ನು ಬಹಳ ಸರಳೀಕರಿಸಿದಂತಾಗುತ್ತದೆ. ಭಾರತದ ಮತ್ತು ಬಹಳಷ್ಟು ಪಾಶ್ಚಿಮಾತ್ಯ ವಿಶ್ಲೇಷಕರು ಈ ಸರಳೀಕರಣದಿಂದ ಬಳಲುತ್ತಾರೆ. ವಿವೇಕಾನಂದರಿಗೆ ಈ ಸರಳೀಕರಣದ ಅಪಾಯದ ಅರಿವು ಪ್ರಜ್ಞಾ ಮಟ್ಟದಲ್ಲಿದ್ದರೂ ಅದು ವಿಶ್ಲೇಷಣಾ ಮಟ್ಟಕ್ಕೆ ಏರದಿರುವುದು ಪುಸ್ತಕದ ಕೊರತೆಗಳಲ್ಲಿ ಒಂದಾಗಿದೆ.



ವಿವೇಕಾನಂದರು ತಮ್ಮ ಬರಹಗಳುದ್ದಕ್ಕೂ ಬಡಮನುಷ್ಯನನ್ನು ಹೊರತುಪಡಿಸಿ ಪರಿಸರವನ್ನು ನೋಡುವ ವಿಧಾನವನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿತ್ತಾರೆ. ಆದೇರೀತಿ ಇಂದು ದೇಶದ ಕುಲೀನ ಮಂದಿ ಮತ್ತು ಅಮೆರಿಕ ಇನ್ನಿತ್ಯಾದಿ ಪಾಶ್ಚಿಮಾತ್ಯ ದೇಶಗಳಲ್ಲಿರುವ ಜನರ ಬದುಕಿನ ವಿಧಾನ ಹೇಗೆ ವಿಶ್ವದ ಪರಿಸರ ಹಾನಿಗೆ ನೇರವಾಗಿ ಕಾರಣವಾಗಿದೆ ಎಂದು ಅಂಕಿಅಂಶ ಮತ್ತು ಉದಾಹರಣೆಗಳ ಸಮೇತ ವಿವರಿಸುತ್ತಾರೆ. ಆ ಅರ್ಥದಲ್ಲಿ ಅವರು ಗ್ರೀನ್ ಕೋರ್ಟಿನಲ್ಲಿ ಭೂತಾಯಿ ಮತ್ತು ಬಡ ಜನತೆಯ ಪರವಾಗಿ ವಾದಿಸುವ ಹಸಿರು ವಕೀಲರೆ ಆಗಿಬಿಡುತ್ತಾರೆ.




ಸರ್ಕಾರ ಹಾಗು ಕುಲೀನ ಸಮಾಜದ ಆತ್ಮವಂ[…] ಪರಿಸರವಾದದ ಬಗ್ಗೆ ಮತ್ತು ಸಾರಾಂಶದ[…] ಪರಿಸರವಾದದ ಪ್ರಶ್ನೆ ಪ್ರಜಾತಂತ್ರದ ಮತ್ತು ಸಂಪನ್ಮೂಲ[…] ಸಮಾನ ಹಂಚಿಕೆಯ ಪ್ರಶ್ನೆಯೂ ಆಗಿದೆ ಎಂಬ […] ಅವರು ನರ್ಮದಾ ಚಳವಳಿಯ ಬಗೆ[…] ಲೇಖನದಲ್ಲಿ, 'ಮಣ್ಣೆ ನೀ ಮುನಿಯು[…]ದಿಲ್ಲವೇಕೆ' ಎಂಬ ಲೇಖನದಲ್ಲಿ (ಅಥ[…] ಹಾಗೆ ನೋಡಿದರೆ ಪ್ರತಿ ಲೇಖನದ[…] ನಿರೂಪಿಸುತ್ತಾರೆ. ಆ ಅರ್ಥದಲ್ಲಿ ಪರಿಸರ[…] ತಾತ್ವಿಕತೆಯಲ್ಲಿ ಸಾಮಾಜಿಕ ನ್ಯಾಯ[…] ನೆಲೆಯನ್ನೂ ಬೆರೆಸಿರುವ ಅಪರೂಪ[…] ಕನ್ನಡ ಕೃತಿಯಾಗಿ ಈ ಪುಸ್ತಕ ಕನ್ನಡ[…] ದೊರೆತಿದೆ.

ಇಷ್ಟೆಲ್ಲಾ ಸಕಾರಾತ್ಮಕ ಅಂಶಗಳಿರುವ ಈ ಪು[…] ಆ ರೀತಿಯಲ್ಲಿ ಪರಿಸರದ ಬಗ್ಗೆ ಮತ್ತು ಸಾಮಾ[…] ಬದಲಾವಣೆಯ ಬಗ್ಗೆ ಕಾಳಜಿ ಇರುವ ಎಲ್ಲಾ ಆಸ[…] ಕಡ್ಡಾಯ ಓದು. ಇಷ್ಟೆಲ್ಲಾ ಹೇಳಿದ ಮೇಲೂ […] ಪುಸ್ತಕದಲ್ಲಿರುವ ಅಥವಾ ವಿವೇಕಾನಂದರ ಪರಿ[…] ದೃಷ್ಟಿಯಲ್ಲಿರುವ ಕೆಲವು ಮಿತಿಗಳ ಬಗ್ಗೆಯೂ ಪ್ರಸ[…] ಮಾಡಲೇಬೇಕು. ಮೊದಲನೆಯದಾಗಿ ಕನ್ನಡದ ಬಹುಪಾಲು ಚಿಂತಕರು ಮತ್ತು ಬರಹಗಾರರು ಎದುರಿಸುವ, ಪೂರ್ವ ಮತ್ತು ಪಶ್ಚಿಮವನ್ನು ಏಕಶಿಲಾ ಮಾದರಿಯನ್ನಾಗಿ ಗ್ರಹಿಸುವ ಕೊರತೆ ವಿವೇಕಾನಂದರನ್ನೂ ಬಾಧಿಸುತ್ತ[…] ಪಶ್ಚಿಮದಲ್ಲಿನ ಸಾಮಾನ್ಯ ಜನತೆಯನ್ನು ಅಲ್ಲಿನ ಶ್ರೀಮಂ[…] ವರ್ಗಗಳೊಡನೆ ಸಮೀಕರಿಸುವ[…]

ಸ್ವಾಭಿಮಾನಿ ದಲಿತರ ಲೇವಡಿಯಿದು

ನಮ್ಮ ಸೆಪ್ಟೆಂಬರ್ 20ರ ಸಂಚಿಕೆಯಲ್ಲಿ ಪ್ರಕಟಿಸಿದ ಕುಮಾರಸ್ವಾಮಿಯ 'ದಲಿತೋದ್ಧಾರ ನಾಟಕ'ದ ಬಗ್ಗೆ ನಾಡಿನ ವಿವಿಧ ಮೂಲೆಗಳಿಂದ ಯಥೇಚ್ಛ ಪತ್ರಗಳು ಬಂದಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ನೀಡುತ್ತಿದ್ದೇವೆ.



'ದಲಿತೋದ್ಧಾರ ಪ್ರಹಸನ' ಎಂಬ ಶೀರ್ಷಿಕೆಯಲ್ಲಿ ಕುಮಾರಸ್ವಾಮಿಯವರ ದಲಿತ ಕೇರಿ ಪ್ರಹಸನ ಕುರಿತು ತಮ್ಮ ಪತ್ರಿಕೆಯಲ್ಲಿ ಬಂದ ವಿವಿಧ ಚಿಂತಕರುಗಳ ಅಭಿಪ್ರಾಯಗಳನ್ನು ಓದಿ ಇದನ್ನು ಬರೆಯುತ್ತಿದ್ದೇನೆ.

ಅನಿರೀಕ್ಷಿತವಾಗಿ ಬ್ರಿಟಿಷರಿಂದಾಗಿ ಸರ್ವರಿಗೂ ವಿದ್ಯೆಯ ಅವಕಾಶ ಲಭಿಸಿ, ಸ್ವಾತಂತ್ರ್ಯಾನಂತರ ಅಂಬೇಡ್ಕರ್ ರಂತಹವರ ಮುಂದಾಲೋಚನೆಯ ಕಾರಣದಿಂದ ಮೀಸಲಾತಿ ಮೊದಲಾದ ಸವಲತ್ತುಗಳನ್ನು ಪಡೆದಂತಹ ಅದೆಷ್ಟೋ ದಲಿತರು ದೇಶಾದ್ಯಂತ ಉನ್ನತ ವಿದ್ಯಾಭ್ಯಾಸವನ್ನು ಹೊಂದಿ, ಉನ್ನತ ಹುದ್ದೆಗಳಲ್ಲಿ ಎಲ್ಲರಿಗೂ ಸಮಾನರಾಗಿ, ಸ್ವಾಭಿಮಾನಿಗಳಾಗಿ ಬದುಕುತ್ತಿದ್ದಾರೆ.

ಆದರೆ ಇಂದಿಗೂ ಕೂಡ ಅಸ್ಪೃಶ್ಯತೆ ಆಚರಣೆಯಲ್ಲಿರುವುದು ಎಷ್ಟು ಸತ್ಯವೋ, ಹಾಗೆ ಅನೇಕ ಸವರ್ಣೀಯರಿಗೆ ಸಮಾನ ಪ್ರತಿಸ್ಪರ್ಧಿಗಳಾಗಿ ಸ್ವಾಭಿಮಾನದಿಂದ ಬದುಕು ನಡೆಸುತ್ತ ಉಳಿದವರಿಗೆ ಪ್ರೇರಕ ಹಾಗೂ ಮಾದರಿಯಾಗಿ ಬದುಕುತ್ತಿರುವುದೂ ಅಷ್ಟೇ ಸತ್ಯ.

ಅಸ್ಪೃಶ್ಯತೆಯ ಹಳೆಯ ಕಹಿ ನೆನಪುಗಳನ್ನು ಮರೆಯಬಯಸುತ್ತಾ, ಹೊಸ ಸ್ವಾಭಿಮಾನಿ ಬದುಕು ನಡೆಸುತ್ತಿರುವ ದಲಿತರಿಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ಅಸ್ಪೃಶ್ಯತೆಯನ್ನು ನೆನಪಿಸಿ, ಅದಕ್ಕೆ ಮರುಜೀವ ಕೊಡುವಂತೆ ಮಾಡಿದ್ದು ದಲಿತರನ್ನು ಲೇವಡಿ ಮಾಡಿದಂತಿದೆ.

ಇದು ಹೇಗೆಂದರೆ, ಬ್ರಾಹ್ಮಣನೊಬ್ಬ ಶೂದ್ರ ವರ್ಗಕ್ಕೆ ಸೇರಿರುವ ಕುಮಾರಸ್ವಾಮಿಯ ಮನೆಗೆ 'ನಾನು ಸಮಾನತೆ ಸಾರುವ ಸಲುವಾಗಿ ಒಂದು ದಿನ ಇದ್ದು ಬರುವೆ' ಎಂದು ಹೇಳಿಕೆ ನೀಡಿ ಆ ರೀತಿ ನಡೆದುಕೊಂಡು ಪ್ರಚಾರಗಿಟ್ಟಿಸಿಕೊಂಡರೆ ಏನು ಆಗುವುದೋ ಇಲ್ಲಿ ಆಗಿದ್ದೂ ಅಷ್ಟೆಯೇ. ಕುಮಾರಸ್ವಾಮಿ 'ಮೇಲೆ' ಎಂದು ತೋರಿಸಿಕೊಳ್ಳಲು ಹೋದಂತೆ ಭೇಟಿಗೆ ಒಪ್ಪಿದ ದಲಿತ ತನ್ನಷ್ಟಕ್ಕೆ 'ಕೆಳಗೆ' ಇಳಿಯುತ್ತಾ, ಕೀಳಾಗುತ್ತಾ ಹೋಗುತ್ತಾನೆ.

ಈ ಕುರಿತು ಪತ್ರಿಕೆಯಲ್ಲಿ ದೇವನೂರರು ಹೇಳಿದಂತೆ ಇದೊಂದು ದಲಿತರಿಗೆ ಅಪಮಾನವೇ ವಿನಃ ಸಮಾಜ ಸುಧಾರಣೆ ಎಂಬ ಮಾತು ದೊಡ್ಡ ಭ್ರಮೆಯೆಂಬುದು ಅಕ್ಷರಶಃ ಸತ್ಯ.


ಹೀಗೆ ದಲಿತರನ್ನು ಅವಮಾನಿಸಿದ ಮುಖ್ಯಮಂತ್ರಿಯವರಿಗೆ ದಲಿತರ ಪರವಾಗಿ ದಲಿತ ಸಂಘರ್ಷ ಸಮಿತಿಯವರು ಸನ್ಮಾನಿಸಿದ್ದು ತುಂಬಾ ಅವಸರವೆಂಬಂತೆ ತೋರಿದೆ. ಅದೇ ರೀತಿ ಇದೊಂದು ಕ್ರಾಂತಿಕಾರಕ ಹೆಜ್ಜೆ ಎಂದು ಹಾಡಿ ಹೊಗಳಿದ "ಇಕ್ರಲಾ, ಒದಿರ್ಲಾ"ದ ಮಾಜಿ ಕವಿ ಸಿದ್ಧಲಿಂಗಯ್ಯನವರ ಸ್ವಾಮಿ ಭಕ್ತಿ ನೋಡಿ ಛೇಪ್ ಎನಿಸಿತು. ದುಡ್ಡು, ಅಧಿಕಾರ ಕೊಟ್ಟು ಎಂಥವರನ್ನೂ ಮಣಿಸಬಹುದು, ಮೃದುವಾಗಿಸಬಹುದೆಂಬುದಕ್ಕೆ ಸಿದ್ಧಲಿಂಗಯ್ಯನವರು ಉದಾಹರಣೆಯಾಗಬಾರದಿತ್ತು.

- ರವಿ ಪುತ್ತೂರ.

ಕೋಮುವಾದಿಗಳ ಕಪಿಮುಷ್ಠಿಯಿಂದ ನಾಡಿನ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ವರ್ಗ ಮತ್ತು ಮಹಿಳೆಯರನ್ನು ರಕ್ಷಿಸಬೇಕಾಗಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಈ ವರ್ಗದ ಕೆಲವು ಸಂಘಟನೆಗಳು ಅಧಿಕಾರದ ಆಸೆಗಾಗಿ ತಮ್ಮ ಹೋರಾಟದ ತತ್ವ-ಸಿದ್ಧಾಂತಗಳನ್ನು ಹರಾಜಿಗಿಡುತ್ತಿವೆ. ಈ ಸಂದರ್ಭದಲ್ಲಿ ಗೌರಿಯವರ 'ಲಂಕೇಶ್' ವಾರಪತ್ರಿಕೆ ಈ ನಾಡಿನ ಶೋಷಿತ ಜನಾಂಗವನ್ನು ಎಚ್ಚರಿಸುವ ಮೂಲಕ ಲಂಕೇಶ್‌ರವರು ನಡೆದು ಬಂದ ದಾರಿಯಲ್ಲಿ ದಿಟ್ಟ ಹೆಜ್ಜೆಯನ್ನು ಇಡುತ್ತಿರುವುದು ಸ್ವಾಗತಾರ್ಹ.

'ಗಾಂಧೀಜಿಯ ಶಿಷ್ಯ' ಕುಮಾರಸ್ವಾಮಿಯವರು ದಡದಕಲ್ಲಹಳ್ಳಿಯ ದಲಿತರ ಮನೆಯಲ್ಲಿ ಉಳಿದುಕೊಂಡಾಗಲೂ ಅಲ್ಲಿನ ಅಸ್ಪೃಶ್ಯರ ಮನೆಯ ಅನ್ನ, ನೀರು ಮುಟ್ಟದೇ ಬ್ರಾಹ್ಮಣರು ಸಿದ್ಧಪಡಿಸಿದ ಅಡುಗೆಯನ್ನು ಊಟ ಮಾಡಿ ಇಡೀ ದಲಿತ ಸಮುದಾಯಕ್ಕೆ ಅವಮಾನ ಮಾಡಿದ್ದಾರೆ. ಇದರ ಬೆನ್ನಲ್ಲೇ ಡಾ.ಸಿದ್ಧಲಿಂಗಯ್ಯನವರು ತಾವು ಪ್ರತಿಪಾದಿಸಿಕೊಂಡು ಬಂದ ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರ ತತ್ವ-ಸಿದ್ಧಾಂತಗಳನ್ನೂ ಗಾಳಿಗೆ ತೂರಿ 'ಗೋಲ್‌ಮಾಲ್ ಗೌಡ' ಮ[…] ಕುಟುಂಬದವರ ಋಣವನ್ನು ತೀರಿಸುತ್ತಿದ್ದಾರೆ. ಇ[…] ಕೋಮುವಾದದ ಕೊಳಕು ಮನಸ್ಸುಗಳನ್ನು ಬಣ್ಣ[…] ಬಯಲು ಮಾಡಿದ 'ಲಂಕೇಶ್'ಗೆ ಧನ್ಯವಾದಗಳು.

- ಸಿದ್ಧರಾಜ್, ಆಟೋ ಚಾ[…]
ಬನ್ನೇರುಘ[…]



ಮುಖ್ಯಮಂತ್ರಿಗಳ 'ದಲಿತೋದ್ಧಾರ ಪ್ರಹಸನ[…] ನಮ್ಮ ದಲಿತ ಚಿಂತಕರಿಂದಲೇ ಸರಿಯಾಗಿ ಥೀಮ[…] ಮಾಡಿಸಿದ್ದೀರಿ. ನಿಮಗೆ ಅನಂತ ಅಭಿನಂದನೆಗ[…] ಆದರೆ, ಸೂಕ್ಷ್ಮ ಸಂವೇದನೆಗಳೊಂದಿಗೆ ಶೋಷಿ[…] ಧ್ವನಿಯಾಗಿದ್ದ ಡಾ.ಸಿದ್ಧಲಿಂಗಸ್ವಾಮಿಗಳಿಗೆ (ಸಿದ್ಧಲಿಂಗಯ[…]) ಏನಾಗಿದೆ? ಅಪಮಾನಿತರನ್ನು ಎಚ್ಚರಗೊಳಿ[…] ಶೋಷಕ ಸಮಾಜವನ್ನು ಅಚ್ಚರಿಗೊಳಿಸಿದ್ದ ದಲಿ[…] ದಾರ್ಶನಿಕ ಇವರೇನಾ?

ದಲಿತರ ಮನೆಯಲ್ಲಿ ಹೊಸ ಕುರ್ಲಾನ್ ಬೆ[…] ಮೇಲೆ ಮಲಗಿ; ಸವರ್ಣೀಯರ ಬಚ್ಚಲಲ್ಲಿ ಫ[…] ಆಗಿ, ದೇವಾಲಯದಲ್ಲಿ ಶಿವದರ್ಶನ ಮಾಡಿ ಪ[…]ವಾಗುವುದು ಕ್ರಾಂತಿಕಾರಕ ಕ್ರಮವೇ? "ಇಕ್ಕರ್ಲ ಒದಿ[…] ನಾಟಕ ಆಡ್ತಾವ್ರೆ" ಅಂತ ಕೂಗಾಡ್ತ ಇದ್ದವ್ರು […] ಪರಿ ಬದಲಾದದ್ದು ಏಕೆ? ಪ್ರಾಧಿಕಾರದ ಫನ[…] ತಕ್ಕುದಾದ ಮಾತೇ ಆಡಿದ್ದಾರೆ! ಇಂಥ ಚಿಂತನೆಗ[…] ಖಂಡಿತ ಆತ್ಮಸಾಕ್ಷಿ ಇರುವುದಿಲ್ಲ. ಹಂಗಿನರ ಮನೆಯ ಗಿಳಿಯಂತೆ ಮಾತಾಡಿರುವ ಕವಿಗಳ ಬ[…] ಮರುಕವಿದೆ.

- ಎಸ್. ಆಕಾ[…]
ಹದಲಗೆರೆ, ಗುಬ್ಬಿ ತ[…]
ತುಮಕೂ[…]

ರಾಜಕೀಯ ತೊಡ[…]ಗಾಲಾಗಿರುವ ಸಿದ್ಧರಾಮ[…]ನವರನ್ನು ಅವರ ಸ್ವಕ್ಷೇತ್ರವಾ[…] ಚಾಮುಂಡೇಶ್ವರಿ ಕ್ಷೇತ್ರದ[…] ಹಣಿಯಲಿಕ್ಕಾಗಿಯೇ ದಲಿ[…] ಮನೆಯಲ್ಲಿ ತಂಗಿ ರಾಜಕೀ[…] ಲಾಭ ಪಡೆಯಲು ಮು[…]

ಪುಣ್ಯ ಪಾಪಗಳೆಂಬವು ತಮ್ಮ ಇಷ್ಟ ಕಂಡಿರೆ, 'ಅಯ್ಯಾ' ಎಂದಡೆ ಸ್ವರ್ಗ, 'ಎಲವೊ' ಎಂದಡೆ ನರಕ

ಅಥವಾ ಪೂರ್ವ ದೇಶಗಳ ಬಗ್ಗೆ ಮಾತಾಡುವಾಗ ಇಲ್ಲಿನ ಶ್ರೀಮಂತ ಮತ್ತು ಪ್ಯಾರಾಸೈಟಿಕ್ ವರ್ಗಗಳನ್ನು ಇಲ್ಲಿನ ದುಡಿಯುವ ವರ್ಗಗಳೊಂದಿಗೆ ಸಮೀಕರಿಸಿ ಏಕಶಿಲಾರೂಪದಂತೆ ನೋಡುವ ಕೊರತೆ ಮತ್ತು ಅದರಿಂದ ಉಂಟಾಗುವ ವೈರುಧ್ಯ ಈ ಪುಸ್ತಕದಲ್ಲೂ ಮುಂದುವರೆಯುತ್ತದೆ. ಅದೇರೀತಿ ಶ್ರೀಮಂತ ವರ್ಗಗಳ ಜೀವನ ವಿಧಾನದಿಂದ ಉಂಟಾಗುತ್ತಿರುವ ಮಾಲಿನ್ಯವನ್ನು ಸಕಾರಣವಾಗಿಯೇ ದೋಷಿಯೆಂದು ಗುರುತಿಸುವ ಲೇಖಕರು ಅಂಥ ವರ್ಗಗಳನ್ನು ಸೃಷ್ಟಿಸುವ ಆರ್ಥಿಕ ಉತ್ಪಾದನಾ ವಿಧಾನಗಳನ್ನು ಹಾಗೂ ಪರಿಸರ ಮಾಲಿನ್ಯ ತಡೆಯಬೇಕೆಂದರೆ ಆರ್ಥಿಕ ಉತ್ಪಾದನಾ ವಿಧಾನಗಳೇ ಬದಲಾಗಬೇಕೆಂಬ ಅಗತ್ಯವನ್ನು ಗುರುತಿಸಲಾಗದೇ ಹೋಗುತ್ತಾರೆ. ಆದ್ದರಿಂದಲೇ ಪರಿಸರನಾಶದ ಮೂಲವನ್ನು ಅಭಿವೃದ್ಧಿ ಪಥದಲ್ಲಿ ಹಾಗೂ ಅಧಿಕಾರ ಶಾಹಿಯ ಭ್ರಷ್ಟಾಚಾರದಲ್ಲಿ ಸಕಾರಣವಾಗಿಯೇ ಗುರುತಿಸಿದರೂ ಅವೆಲ್ಲದರ ಹಿಂದಿರುವ ವರ್ಗ ಹಿತಾಸಕ್ತಿಯನ್ನು, ಅದನ್ನು ಆಗಗೊಳಿಸುವ ಆ ವರ್ಗಗಳಿಂದಲೇ ನಿಯಂತ್ರಿಸಲ್ಪಡುವ ಉತ್ಪಾದನಾ ವಿಧಾನವನ್ನು ಹಾಗೂ ಅದಕ್ಕೆಂದೇ ರೂಪಿತವಾಗಿರುವ ಪ್ರಭುತ್ವವನ್ನು ಅದರ ವರ್ಗ ಹಿತಾಸಕ್ತಿಯನ್ನು ಗುರುತಿಸುವಲ್ಲಿ ವಿವೇಕಾನಂದರ ದರ್ಶನ ವಿಫಲವಾಗುತ್ತದೆ. ಈ ವಿಶ್ಲೇಷಣ ಹತಾರಗಳ ಕೊರತೆಯೇ ಕೆಲವೊಮ್ಮೆ "ಸಾಮ್ರಾಜ್ಯಶಾಹಿಗಳು ಆದಿವಾಸಿಗಳ ಸಂಸ್ಕೃತಿಗೆ ಹೆದರಿಯೇ ಅವರನ್ನು ಎತ್ತಂಗಡಿ ಮಾಡುತ್ತಿದ್ದಾರೆ" ಎಂಬ ಮುಗ್ಧ ಹೇಳಿಕೆಗಳನ್ನೂ ನೀಡುವಂತೆ ಮಾಡುತ್ತದೆ.

ಇಷ್ಟೆಲ್ಲಾ ಇದ್ದರೂ ಬಡಜನತೆಯ ಬಗ್ಗೆ ಮತ್ತು ಮನುಕುಲವನ್ನು ಪೊರೆಯುವ ಭೂತಾಯಿಯ ಬಗ್ಗೆ ಅವರಿಗಿರುವ ಪ್ರಶ್ನಾತೀತ ಕಾಳಜಿ ಕೆಲವೊಮ್ಮೆ ಅವರಿಗೇ ಗೊತ್ತಿಲ್ಲದಂತೆ ಈ ಮಿತಿಯನ್ನು ಮೀರುವಂತೆ ಮಾಡುತ್ತದೆ. ಆದ್ದರಿಂದಲೇ ಕೆಲವೊಮ್ಮೆ ಒಂದು ಉದಾರವಾದಿ ಪರಿಸರವಾದವೇನೋ ಎಂಬಂಥ ವಾದಗಳು ಇದರಲ್ಲಿವೆ. ಆದರೆ ಎಲ್ಲೆಲ್ಲಿ ಅವರು ಬಡಜನತೆಯ ಪರವಾಗಿ ಮತ್ತು ಆ ನೆಲೆಯಿಂದ ಭೂಮಿಯ ಬಗ್ಗೆ ವಾದಿಸುವಾಗ ಅವರ ಪರಿಸರವಾದ ಆ ಮಿತಿಗಳನ್ನೆಲ್ಲಾ ಉಲ್ಲಂಘಿಸಿಬಿಡುತ್ತದೆ. ಇದು ಪುಸಕ್ತದ ಶಕ್ತಿಯು ಹಾಗೂ ಅಲ್ಲಲ್ಲಿ ಕಾಣಿಸಿಕೊಳ್ಳುವ ವೈರುಧ್ಯದ ಮೂಲವೂ ಆಗಿದೆ.

-ಶಿವಸುಂದರ್

ಮಂತ್ರಿ ಕುಮಾರಸ್ವಾಮಿ ನಡೆಸಿದ ಪ್ರಯತ್ನ ಇದು. ಅವರಿಗೆ ನಿಜವಾಗಲೂ ದಲಿತರ ಮೇಲೆ ಅಷ್ಟೊಂದು ಕಾಳಜಿ ಇದ್ದರೆ ಅಸ್ಪೃಶ್ಯತೆ ಬಲವಾಗಿರುವ ತಮ್ಮ ತಂದೆಯವರ ಹಾಸನ ಕ್ಷೇತ್ರದಲ್ಲಾಗಲೀ ಅಥವಾ ಸ್ವಕ್ಷೇತ್ರದಲ್ಲಾಗಲೀ ತಂಗಿ ಅಲ್ಲಿನ ದಲಿತರ ನೋವು, ಆತಂಕ, ಅಭದ್ರತೆಗಳನ್ನು ಹೋಗಲಾಡಿಸುವ ಯತ್ನ ಮಾಡಬಹುದಿತ್ತು.

ದೌರ್ಜನ್ಯ, ದಬ್ಬಾಳಿಕೆ, ಮೇಲರಿಮೆಗಳ ಭೂತಕಾಲದ ನೆನಪುಗಳನ್ನು ಈಗಲೂ ಉಳಿಸಿಕೊಂಡಿರುವ ತಂದೆ-ಮಕ್ಕಳು ವೈದಿಕ ಸ್ಥಾನದಲ್ಲಿ ನಿಂತು ಈಗಷ್ಟೇ ನೋವು, ಅವಮಾನಗಳ ಚಿಪ್ಪಿನಿಂದ ಹೊರಬರುತ್ತಿರುವ ಅಹಿಂದ ವರ್ಗದವರನ್ನು ಮತ್ತೆ ಭೂಗತ ಮಾಡಲು ತಮ್ಮ ಆಡಳಿತ ಯಂತ್ರವನ್ನು ಸರ್ವರೀತಿಯಲ್ಲೂ ದುರುಪಯೋಗಪಡಿಸಿ ಕೊಳ್ಳುತ್ತಿದ್ದಾರೆ. ಅದರ ಮುಂದುವರಿದ ಭಾಗವಾಗಿಯೇ ದರಿದ್ರ ನಾರಾಯಣ ಸಮಾವೇಶಗಳು, ದಲಿತರ ಮನೆಯಲ್ಲಿ ವಾಸ್ತವ್ಯದಂತಹ ಪ್ರಹಸನಗಳು ಜರುಗುತ್ತಿವೆ.

ಲಿಂಗಾಯತ, ಒಕ್ಕಲಿಗ ಮತ ಬ್ಯಾಂಕ್ ಲಾಬಿಯ ಫ್ಯೂಡಲ್ ರಾಜಕಾರಣ ತಮ್ಮ ಪಕ್ಷದ ತೀವ್ರ ಹಿನ್ನಡೆಗೆ ಕಾರಣವಾಗಬಹುದೆಂದು ಆತಂಕಕ್ಕೊಳಗಾಗಿರುವ ತಂದೆ ಮಕ್ಕಳು ದಲಿತರ ಬಗ್ಗೆ ಮೊಸಳೆ ಕಣ್ಣೀರು ಹಾಕಲು ಶುರು ಮಾಡಿದ್ದಾರೆ. ಹುಸಿ ಮತಬ್ಯಾಂಕ್ ರಾಜಕಾರಣ ಇಟ್ಟುಕೊಂಡು ಇಂಥದೇ ಬಾಲಿಶ ರಾಜಕೀಯ ಹೆಜ್ಜೆಗಳನ್ನು ಇಟ್ಟರೆ ಅವರ ರಾಜಕೀಯ ಅವನತಿ ಶುರುವಾಗುವುದು ಖಂಡಿತ.

ಈ ಸನ್ನಿವೇಶದಲ್ಲಿ ಪಿ.ಲಂಕೇಶರ ಕೆಳಗಿನ ಮಾತುಗಳು ನಮ್ಮ ರಾಜಕೀಯ ನಾಯಕರುಗಳ ಕಣ್ಣು ತೆರೆಸುವಂತಾಗಲಿ:

"ಈ ನೆಲದಲ್ಲಿ ಎಲ್ಲರೂ ಬಾಳಲು ಸಾಧ್ಯವಿದೆ. ಅದು ರಕ್ತ ಸಂಬಂಧದ ದಿಗ್ವಿಜಯದಿಂದಲ್ಲ, ಜನರು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುವುದರಿಂದಲ್ಲ, ಎರಡೂ ಜಾತಿ ಪ್ರೀತಿಸಿ ಮುದ್ದಾಡುವುದರಿಂದಲ್ಲ, ಅದು ವಿವೇಕದಿಂದ ಎಲ್ಲರೂ ಒಟ್ಟಾಗಿ ಬಾಳಬೇಕೆಂಬ ಸರಳ ನೀತಿಯಿಂದ ಸಾಧ್ಯ."

- ಸದಾನಂದ ಸಿ. ಗಂಗನಬೀಡು, ಚಿಕ್ಕದೇವಸಂದ್ರ, ಬೆಂಗಳೂರು.

ತನನಂ ತನನಂ




ತೇಲಿ ಬಂದ ದಾರಿ 9

ಕವಿತಾ ಲಂಕೇಶ್

ಎಷ್ಟೊಂದು ಶಕ್ತಿ ನೋಡಿ ಈ ಸಂಗೀತಕ್ಕೆ! ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಇಲ್ಲದ ದೃಶ್ಯ ಜೀವವಿಲ್ಲದಂತೆ ಭಾಸವಾಗುತ್ತದೆ. ಒಂದೊಂದು ಕಡೆ ಸೈಲೆನ್ಸ್ ಎಷ್ಟು ಮುಖ್ಯವೋ, ಹಾಗೆಯೇ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ಕೂ ಅಷ್ಟೇ ಮುಖ್ಯ. ಭಾವನೆಗಳನ್ನು ಹೈಲೈಟ್ ಮಾಡೋದೇ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ಕು...

ನಮ್ಮ ಚಿತ್ರದ ಡಬ್ಬಿಂಗ್ ನಂತರ ರೀರೆಕಾರ್ಡಿಂಗ್ ಕೆಲಸ ಶುರು ಮಾಡಿದೆವು. ನನ್ನ ಪ್ರತಿ ಚಿತ್ರದಲ್ಲೂ ನಾನು ರೀರೆಕಾರ್ಡಿಂಗ್‌ಗೆ ಹೆಚ್ಚಿನ ಶ್ರಮ, ವೇಳೆ ಮೀಸಲಿರಿಸುತ್ತಾ ಬಂದಿದ್ದೇನೆ. 'ಪ್ರೀತಿ ಪ್ರೇಮ ಪ್ರಣಯ'ಕ್ಕೆ ಅಮೆರಿಕದ ಮನೋಮೂರ್ತಿ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ನೀಡಿದ್ದರು. ನನ್ನ ಉಳಿದೆಲ್ಲ ಚಿತ್ರಗಳಿಗೆ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಒದಗಿಸಿದ್ದು ಖ್ಯಾತ ಸಂಗೀತಕರ್ಮಿ ಐಸಾಕ್ ಥಾಮಸ್.


ಸಂಭಾಷಣೆ ರಚಿಸುವ ಕೆಲವರಿಗೆ ಹಾಡು ಬರೆಯಲಾಗಲ್ಲ... ಹಾಡು ಬರೆವ ಕೆಲವರಿಗೆ ಸಂಗೀತ ನೀಡಲಾಗಲ್ಲ.... ಹಾಡುಗಳ ಸಾಹಿತ್ಯ ನೋಡಿ ಕಲ್ಯಾಣ್‌ರನ್ನೇ ಮ್ಯೂಸಿಕ್ ಡೈರೆಕ್ಟರ್ ಮಾಡಿಕೊಂಡ ನನ್ನ 'ಸಾಹಸ' ಕೊನೆಗೂ ಅದ್ಭುತ ರಿಸಲ್ಟ್ ಕೊಟ್ಟಿದೆ. ಹಾಡು ರಚನೆ ಜೊತೆಗೆ ಬ್ಯಾಕ್ ಗ್ರೌಂಡ್ ಮ್ಯೂಸಿಕನ್ನೂ ನೀಡುವ ಮೂಲಕ ಭಾವಲಹರಿ ಸೃಷ್ಟಿಸಲು ಸಾಧ್ಯವಾಗಿದೆ. ಬ್ಯಾಕ್ ಗ್ರೌಂಡ್ ಮ್ಯೂಸಿಕ್ ನೀಡುವಾಗಲೇ



ಕೆಲವು ಸಣ್ಣ ಸಣ್ಣ ಚುಂಬಕ ಸಾಲುಗಳನ್ನು ಬರೆದುಹಾಕಿ ರಸದೌತಣದ ದೃಶ್ಯಗಳು ಬರುವಂತೆ ಮಾಡಿದ್ದಾರೆ ಕಲ್ಯಾಣ್. ಸಂಗೀತ ಪ್ರಧಾನ ಚಿತ್ರವಾಗಿರುವುದರಿಂದ ಆಗಾಗ ತೇಲಿ ಬರುವ ಮಧುರ ಆಲಾಪಗಳಿಗಾಗಿ ವಿಭಿನ್ನ ಕೋರಸ್ ಸಿಂಗರ್‌ಗಳನ್ನು ಕರೆಸಿ ಹಾಡು ಹೇಳಿಸಿದರು. ನಿರ್ಮಾಪಕ ಸುರೇಶ್‌ಗೆ ಕ್ಲಾಸಿಕ್ ಮ್ಯೂಸಿಕ್ ಇಷ್ಟ. ಕಲ್ಯಾಣ್‌ರ ಎರಡೇ ಆಲಾಪಗಳನ್ನು ಕೇಳಿ ಫುಲ್ ಖುಷಿಯಾಗಿಬಿಟ್ಟರು.

ಈಗಾಗಲೇ ಹಾಡು, ಹಿನ್ನೆಲೆ ಸಂಗೀತ ರೋಮಾಂಚನಗೊಳಿಸುತ್ತಿದೆ. ಇನ್ನು ಡಾ. ಎಲ್, ಸುಬ್ರಮಣ್ಯಂ ಬಂದು ಅವರ ವಯೋಲಿನ್ ಬಿಟ್ಸ್ ಸೇರಿಸಿಬಿಟ್ಟರೆ ಅಲ್ಲಿಗೆ ನಿಮ್ಮ ಕಿವಿ, ಮನಗಳಿಗೆ ಹಬ್ಬವೋ ಹಬ್ಬ!

ಈಗ ವಿವಿಧ ಬಗೆಯ ಮ್ಯೂಸಿಕ್ಕು ಇಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯ... ಕೀಬೋರ್ಡ್ ಎಲ್ಲ ನೀಡುವ ಕಾಮಧೇನು ವಿದ್ದಂತೆ... ಹಿಂದೆಲ್ಲ ಲೈವ್ ಇನ್‌ಸ್ಟ್ರುಮೆಂಟ್‌ಗಳನ್ನೇ ಬಳಸುತ್ತಿದ್ದುದರಿಂದ ಅಲ್ಲಿ ಎಲ್ಲವೂ ನ್ಯಾಚುರಲ್ ಇರ್ತಾ ಇತ್ತು. ಈ ಕೀಬೋರ್ಡ್ ಸೌಂಡ್ ಕೇಳು ವಾಗ ಎಲ್ಲೋ ಒಂದು ಕಡೆ ಇಲೆಕ್ಟ್ರಾನಿಕ್ ಸೌಂಡ್ ಕೇಳಿದಂತೆ ಯಾಂತ್ರಿಕತೆ ಭಾಸವಾಗುತ್ತದೆ.



ಬಿ.ವಿ. ಕಾರಂತ್ ಎಲ್ಲೆಲ್ಲಿಂದಲೋ ಜಾನಪದ ಕಲಾವಿದರನ್ನು ಕರೆಸಿ ಅವರಿಂದಲೇ ತಮಗೆ ಬೇಕಾದ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಪಡೆಯುತ್ತಿದ್ದರು. ಆಯಾ ಸ್ಥಳದಲ್ಲಿ ಲಭ್ಯವಿರುವ ವಿಶಿಷ್ಟ ಬೊಂಬಿನಿಂದಲೋ, ಕೋಲುಗಳಿಂದಲೋ ಹೊಸ ಬಗೆಯ ಸಂಗೀತ ಸೃಷ್ಟಿಸಿ ಮಣ್ಣಿನ ವಾಸನೆ ತರಬಲ್ಲವರಾಗಿದ್ದರು. ಮಧುರ ಭಾವ ಸೃಷ್ಟಿ ಅವರದು! ನನ್ನ 'ದೇವೀರಿ' ಚಿತ್ರ ನೋಡಿದ ಅವರು "ನಾವೆಲ್ಲ ಆಫ್‌ಬೀಟ್ ಸಿನಿಮಾಗಳನ್ನು ಸ್ಲೋ ಆಗಿ

ಹಿನ್ನೆಲೆ ಸಂಗೀತ

ನಿಮ್ಮ ಕಿವಿ, ಮನಗಳಿಗೆ ಹಬ್ಬ....

ತೋರಿಸಿ ನೀರಸ ಮಾಡಿಬಿಟ್ಟೆವೋ ಏನೋ? ಆದರೆ ನೀನು 'ದೇವೀರಿ'ಯಲ್ಲಿ ಕಮರ್ಷಿಯಲ್ ವೇಗ ಇಟ್ಟುಕೊಂಡು ಅತ್ಯುತ್ತಮ ಚಿತ್ರ ಕೊಟ್ಟಿದ್ದಿಯಾ... ಆದರೆ ನನಗೆಲ್ಲೋ ಈ ಲೈವ್ ಇನ್‌ಸ್ಟ್ರುಮೆಂಟ್‌ಗಳ ಬಳಕೆ ಕಡಿಮೆ ಆಯ್ತು ಅನ್ನಿಸ್ತಿದೆ" ಎಂದಿದ್ದರು.

"ನಿಮ್ಮ 'ಬಂದ್ ಜರೋಕೆ' ಚಿತ್ರದಲ್ಲಿ ನಾವು ನಿರೀಕ್ಷಿಸಿದ ಮಟ್ಟಕ್ಕೆ ಹಿನ್ನೆಲೆ ಸಂಗೀತವಿರಲಿಲ್ಲ" ಎಂದು ಹೇಳಿದಾಗ, ಕಾರಂತ್ "ಆ ಸಬ್ಜೆಕ್ಟ್ ಗುಂಗೇ ಬರ್‍ಲಿಲ್ಲ ನೋಡು...." ಎಂದಿದ್ದರು. ಆಗ ಪ್ರೇಮಾ ಕಾರಂತ್ "ಏನ್ರೀ, ನಾನು ಎಷ್ಟು ವಿವರವಾಗಿ ಸಬ್ಜೆಕ್ಟ್ ಹೇಳಿದ್ದೀನಿ. ನೀವು ಆಸಕ್ತಿಯಿಂದ ಕೇಳಿಸಿಕೊಂಡೇ ಇಲ್ವಲ್ರಿ... ಅದ್ಕೆ ಗುಂಗು ಬಂದಿಲ್ಲ" ಎಂದು ಛೇಡಿಸಿದರು. ಎಲ್ಲ ಕಲಾವಿದ, ನಿರ್ದೇಶಕರಿಗೂ ಒಂದೊಂದು ಬಗೆಯ 'ಗುಂಗು' ಬಂದ್ರೇನೇ ಪರ್‌ಫೆಕ್ಟ್ ರಿಸಲ್ಟ್ ಬರೋದು... ಈಗ ಈ ಕೀಬೋರ್ಡ್‌ನಲ್ಲಿ ಎಲ್ಲ ಬಗೆಯ ವಾದ್ಯಗಳ ಸಂಗೀತವನ್ನು ಫೀಡ್ ಮಾಡಿರುವುದರಿಂದ ಎಷ್ಟೋ ಜಾನಪದ ಸಂಗೀತಗಾರರು ಕೆಲಸವಿಲ್ಲದಂತಾಗಿದ್ದಾರೆ. ಇವರು ಬಳಸುವ ಉಪಕರಣಗಳು ಮಾಯವಾಗುತ್ತಲೇ ಇವೆ!

ಹಿಂದೆ ನಾನು 'ಮಹಿಳೆ ಮತ್ತು ಹಾಡು' ಎಂಬ ಕಾನ್ಸೆಪ್ಟ್ ಇಟ್ಟುಕೊಂಡು ಸೀರಿಯಲ್ ಮಾಡಿದ್ದೆ. ಹೆಣ್ಣು ಮಗು ಜನಿಸಿದಾಗೊಂದು ಹಾಡು, ದೊಡ್ಡವಳಾದಾಗೊಂದು ಹಾಡು, ಮದುವೆಯಾಗಿ ಗಂಡನ ಮನೆಗೆ ಹೋಗುವಾಗೊಂದು ಹಾಡು, ನಿಧನಳಾದಾಗೊಂದು ಹಾಡು... ಹೀಗೆ ಎಲ್ಲದಕ್ಕೂ ಜಾನಪದ ಹಾಡುಗಳಿವೆ. 'ಗಾನಕೋಗಿಲೆಗಳು' ಮಾಲಿಕೆಯಲ್ಲಿ ಫಕೀರವ್ವ ಗುಡಿಸಾಗರ, ಸಿರಿಯಜ್ಜಿ ಮುಂತಾದ ಗ್ರಾಮೀಣ ಪ್ರತಿಭೆಗಳನ್ನು ಪರಿಚಯಿಸಿದ್ದೆ. ಸಿರಿಯಜ್ಜಿ ಬಾಯಿಯಲ್ಲೇ ಹತ್ತು ಸಾವಿರದಷ್ಟು ಹಾಡುಗಳು! ಸರ್ಕಾರ ಅಥವಾ ಇತರ ಆಸಕ್ತರು ಈ ಅಪೂರ್ವ ಸಂಪತ್ತನ್ನು ದಾಖಲಿಸಿ ಮುಂದಿನ ಪೀಳಿಗೆಗಳಿಗೆ ದೊರಕಿಸುವ ಕಾರ್ಯ ಕೈಗೊಳ್ಳುತ್ತಿಲ್ಲ. ನೋಡಿ, ಫಕೀರವ್ವ ಗುಡಿಸಾಗರ ಸಾವಿನೊಂದಿಗೆ ಅದೆಷ್ಟೋ ಸಂಪದ್ಭರಿತ ಹಾಡುಗಳೂ ಹೊರಟುಹೋದವು. ಪೈರು ಕೀಳುವಾಗ, ರಾಗಿ ಬೀಸುವಾಗ ಹೀಗೆ ಪ್ರತಿ ಚಟುವಟಿಕೆಯಲ್ಲೂ ವಿಶಿಷ್ಟ, ವಿಭಿನ್ನ ಜಾನಪದ ಹಾಡುಗಳಿವೆ.

ಇಲೆಕ್ಟ್ರಾನಿಕ್ ಸಂಗೀತ ಕಾರಣದಿಂದ ಸುಮಾರು ವಾದ್ಯಗಳು ಕಣ್ಮರೆಯಾಗಲಿವೆ... ಹಾಗೆಯೇ ಆ ವಾದ್ಯ ಬಳಸುವವರು ಬೇರ್‍ಯಾವುದೋ ಕೆಲಸ ಮಾಡಿ ಹೊಟ್ಟೆ ಹೊರೆಯಬೇಕಾಗುತ್ತಿದೆ. 'ಸಾರಂಗಿ ದಿಲ್‌ರುಬಾ' ಎಂಬ ಇನ್‌ಸ್ಟ್ರುಮೆಂಟ್ ನುಡಿಸುವವರು ಫಯಾಜ್‌ಖಾನ್ ಎಂಬೊಬ್ಬರು ಮಾತ್ರ! ಕೀಬೋರ್ಡ್ ಸಂಗೀತ ಬಂದಾಗಿನಿಂದ ನೂರಾರು ಫಯಾಜ್‌ಖಾನ್‌ಗಳು ಬೇರೆ ವೃತ್ತಿ ಹಿಡಿಯಬೇಕಾಯ್ತು. ಇಲ್ಲಿ ನಮ್ಮ ಚಿತ್ರರಂಗಕ್ಕೆ ಕೊಳಲು ಸಂಗೀತ ಬೇಕೆಂದರೆ ಪ್ರವೀಣ್ ಗೋಡ್ಖಿಂಡಿ, ಭುಟ್ಟೊ ಇಬ್ಬರು ಮಾತ್ರ ಲಭ್ಯ! ಕೀಬೋರ್ಡ್‌ನಲ್ಲಿ ಕೊಳಲು ಸಂಗೀತ ಬಂದಾದ ಮೇಲೆ ಕೊಳಲು ವಾದಕರೆಲ್ಲ ತೆರೆಮರೆಗೆ ಸರಿದುಬಿಟ್ಟಿದ್ದಾರೆ. ತಬಲಾ ವಾದಕರಿಗಂತೂ ಕೆಲಸವೇ ಇಲ್ಲದಂತಾಗಿದೆ. ಅದಿರಲಿ, ಕೀಬೋರ್ಡ್‌ನಲ್ಲಿ ಕೋರಸ್ ಸಹ ಲಭ್ಯ ಇರುವುದರಿಂದ ಕೋರಸ್ ಸಿಂಗರ್ಸ್‌ಗೂ ಕುತ್ತು!

ಹಲವಾರು ಕೊಳಲು ವಾದಕರು ಏಕಕಾಲದಲ್ಲಿ ಸೃಷ್ಟಿಸುವ ಸಂಗೀತವನ್ನು ಕೀಬೋರ್ಡ್‌ನಲ್ಲಿ **multiply** ಮಾಡಿ ಅದನ್ನೂ ಸೃಷ್ಟಿಸಬಹುದು.

ಇನ್ನೂ ಮುಂದೆ ಕೀಬೋರ್ಡ್ ಮೂಲಕವೇ ಹಾಡು ಹಾಡಿಸಬಹುದೇನೋ? ಆಗ ನಮ್ಮ ಗಾಯಕ, ಗಾಯಕಿಯರಿಗೂ ಕೀಬೋರ್ಡ್ ಬಿಸಿ ತಟ್ಟಲಿದೆಯೇನೋ?

ಬಹುತೇಕ ಹಾಲಿವುಡ್ ಚಿತ್ರಗಳಲ್ಲಿ ಹಾಡುಗಳು ಇಲ್ಲದಿರುವುದರಿಂದ, ಬ್ಯಾಕ್‌ಗ್ರೌಂಡ್ ಮ್ಯೂಸಿಕ್‌ಗೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತಾರೆ. 'ಟೈಟಾನಿಕ್'ನಂತಹ ಚಿತ್ರಗಳ ಹಿನ್ನೆಲೆ ಸಂಗೀತವೂ ಸೀಡಿ ರೂಪದಲ್ಲಿ ಮಾರಾಟವಾಗುತ್ತದೆ. ಇಲ್ಲಿ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ ಕುರಿತು ಬಹುತೇಕರು ಗಮನ ಕೊಡುವುದೇ ಇಲ್ಲ, ಸಿನಿಮಾ ಸಂಗೀತ ಪ್ರಶಸ್ತಿ ನೀಡುವಾಗಲೂ ಹಾಡುಗಳ ಮೇಲೆಯೇ ನಿರ್ಧರಿಸುವುದೇ ಹೆಚ್ಚು! ಒಂದು ಚಿತ್ರಕ್ಕೆ ಹಿನ್ನೆಲೆ ಸಂಗೀತವೂ ಅತಿ ಮಹತ್ವದ್ದೇ...

ನಿರೂಪಣೆ : ಪಿ.ಕೆ. ಮಲ್ಲನಗೌಡರ್

ಕತ್ತಲೆಯ ಹೂವು

ಊರಿಗೆ ಊರೇ ಮಲಗಿದೆ
ಮಡಿಲಲ್ಲಿ ನಿದ್ದೆಗೆ ಜಾರಿದ ಮಗುವಿನಂತೆ
ಕೇರಿಯು ಸಹ,
ತೆರೆದ ಬಾಗಿಲಿನಲ್ಲಿ ಇಣುಕಿ ನೋಡುವ ಬೆಂಕಿ
ಮುರಿದು ಕಟ್ಟುವ ಮಾತು ಎದೆಯೊಳಗೆ

ಊರ ಶಾನುಭೋಗರ ಮನೆಯೆದುರು
ಅರಳಿ ನಿಂತಿದೆ ಹೂವು ನಿಟಾರನೆ, ಯಾರ ಪರವಾನಗಿ ಇಲ್ಲದೆ
ಹೆಡಿಗೆಯರಳಿದ ಕಾಡುಮಲ್ಲಿಗೆ
ಅದರ ಚೊಚ್ಚಲ ನೋಟ ಬಿಡಿಸಿದೆ ಚಿತ್ತಾರ ನೂರು!
ಸಿರಿಯ ವಿಸ್ತಾರ ಭೂಮಿಗಿಂತ ವಿಶಾಲ

ಆ ಹೂವಲ್ಲಿ ಕೇರಿಯ ಸೊಬಗು ಜಿನುಗುತ್ತಿದೆ
ಮುತ್ತು, ರತ್ನ, ಹವಳ, ಬಂಧಿಸಿದೆ
ಅಜ್ಜಿಯ ಏಳು ಕಾಸಿನ ಸರದಂತೆ
ಇದನ್ನೆಲ್ಲ ಕದ್ದು ನೋಡುವ ಕಣ್ಣು
ತುಟಿ ಹೊಲಿದಿದೆ ನೂಲುದಾರ

ಕೈಗೆಟುಕುವಂತಿದ್ದರೆ ಕದ್ದು ಬಿಡುತ್ತಿದ್ದೆ
ಪ್ರತಿರಾತ್ರಿ ಅಮವಾಸ್ಯೆ ಕಾಣುತ್ತಿಲ್ಲ
ಇನ್ನೇನು ಕಾಲ ಸರಿಯುತ್ತಿದೆ
ನನಗಾಗಿ ದೊರಕಿಬಿಡು; ಇಲ್ಲವಾದರೆ
ನನ್ನ ಸಮಾಧಿ ಮೇಲೆ ತುಂಬೆಯಾಗಿ
ಅರಳಿಬಿಡು.

- ಗಂಗಪ್ಪ ತಳವಾರ್



ಲಗೆರಹೋ ಜೊತೆಗೆ ಮುನ್ನಾಭಾಯಿ ಎಂಬಿಬಿಎಸ್ಸೂ ಇರಲಿ!

ಟಿವಿ ನೋಡಿದಾಗಲೇ ಹಾಗೆ ಅನ್ನಿಸಿತ್ತು, ಪತ್ರಿಕೆಗಳಲ್ಲಿ ಸುದ್ದಿ ಓದಿದಾಗ ಮನದಟ್ಟಾಯಿತು. ಕಣ್ಣು ಮಂಜಾಯಿತು. ಹೃದಯ ಭಾರ ಆಯಿತು. ನಮ್ಮ ಬದುಕು ಒಂದು ಬದುಕೇ ಎಂಬ ಜಿಜ್ಞಾಸೆ ಮೂಡಿಬಂದಿತು. ನಮ್ಮ ಆಲೋಚನೆಯೆಲ್ಲ ಸ್ವಾರ್ಥ ಪರವಾದದ್ದು. ನಾನುಂಟೋ ಮೂರು ಲೋಕ ಉಂಟೋ ತರಹದ್ದು. ರಾಷ್ಟ್ರದ ಬಗ್ಗೆ ಕಾಳಜಿ ಇಲ್ಲ, ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತೆಯೇ ಇಲ್ಲ. ನಮ್ಮ ಜನಪ್ರತಿನಿಧಿಗಳು ನೋಡಿ. ಹಗಲೂ ರಾತ್ರಿ ದೇಶ ಕುರಿತೇ ಚಿಂತನೆ. ಅದರ ಅಭಿವೃದ್ಧಿ ಹೇಗೆ ಎಂಬುದೇ ಅವರ ಕಾಳಜಿ. ಇದನ್ನು ಅರಿಯದ ಪಾಷಂಡಿಗಳೂ ಇದ್ದಾರೆ ಎಂಬುದನ್ನು ತಿಳಿದು ಮನ ನೊಂದಿತು. ಏನಾದರಾಗಲಿ ಇದರ ಸತ್ಯ ಪರೀಕ್ಷೆ ನಡೆದೇ ಹೋಗಲಿ ಎಂದು ತೀರ್ಮಾನಿಸಿ ರಾಜ್ಯ ಸಂಪುಟದ ಅತ್ಯಂತ ಮೇಧಾವಿ ಮಂತ್ರಿ ಎಚ್.ಡಿ. ರೇವಣ್ಣ ಅವರನ್ನು ಕಂಡೆ.

'ನಮಸ್ಕಾರ ಸಾರ್' ಅಂದೆ.

'ಹೂ... ನಮಸ್ಕಾರ' ಅಂದರು ಮಂತ್ರಿವರ್ಯರು, ಎತ್ತಲೋ ದೃಷ್ಟಿಹರಿಸಿ. ಯಾಕೋ ಏನೋ ಮೈಪರಚಿಕೊಂಡರು.

'ಸಾರ್ ಆ ಸೀಡಿ ವಿಷಯ'......

'ಈ ಸೀಗಡಿ ಕರ್ಮೀನು ಇಂತಹವುಕ್ಕೆಲ್ಲ ಟೈಂ ಇಲ್ಲಾರೀ.'

'ಜನಾರ್ಧನ ರೆಡ್ಡಿ ಆರೋಪ....'

'ಈ ದೇಶದಲ್ಲಿ ನೂರಾರು ಸಮಸ್ಯೆ ಅವೆ. ಅವನ್ನು ಬಗೆಹರಿಸೋದು ಹೆಂಗೇ ಅನ್ನೋದನ್ನ ಬಿಟ್ಟು ಇವೆಲ್ಲ ಉತ್ತರ ಹೇಳ್ತಾ ಇರೋಕಾಗುತ್ತೇನ್ರಿ' ಅಂತ ರೇಗಿದ ದನಿಯಲ್ಲಿ ಉತ್ತರಿಸಿದರು. 'ನಮ್ದು ಒಂದೇ ಸಬ್ಜೆಕ್ಟು–ರಾಜ್ಯದ ಅಭಿವೃದ್ಧಿ. ಅದನ್ನು ಬಿಟ್ಟು ಬೇರ ವಿಷಯಕ್ಕೆ ತಲೆ ಕೆಡಿಸಿಕೊಳ್ಳೋದಕ್ಕೆ ಪುರಸತ್ತು ಇಲ್ಲ' ಎಂದು ಸಮಾಪ್ತಿ ಮಾಡಿ, ಸಾರ್ವಜನಿಕವಾಗಿ ಕೆರೆಯಬಾರದ ಕಡೆ ಎಲ್ಲ ಕೆರೆದುಕೊಂಡರು... ಪಾಪ ಅದು ಅಭಿವೃದ್ಧಿ ಕೆರೆತ ಇರಬೇಕು.

* * * * * *

ಅಬಕಾರಿ ಹಾಗೂ ಅರಣ್ಯ ಸಚಿವ ಚೆನ್ನಿಗಪ್ಪ ಅವರ ಮನೆಗೆ ಹೋದೆ. ಸೀಡಿಯಲ್ಲಿ ಹಣದ ರಾಶಿಯ ಹಿಂದೆ ನಿಂತಿದ್ದ ಮನುಷ್ಯನ ತದ್ರೂಪಿ ಇದ್ದ ಹಾಗೆ ಇದಾನಲ್ಲ ಈ ಮನುಷ್ಯ ಅನ್ನುವ ಅನುಮಾನ ಕಾಡಿತು. ಪೊಲೀಸ್ ಇಲಾಖೇಲಿ ಇದ್ದವರಲ್ಲವಾ ಮಾನ್ಯ ಸಚಿವರು, ನಾಯಿ ಜಾತಿ, ನನ್ನ ಮನಸ್ಸನ್ನ ಮೂಸಿ ನೋಡಿದರು ಅಂತ ಕಾಣಿಸುತ್ತೆ, 'ಅದು ನಾನಲ್ಲ ಕಣ್ರಿ' ಅಂದರು. 'ನಾನೆಂಬೋದು ನಾನಲ್ಲ' ಅನ್ನೋ ತತ್ವ ಪದ ನೆನಪಿಗೆ ಬಂದಿತು. 'ಇದು ಮಾಯಾ ಪ್ರಪಂಚ ಕಣ್ರಿ' ಅಂದರು. "ಜಗಮೇ ಮಾಯಾ" ಎನ್ನುವ ತೆಲುಗು ಹಾಡು ಜ್ಞಾಪಕ ಆಯಿತು. ಎಂತಹ ದಾರ್ಶನಿಕ ಈ ಮನುಷ್ಯ ಅನ್ನಿಸಿತು. 'ಅಷ್ಟು ದುಡ್ಡು ನಾನು ನೋಡೇ ಇಲ್ಲ ಕಣ್ರಿ' ಅಂದರು. ಮುಖ್ಯಮಂತ್ರಿಗಳಿಗೆ ಕೋಟಿಗೆ ಎಷ್ಟು ಸೊನ್ನೆ ಸೇರಿಸಬೇಕೂಂತನೇ ಗೊತ್ತಿಲ್ಲವಂತೆ. ಅವರಿಗೆ ತಕ್ಕ ಶಿಷ್ಯ ಇವರು. ಅಷ್ಟು ದುಡ್ಡು ನೋಡೇ ಇಲ್ವಂತೆ. ಬರುವ ಸಂಬಳದಲ್ಲೇ ಅಂಬಲೀಯೋ, ತುಂಬಿಸೊಪ್ಪೋ ತಿಂದು ಸರಳ ಜೀವನ ನಡೆಸುತ್ತಿರುವ ಇಂತಹವರ ಬಗ್ಗೆ ಜನ ಕಪೋಲ ಕಲ್ಪಿತ ಮಾತುಗಳನ್ನು ಆಡುವುದು ಸರಿಯಲ್ಲ ಅನ್ನಿಸಿತು. 'ಅವರ ಮಲ್ಲಿ ಒಂದು ಕಪ್ಪು ಟೀ ಸಹಿತ ಕುಡಿದಿಲ್ಲ ಕಣ್ರಿ' ಅಂದರು. ಎಂತಹ ಪ್ರಾಮಾಣಿಕತೆ! ಆದರೂ ಒಂದು ಅನುಮಾನ. 'ಟೀ ಕುಡಿದಿರಿ ಅಂತ ಆರೋಪ ಮಾಡಿಲ್ಲ ಸಾರ್, ಸ್ಕಾಚ್ ಕುಡಿದು ಚಿತ್ತಾದಿರಿ ಅಂತಾರೆ' ಅಂದೆ. 'ಕುಡಿದು ಚಿತ್ತಾಗೋಕೆ ನಾನೇನು ಅಡ್ಡಕಸಬಿ ಏನ್ರಿ. ಕುಡಿದಾಗಲೂ ಹಿಂಗೇ ಇರ್ತೀನಿ' ಎಂದು ತಮ್ಮ ಸಾಮರ್ಥ್ಯ ತೋಡಿಕೊಂಡರು. ದೇವೇಗೌಡ ಕುಟುಂಬದವರನ್ನು ಹೀನಾಮಾನ ಜಾಡಿಸಿದ ಮಾತು ತೆಗೆದೆ. 'ನಕಲಿ ಕಣ್ರಿ ಎಲ್ಲ ನಕಲಿ, ಮಿಮಿಕ್ರಿ ಮಾಡೋರು ರಾಜ್‌ಕುಮಾರ್ ತರಹಾನೆ ಮಾತಾಡ್ತಾರೆ, ರಾಜ್‌ಕುಮಾರ್ ಆಗಿ ಬಿಡ್ತಾರಾ? ಹಂಗೇನೇ ಇದೂನು' ಅಂತ ಸಮಜಾಯಿಷಿ ಹೇಳಿದರು. 'ಈಗ ನನ್ನ ತಲೇಲಿ ಯಾವುದೂ ಇಲ್ಲ,



ಅಭಿವೃದ್ಧಿ ಅಭಿವೃದ್ಧಿ ಅಭಿವೃದ್ಧಿ ಅಷ್ಟೇನೆ' ಎಂದು ಮಂಗಳ ಹಾಡಿದರು.

* * * * * *

ಪದ್ಮನಾಭನಗರಕ್ಕೆ ಬಂದೆ. ದೇವೇಗೌಡರು ಲಗೆ ರಹೋ ಮುನ್ನಾಭಾಯಿ ಕ್ಯಾಸೆಟ್ ನೋಡುತ್ತಾ ಖುಷಿಯಿಂದ ಇರುವುದು ತಿಳಿಯಿತು. ಯಜ್ಞ, ಹೋಮ, ಹವನ, ಮಾಟಮಂತ್ರಗಳು ಪವಿತ್ರ ಕಾರ್ಯಗಳೆಂದೂ, ತೀರ್ಥಯಾತ್ರೆಗಳಿಗೆ ಹೋಗುವುದು ಪುಣ್ಯ ಕೆಲಸಗಳೆಂದೂ, ಜ್ಯೋತಿಷಿಗಳ ಜೊತೆ ಇರುವುದು ಸತ್ಸಂಗವೆಂದೂ, ಇವುಗಳ ಹೊರತಾಗಿ ಸಿನಿಮಾ, ನಾಟಕ, ಸಾಹಿತ್ಯ ಸಂಗೀತ ಮುಂತಾದ ಸಾಂಸ್ಕೃತಿಕ ಕ್ರಿಯೆಗಳೆಲ್ಲವೂ ವ್ಯರ್ಥ ಕಾಲಾಹರಣವೆಂದೂ ಅಂತರ್ಗತ ಮಾಡಿಕೊಂಡಿರುವ ಗೌಡರಾದ ಗೌಡರು ಸಿನಿಮಾ ಕ್ಯಾಸೆಟ್ ನೋಡುತ್ತಿದ್ದಾರೆಂದು ತಿಳಿದು ಆಶ್ಚರ್ಯಾನಂದ ಆಯಿತು. ಸಮಯ ನೋಡಿ ರೂಮಿನ ಒಳಕ್ಕೆ ನುಗ್ಗಿದೆ.

ಅನಿಕ

'ಬನ್ನಿ ಬ್ರದರ್ ಬನ್ನಿ' ಎಂದರು ಗೌಡರು. 'ನೋಡಿ ಬ್ರದರ್ ಈ ಕ್ಯಾಸೆಟ್‌ನ' ಎಂದು ಹೇಳಿ ರೀವೈಂಡ್ ಮಾಡಿ ಬಲವಂತವಾಗಿ ಅದನ್ನು ನೋಡುವಂತೆ ಮಾಡಿದರು. 'ಜನಾರ್ಧನ ರೆಡ್ಡಿ ಕ್ಯಾಸೆಟ್ಟೂ ಹೀಗೇ ಅಲ್ವ ಬ್ರದರ್' ಅಂತ ಖುಷೀಲಿ ಕೇಳಿದರು.

ಮುನ್ನಾಭಾಯಿ ಎಂಬಿಬಿಎಸ್‌ನ ಮುಂದುವರೆದ ಭಾಗ ಇದು. ನಿಮ್ಮ ಕೊನೆಯ ಪುತ್ರರತ್ನವನ್ನು ಕೆಲವರು ಹಾಗೆ ಕರೆಯುತ್ತಾರೆ. ಈ ವಿಷಯ ತಿಳಿಸುವ ಮನಸ್ಸಾದರೂ ಮಾಜಿ ಪ್ರಧಾನಿ ಅನ್ನುವ ಗೌರವಕ್ಕೆ ಸುಮ್ಮನಾದೆ.

'ಈ ಕ್ಯಾಸೆಟ್‌ಗಳೆಲ್ಲ ನಕಲಿ ಬ್ರದರ್' ಅಂದರು ಗೌಡರು.

'ಜನಾರ್ಧನರೆಡ್ಡಿ ಕ್ಯಾಸೆಟ್ಟು ನಕಲಿ' ಅಂದದ್ದಕ್ಕೆ ಯಾರೋ ಹಿರಿಯರು 'ಸರ್ಕಾರನೇ ನಕಲಿ. ಕ್ಯಾಸೆಟ್‌ದೇನು ಮಹಾ' ಅಂತ ಹೇಳಿದ್ದು ನೆನಪಾಯಿತು.

'ನಕಲಿ ಕ್ಯಾಸೆಟ್‌ನ ಯಾಕೆ ಸಾರ್ ಬಿಡುಗಡೆ ಮಾಡ್ತಾರೆ' ಕೇಳಿದೆ.

'ರಾಜಕೀಯ ಬ್ರದರ್' ರಾಜಕೀಯ. ನನ್ನ ಮಗ ಒಳ್ಳೆ ಆಡಳಿತ ಕೊಡ್ತಿದಾನೆ ಅಂತ ಕೆಲವರಿಗೆ ಅಸೂಯೆ, ಅದಕ್ಕೆ'

'ಸಾರ್, ಲಗೆ ರಹೋ ಮುನ್ನಾಭಾಯಿಗೆ ಪ್ರಚಾರ ಕೊಡಬೇಕು ಸಾರ್'

'ಕೊಡ್ತೀನಿ ಬ್ರದರ್ ಕೊಡ್ತೀನಿ. ಕ್ಯಾಸೆಟ್ ಕೊಟ್ಟು ಎಲ್ರೂ ನೋಡಬೇಕು ಅಂತ ಹೇಳ್ತೀನಿ'

'ಜೊತೆಗೆ ಮುನ್ನಭಾಯಿ ಎಂಬಿಬಿಎಸ್ ಕ್ಯಾಸೆಟ್ಟೂ ಇರಲಿ ಸಾರ್'

ದೇವೇಗೌಡರ ಅಭಿವೃದ್ಧಿ ಮುಖ ನೋಡಲಾರದೆ ಹೊರಕ್ಕೆ ಹಾರಿದೆ.

* * * * * *

ಅಮೆರಿಕದ 'ಅಕ್ಕ'ಗೆ ಹೋಗಿ ಹಿಂತಿರುಗಿದ್ದ ಯಡಿಯೂರಪ್ಪ ನಿಗಿನಿಗಿ ಅಂತ ಹೊಳೆಯುತ್ತಿದ್ದರು.

'ಸಾರ್ ಕ್ಯಾಸೆಟ್' ಅಂದೆ.

'ತಂದಿದೀನ್ರಿ. ಅರ್ಧಗಂಟೆ ಭಾಷಣ ಓದಿದೆ. ಜನ ದಂಗಾಗೋದ್ರು. ಕ್ಯಾಸೆಟ್ ತಂದಿದೀನಿ. ನೋಡ್ತಿರಾ ಬನ್ನಿ' ಅಂದರು ಡಿಸಿಎಮ್ಮು.

ಪಾಪ ಇನ್ನೂ ಅಮೆರಿಕ ಗುಂಗಿನಲ್ಲೇ ಇದ್ದರು. ನಾನು ಬಂದ ವಿಷಯ ತಿಳಿಸಿದೆ.

'ನೋಡಿ ನಮ್ಮದು ಕರ್ನಾಟಕ ಅಭಿವೃದ್ಧಿ ರಂ... ಅಭಿವೃದ್ಧಿಗಷ್ಟೇ ಸೀಮಿತ. ಬೇರೆ ವಿಷಯಗ... ಬಗ್ಗೆ ಯೋಚಿಸಲು ಪುರುಸೊತ್ತೇ ಇಲ್ಲ... ಅಂದರು.

ಛೇ ಇವರಿಗೂ ಅಭಿವೃದ್ಧಿಯದ್ದೇ ಚಿಂತೆ... ಆದರೆ ಅಭಿವೃದ್ಧಿ ಎಂದರೆ ಏನು?

'ಸಿಎಂ ಹಳ್ಳಿಗೆ ಹೋಗ್ತಾರೆ. ನಾನು... ಕೊಳೆಗೇರಿಗೆ ಹೋಗ್ತೀನಿ.'

'ಅವರ ತರಹ ಅಲ್ಲೇ ಮಲಗ್ತೀರಾ ಸಾರ್?'

ದುರುಗುಟ್ಟಿ ನೋಡಿದರು. ಆ ಪ್ರಶ್ನೆ ಕೇಳಬಾರದಿ...ತ್ತೇನೋ. ಭಾರತೀಯ ಜನತಾ ಪಕ್ಷದವರಿಗೆ ಅಭಿವೃದ್ಧಿಯ... ಕಲ್ಪನೆ ಏನಿರಬಹುದು ಅನ್ನುವ ಸಂಶಯ ಬ್ರಹ್ಮಾಂಡ... ಆಯಿತು. ಉನ್ನತ ಶಿಕ್ಷಣ ಸಚಿವರಿಗೆ ಟಿಪ್ಪು ಸುಲ್ತಾನ... ಅವಹೇಳನ, ರಾಜ್ಯ ಸಂಪೂರ್ಣ ಹಿಂದೂಮಯ ಅರ್ಥಾ... ಬ್ರಾಹ್ಮಣ–ವೈಶ್ಯಮಯ ಆದಾಗಲೇ ಅದು ಅಭಿವೃದ್ಧಿ... ಸಿ.ಟಿ. ರವಿ ಎಂಬ ಪಡ್ಡೆ ಹೈದನಿಗೆ ದತ್ತ ಜಯಂ... ಮಾಡಿ ಚಿಕ್ಕಮಗಳೂರನ್ನು ಕೋಮು ದಳ್ಳುರಿಯ... ಸುಟ್ಟಾಗಲೇ ಈ ದೇಶದ ಅಭಿವೃದ್ಧಿ! ಡಿಸಿಎಂ ಅನ್ನ... ಕೇಳಿದರೆ– 'ಸಾರ್ ನಿಮ್ಮ ಅಭಿವೃದ್ಧಿಯ ಕಲ್ಪನೆ ಏನು...

'ಅಷ್ಟೂ ಗೊತ್ತಿಲ್ಲವೇನ್ರಿ..... ಅಭಿವೃದ್ಧಿ ಅಂದ... ಅಭಿವೃದ್ಧಿ' ದಬಾಯಿಸಿದರು.

'ಇದರಲ್ಲಿ ಶೋಭಾ ಯಾತ್ರೇನೂ ಸೇರುತ್ತಾ ಸಾರ...' ಅಂದೆ.

ಆ ಹೆಸರು ಕೇಳುತ್ತಿದ್ದಂತೆ ಸಾಹೇಬರು ಕೆಂಡಾಮಂಡ... ಆದರು. ಮಾತಿನ ಭರದಲ್ಲಿ ಈ ಹೆಸರಿನ ಹಿನ್ನೆಲೆ ಮರೆತ... ಕೇಳಿದ್ದು ನನ್ನದೇ ಅಪರಾಧ ಅನ್ನಿ. ಅವರು ಹೋಗ... ಅನ್ನುವ ಮೊದಲೇ ಅಲ್ಲಿಂದ ಹಾರಿದೆ.

* * * * * *

ಹೀಗೆ ಆಳುವ ಪಕ್ಷಗಳ ಯಾರನ್ನು ಕೇಳಿದರ... ಅಭಿವೃದ್ಧಿ ಮಂತ್ರಾನೇ ಜಪಿಸುತ್ತಿದ್ದರು. ಇಂತಹ ಆಡಳಿ... ಹಿಂದೆ ಇರಲಿಲ್ಲ, ಮುಂದೆ ಬರುವುದೂ ಇಲ್ಲ ಅನ್ನು... ಭವಿಷ್ಯ ನುಡಿಯುತ್ತಿದ್ದರು. ವಿರೋಧ ಪಕ್ಷದವರೇನ... ಮಹಾಜನತೆಯನ್ನು ಮರೆತಿರಲಿಲ್ಲ, ಅವರದ್ದೂ ಅಭಿವೃ... ಮಂತ್ರ. 'ನಾವು ಮಂಜೂರು ಮಾಡಿದ ಕೆಲಸಗಳ... ಇವರು ಕಲ್ಲು ಹಾಕ್ತಿದಾರೆ ಅಷ್ಟೆ' ಎಂಬ ಉತ್ತರ.

ಅಂದರೇನಾಯಿತು? ನಮ್ಮ ಎಲ್ಲಾ ಜನಪ್ರತಿನಿಧಿಗಳ... ಸದಾ ಈ ರಾಜ್ಯದ ಅಭಿವೃದ್ಧಿಯ ಚಿಂತನೆಯ... ತೊಡಗಿಸಿಕೊಂಡಿದ್ದಾರೆ. ಅವರ ಹೆಂಡತಿ ಮಕ್ಕಳು ಮರಿಗ... ಬದುಕು ಚಿಂತನಾಮಯ ಆಗಿರಬೇಕು. ಜನಸಾಮಾನ್ಯ... ಮಾತ್ರ ಈ ದೇಶದ ಬಗ್ಗೆ ಒಂದಿನಿತೂ ಆಸಕ್ತಿ ತೋರ... ಅವರನ್ನು ನಿಂದಿಸುವುದರಲ್ಲೇ ಕಾಲಹರಣ ಮಾಡುತ್ತಿದ್ದಾ... ನಮ್ಮಂತಹವರ ಬದುಕೇ ವ್ಯರ್ಥ!

–ಎಚ್.ಎಲ್. ಕೇಶವಮೂರ್ತಿ

ಜನ ತಮ್ಮ ಧರ್ಮ ಪಾಲಿಸುತ್ತಿಲ್ಲ ಯಾಕೆ?

ಕಳೆದ ಸಂಚಿಕೆಯಲ್ಲಿ ವಿ.ಪಿ.ಮೇಘರಾಜ್‌ರವರು ಬರೆದ 'ಶಿರಸಂಗಿ ಮಠದ ಸ್ವಾಮಿ ಅರೆಸ್ಟ್' ವರದಿಗೆ ಈ ಪ್ರತಿಕ್ರಿಯೆ. ಸವದತ್ತಿ ತಲ್ಲೂಕಿನ ಶಿರಸಂಗಿ ಗ್ರಾಮದ ಅಮಾಯಕ ಭಕ್ತರನ್ನು ವಂಚಿಸಿ, ತನ್ನ ಮಡದಿಯನ್ನೇ ಕೊಂದು ಸಾಕ್ಷಿ ಇಲ್ಲದಂತೆ ಮಾಡಿದ್ದ ಫಕೀರಪ್ಪ ಉರ್ಫ್ ಜಗದೀಶ ಸ್ವಾಮಿ ಒಬ್ಬ ಖದಿಮನೇ ಸರಿ. ಈತನನ್ನು ಪೊಲೀಸರು ಹಿಡಿದು ಜೈಲಿಗೆ ಹಾಕಿ ಕಂಬಿ ಎಣಿಸುವಂತೆ ಮಾಡಿದ್ದು ಸರಿ. ಆದರೆ ಇವನಿಗೆ ಸರಿಯಾದ ಶಿಕ್ಷೆ ಆಗುತ್ತದೆಯೋ, ಇಲ್ಲವೋ ಆ ಸವದತ್ತಿ ಗುಡ್ಡದ ಯಲ್ಲಮ್ಮನೇ ಉತ್ತರಿಸಬೇಕು.

- ಆರ್.ಕೆ ಕೋರ್ತಿ, ಬಾದಾಮಿ.

ಸೆಪ್ಟೆಂಬರ್ 20ರ ಸಂಚಿಕೆಯಲ್ಲಿ 'ಕಂಡಹಾಗೆ' (ವಾರಣಾಸಿಯ ಮಹಾಂತ ಮಿಶ್ರ ಮತ್ತು ಮೌಲಾನ ಅಬ್ದುಲ್ ಕಾಸ್ಮಿ ನೋಮನಿ ಕುರಿತು) ತುಂಬಾ ಚೆನ್ನಾಗಿತ್ತು. ಆದರೂ ಹಿಂದೂ ಧರ್ಮ ಒಳ್ಳೆಯದು– ಹಿಂದೂಗಳು ಕೆಟ್ಟವರು, ಇಸ್ಲಾಂ ಧರ್ಮ ಒಳ್ಳೆಯದು– ಮುಸಲ್ಮಾನರು ಕೆಟ್ಟವರು, ಯೇಸುಕ್ರಿಸ್ತ ಒಳ್ಳೆಯವನು– ಕ್ರೈಸ್ತರು ಕೆಟ್ಟವರು ಎಂಬಂತಾಗಿರುವುದು ಯಾಕೆ? ಜನ ನಿಜವಾಗಲೂ ತಮ್ಮ ಧರ್ಮಗಳನ್ನು ಪಾಲಿಸುತ್ತಿಲ್ಲ ಯಾಕೆ?

- ಬಿ.ಎಸ್. ಇಮ್ಮಾನುವೇಲ, ಮಸರಕಲ್, ರಾಯಚೂರು.

ಜಾತ್ಯತೀತ ಪಿತಾಮಹ ದೇವೇಗೌಡರ ಅಳಿಯ ಡಾ. ಮಂಜುನಾಥನ ಜಾತಕವನ್ನು ಬಯಲಿಗೆಳೆದದ್ದಕ್ಕೆ ಕಂಗ್ರಾಟ್ಸ್. "ಅಡ್ಜಸ್ಟ್‌ಮೆಂಟು, ಅದೂ, ಇದೂ" ಅಂತ ಮಾತನಾಡಲಿಕ್ಕೆ ಬಂದ ಟ್ರಿನಿಟಿ ಜನರಿಗೆ ಚೆನ್ನಾಗೆ ಹೇಳಿ ಕಳುಹಿಸಿದ್ದೀರ. ನಿಮ್ಮ ಧೈರ್ಯಕ್ಕೆ ನನ್ನ ಮೆಚ್ಚುಗೆ. ಯಾವ ಪತ್ರಿಕೆಯೂ ಮಾಡಲಾರದ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಎಲ್ಲ ಪತ್ರಿಕೆಗಳು ಆಳುವ ಸರಕಾರದ ಪರ ವಾರಿದ್ದು ಅನೈತಿಕ, ಅಪ್ರಾಮಾಣಿಕವಾಗಿರುವ ಕಾಲದಲ್ಲಿ ತಾವು ಹೆದರದೆ ಮುಂದೆ ಸಾಗುತ್ತಿದ್ದೀರಿ. ನಿಮಗೆ ನನ್ನ ಶುಭಾಶಯಗಳು.



- ಡಿ.ಎಲ್. ನಾಗರಾಜ್, ಹರಪನಹಳ್ಳಿ

ಸೆ.20.2006ರ 'ಲಂಕೇಶ್' ಸಂಚಿಕೆಯ ಕಂಡಹಾಗೆಯಲ್ಲಿ ಭಟ್ಕಳದಂತಹ ಸೂಕ್ಷ್ಮ ಊರಿನಲ್ಲಿ "ರಾತ್ರಿ 9 ಗಂಟೆಯ ಸಮಯದಲ್ಲಿ ಅದೂ ನಿರ್ಜನವಾದ ರಸ್ತೆಯಲ್ಲಿ ಬಸ್ಸಿಗಾಗಿ ಕಾಯುತ್ತಿದ್ದೆ" ಎಂದು ಹೇಳಿದ್ದೀರಿ. ನಿಮ್ಮ ಧೈರ್ಯಕ್ಕೆ ಅಭಿನಂದನೆಗಳು. ಆದರೆ ಇದು ನನ್ನಲ್ಲಿ ಭಯ ಮತ್ತು ಆತಂಕವನ್ನು ಸೃಷ್ಟಿಸಿತು. ಕಾರಣ ತಾವು ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಪರವಾಗಿ ಹೋರಾಡುತ್ತಿರುವುದನ್ನು ಸಹಿಸಿಕೊಳ್ಳದೇ ತಮ್ಮ ವಿರುದ್ಧ ಹಲ್ಲು ಮಸೆಯುತ್ತಿರುವ ಒಂದು ದೊಡ್ಡ ಗುಂಪೇ ಇದೆ. ಇದು ತಮಗೂ ಗೊತ್ತಿರುವ ವಿಚಾರವೇ.



ಸುಮಾರು ವರ್ಷಗಳ ಹಿಂದೆ ನಾನು ಗಾಂಧಿಬಜಾರಿನ ರೋಟಿಘರ್ ಹೋಟೆಲಿನಲ್ಲಿ ಕಾರ್ಮಿಕನಾಗಿದ್ದೆ. ಆಗ ಬ್ಯೂಗಲ್‌ಪಾರ್ಕ್‌ನಲ್ಲಿ ಒಂಟಿಯಾಗಿ ವಾಕಿಂಗ್ ಬರುತ್ತಿದ್ದ ಲಂಕೇಶ್‌ರವರನ್ನು ನೋಡಿ ಆಶ್ಚರ್ಯವಾಗುತ್ತಿತ್ತು, ಆದರೆ ತಮ್ಮ ನಡವಳಿಕೆ ಆಶ್ಚರ್ಯದ ಜೊತೆ ದಿಗ್ಭ್ರಮೆಯನ್ನು ಉಂಟುಮಾಡಿದೆ. ತಾವು ದಯಮಾಡಿ ಎಲ್ಲೇ ಹೋದರೂ ತಮ್ಮ ಬೆಂಗಾವಲಿಗೆ ಯಾರನ್ನಾದರೂ ಕರೆದುಕೊಂಡು ಹೋಗುವುದು ಲೇಸು.

ಈ ರಾಜ್ಯದ ಮೂಲೆಮೂಲೆಯಲ್ಲಿಯೂ ನಿಮ್ಮ ಅಭಿಮಾನಿ ವರ್ಗವಿದೆ. ಅವರು ತಮಗೆ ಯಾವ ರೀತಿಯ ಸಹಾಯ ಮಾಡಲು ಸಹಾ ಸಿದ್ಧರಿದ್ದಾರೆ. ಇದರ ಅಗತ್ಯ ತಮಗಿಲ್ಲದೇ ಇದ್ದರೂ ನಿಮ್ಮ ಅಗತ್ಯ ನಮಗಿದೆ.


-ಭಾಷ ಹಂಚಿನಮನೆ, ಶಿವಮೊಗ್ಗ

ಹೊಸ ತೆರೆ

ಕವಿತಾರವರ 'ತನನಂ ತನನಂ' ತೇಲಿಬಂದ ದಾರಿ ತುಂಬ ಚೆನ್ನಾಗಿ ಮೂಡಿಬರುತ್ತಿದೆ. ಕವಿತಾರ ಫಿಲಂ ಮೇಕಿಂಗ್ ಶೈಲಿಯನ್ನು ಓದಿ ನಮಗೆ ತುಂಬ ಮೆಚ್ಚುಗೆಯಾಗಿದೆ. ನಿರೂಪಣೆಯೂ ಉತ್ತಮವಾಗಿದೆ. ಚಿತ್ರ ಬಿಡುಗಡೆಯ ವೇಳೆ ನಿರ್ಮಾಪಕರು ಪ್ರಚಾರಕ್ಕಾಗಿ ತುಂಬ ಹಣ ಖರ್ಚು ಮಾಡುತ್ತಾರೆ. ಈ ಧಾರಾವಾಹಿಯನ್ನು ಚಿಕ್ಕ ಬುಕ್‌ಲೆಟ್ ಮಾಡಿ ಉಚಿತವಾಗಿ ಹಂಚಿದರೆ ಅದು ಅರ್ಥಪೂರ್ಣ ಪ್ರಚಾರವಾಗಲಿದೆ.

-ವಿಜಯ್ ಅಮೃತರಾಜ್, ಅಡ್ವೋಕೇಟ್, ಕೊಪ್ಪಳ

ಗೀತಾಳನ್ನು ನೋಡಿದಾಗ....



"ಇಷ್ಟು ಬೇಗ ಮದುವೆಯಾಗಬೇಕೆ? ಇದು ಮದುವೆಯಾಗುವ ಸಮಯವೇ? ಅಥವಾ ನಾನು ಸ್ಟಾರ್‌ಆಗಿ ಎಸ್ಟಾಬ್ಲಿಷ್ ಆದ ನಂತರ ಮದುವೆಯಾಗಬೇಕೆ....? ಇಂತಹ ಯಾವುದೇ ಗೊಂದಲಗಳು ಮೂಡಲೇ ಇಲ್ಲ, ಕಾರಣ ನಾನು ಮೊದಲಿನಿಂದಲೂ ಅಪ್ಪಾಜಿ ಮತ್ತು ಅಮ್ಮನ ಮಾತಿಗೆ ಬೆಲೆ ಕೊಡುತ್ತಿದ್ದವನು. ಅವರು ಏನೇ ಹೇಳಿದರೂ ನನ್ನ ಒಳ್ಳೇದಕ್ಕೆ ಹೇಳುತ್ತಾರೆ ಎಂದು ನಂಬಿದ್ದವನು. ಹೀಗಾಗಿ "ಬೆಂಗಳೂರಿಗೆ ಹೋದಾಗ ಆ ಹುಡುಗಿಯನ್ನು ನೋಡಿಕೊಂಡು ಬಾ" ಎಂದು ಅಮ್ಮ ಹೇಳಿದಾಗ "ಓ.ಕೆ" ಅಂತ ಹೊರಟೆ.

ಅಂದು ನಾನು ನೋಡಿದ ಹುಡುಗಿ ಬೇರೆ ಯಾರೂ ಅಲ್ಲ, ಆಕೆ ಬಂಗಾರಪ್ಪನವರ ಮಗಳು ಗೀತಾ.

ಅವರ ಮನೆಯಲ್ಲಿ ಅಲ್ಲಿಯ ತನಕ ನನಗೆ ವಸಂತ್ ಬಿಟ್ಟರೆ ಬೇರೆ ಯಾರ ಪರಿಚಯವೂ ಇರಲಿಲ್ಲ. ಈ ವಸಂತ್ ಆ ನಂತರ ಸಿನಿಮಾಕ್ಕೆ ಬಂದು ಕುಮಾರ್ ಬಂಗಾರಪ್ಪ ಎಂದು ಮರುನಾಮಕರಣಗೊಂಡರು. ವಸಂತ್ ನಾನು ಕಲಿತ ಫಿಲ್ಮ್ ಇನ್‌ಸ್ಟಿಟ್ಯೂಟ್‌ನಲ್ಲೇ ಕಲಿತಿದ್ದರು. ಅವರು ನನಗಿಂತ ಸೀನಿಯರ್ ಆಗಿದ್ದರೂ ಅವರನ್ನು ಚೆನ್ನಾಗಿ ಬಲ್ಲವನಾಗಿದ್ದೆ. ಒಳ್ಳೆ ಸ್ನೇಹಿತರಾಗಿದ್ದ ನಾನು ಮತ್ತು ವಸಂತ್ ಮದ್ರಾಸಿನಲ್ಲಿ ಎಷ್ಟೋ ಬಾರಿ ಸಿನಿಮಾಗಳಿಗೆ ಮತ್ತು ರೆಸ್ಟೋರೆಂಟ್‌ಗಳಿಗೆ ಹೋಗಿದ್ದೆವು. ಹಲವಾರು ಬಾರಿ ವಸಂತ್ ನಮ್ಮ ಮನೆಗೂ ಬಂದಿದ್ದರು.

ಆದರೆ ವಸಂತ್‌ಗೆ ಮೂರು ಜನ ತಂಗಿಯರು ಇದ್ದಾರೆ, ಮಧು ಎಂಬ ಸಹೋದರ ಇದ್ದಾರೆ ಎಂಬುದು ನನಗೆ ಗೊತ್ತೇ ಇರಲಿಲ್ಲ. ಯಾಕೆಂದರೆ ಆ ವಿಷಯದ ಬಗ್ಗೆ ನಾನು ಅಷ್ಟೇನೂ ತಲೆ ಕೆಡಿಸಿಕೊಂಡಿರಲಿಲ್ಲ. ನನ್ನ ಮತ್ತು ವಸಂತ್ ಸ್ನೇಹ ಎಂತಹದ್ದೆಂದರೆ, ನನ್ನ ಅಪ್ಪಾಜಿ ದೊಡ್ಡ ನಟ ಎಂದು ಗೊತ್ತಿದ್ದರೂ ಆ ವಿಷಯದ ಬಗ್ಗೆ ಆತ ಹೆಚ್ಚು ಮಾತನಾಡುತ್ತಿರಲಿಲ್ಲ.

ಅದಕ್ಕೂ ಹಿಂದೆ, ಬಂಗಾರಪ್ಪನವರನ್ನು ಒಮ್ಮೆ ಭೇಟಿಯಾಗಿದ್ದೆ. ಅವರೊಮ್ಮೆ ಮದರಾಸಿಗೆ ಬಂದಾಗ ನಮ್ಮ ಮನೆಗೂ ಬಂದಿದ್ದರು. ಆಗ ಅವರನ್ನು ವಿಮಾನ ನಿಲ್ದಾಣದಿಂದ ಮನೆಗೆ ಕರೆದುಕೊಂಡು ಬರಲು ಸ್ವತಃ ನಾನೇ ಹೋಗಿದ್ದೆ. ನಮ್ಮ ಮನೆಗೆ ಬಂದು, ನಮ್ಮ ಆತಿಥ್ಯ ಸ್ವೀಕರಿಸಿ, ಎಲ್ಲರೊಂದಿಗೆ ಹರಟೆ ಹೊಡೆದು ಅವರು ವಾಪಾಸ್ಸು ಬೆಂಗಳೂರಿಗೆ ಹೋಗಿದ್ದರು. ಆದರೆ ಇದೆಲ್ಲ ನಡೆದದ್ದು ನಾನು ಕಾಲೇಜು ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ, ಆನಂತರ ಅವರ ಮಗ ವಸಂತ್ ನನ್ನ ಸ್ನೇಹಿತ ಆಗಿದ್ದು ಬಿಟ್ಟರೆ ನಮ್ಮ ಸಂಸಾರಗಳ ನಡುವೆ ಯಾವ ಸಂಬಂಧವೂ ಇರಲಿಲ್ಲ.

ಪೋತೇದಾರ್ ಅಂತ ಒಬ್ಬ ಸಂಬಂಧಿ ಇದ್ದರು. ಅವರು ಬಂಗಾರಪ್ಪನವರ ಕುಟುಂಬಕ್ಕೆ ತುಂಬಾ ಬೇಕಾದವರಾಗಿದ್ದರು. ಅವರು ಒಂದು ದಿನ ನನ್ನ ಅಮ್ಮನ ಬಳಿ ಬಂದು "ಬಂಗಾರಪ್ಪನವರ ಮಗಳನ್ನು ನಿಮ್ಮ ಮನೆ ಸೊಸೆಯಾಗಿ ಯಾಕೆ ತರಬಾರದು?" ಎಂದು ಕೇಳಿದರಂತೆ. ಅಲ್ಲಿಯತನಕ ನಮ್ಮ ಮನೆಯವರಾಗಲಿ, ಬಂಗಾರಪ್ಪನವರ ಮನೆಯವರಾಗಲಿ ನಾವು ಬೀಗರಾಗುವ ಬಗ್ಗೆ ಆಲೋಚನೆಯನ್ನೇ ಮಾಡಿರಲಿಲ್ಲ, ಪೋತೇದಾರ್ ಅವರು ಆ ಸಲಹೆ ನೀಡಿದ ನಂತರವೇ ಅಮ್ಮ "ಪ್ರೊಟ್ಯೂಸ್ವಾಮಿ, ಆ ಹುಡುಗಿಯನ್ನು ನೀನು ಒಮ್ಮೆ ಯಾಕೆ ನೋಡ ಬಾರದು?" ಎಂದು ಹೇಳಿದ್ದು.

ಅಮ್ಮ ಹೇಳಿದ್ದಂತೆ, ಹುಡುಗಿಯನ್ನು ನೋಡಿಕೊಂಡು ಬಂದ ನಾನು "yes" ಎಂದೆ. ಆದರೆ ಬೇರೆ ಮಾತುಕತೆ ಇನ್ನೂ ಆಗಿರಲಿಲ್ಲವಾದ್ದರಿಂದ ಈ ವಿಷಯ ನನ್ನ, ನಮ್ಮ ಕುಟುಂಬದ ಇತರರಿಗೆ ಗೊತ್ತಿರಲಿಲ್ಲ, ಅಷ್ಟೇ ಅಲ್ಲ, ಬಂಗಾರಪ್ಪನವರ ಕುಟುಂಬದ ಇತರರಿಗೂ ಗೊತ್ತಿರಲಿಲ್ಲ.

ಇದಾದ ಹಲವು ದಿನಗಳ ನಂತರ ನಾನು ಮೈಸೂರಿಗೊಮ್ಮೆ ಬಂದಿದ್ದಾಗ,



ಮೈಸೂರಿಗೂ ಭೇಟಿ ನೀಡಿದ್ದೆ ಅಲ್ಲಿ ಅಪ್ಪಾಜಿಯವರ ಮ್ಯೂಸಿಕಲ್ ನೈಟ್ ಕಾರ್ಯಕ್ರಮವಿತ್ತು, ಅವತ್ತು ನಾನು ಕೂಡ ಸ್ಟೇಜ್ ಮೇಲೆ ಹಾಡು ಹೇಳಿ ಡ್ಯಾನ್ಸ್ ಮಾಡುವುದಿತ್ತು, ತೆರೆಯ ಹಿಂದೆ ನಿಂತ ನಾನು ಅಪ್ಪಾಜಿ ಹಾಡುವಾಗ ಜನರು ಕುಣಿದು ಕುಪ್ಪಳಿಸುತ್ತಿದ್ದದನ್ನು ನೋಡಿ ಆನಂದಪಟ್ಟೆ. ಇದೆಲ್ಲ ನನಗೆ ಹೊಸ ಅನುಭವವಾಗಿದ್ದರಿಂದ ಎಲ್ಲವನ್ನೂ ಕುತೂಹಲದಿಂದ ಗಮನಿಸುತ್ತಿದ್ದೆ...... ಹೀಗೆ ಜನರ ಪ್ರತಿಕ್ರಿಯೆಯನ್ನು ನೋಡುತ್ತಿದ್ದಾಗ ನನಗೆ ಅಚ್ಚರಿ ಆಯಿತು. ಏಕೆಂದರೆ ಆ ಜನಸ್ತೋಮದ ಮೊದಲ ಸಾಲಿನಲ್ಲಿ ಬಂಗಾರಪ್ಪನವರ ಕುಟುಂಬದ ಸದಸ್ಯರು ಕುಳಿತಿದ್ದರು.

> ಮದುವೆಯ ಬಗ್ಗೆ ಎಲ್ಲರಂತೆ ನನಗೂ ನನ್ನದೇ ಆದ ಕನಸುಗಳಿದ್ದವು. ಹಾಗೆಯೇ ನನ್ನ ವೃತ್ತಿ ಜೀವನದ ಬಗ್ಗೆ ಆಶಯಗಳು ಕೂಡ ನನಗಿದ್ದವು. ಆದರೆ ಇವೆರಡೂ ಒಮ್ಮೆಲೆ ನನಗೆ ಎದುರಾಗಿದ್ದವು.


ಅದು ನನ್ನ ಮೊದಲ ಸ್ಟೇಜ್ ಶೋ ಆಗಿತ್ತಾದ್ದರಿಂದ ಸಹಜವಾಗಿಯೇ ನಾನು ನರ್ವಸ್ ಆಗಿದ್ದೆ. ಅದರಲ್ಲೂ ಬಂಗಾರಪ್ಪ ಮತ್ತು ಅವರ ಶ್ರೀಮತಿ, ಗೀತಾ, ವಸಂತ್, ಮಧು, ಸುಜಾತಕ್ಕ ಅನಿತಾ ಎಲ್ಲರೂ ಮುಂದಿನ ಸಾಲಿನಲ್ಲೇ ಕುಳಿತಿರುವು ದನ್ನು ಕಂಡ ನಂತರ ಮತ್ತಷ್ಟು ಗಾಬರಿಗೊಂಡೆ.

ನಾನು ಸ್ಟೇಜಿಗೆ ಬಂದಾಗ ಎದುರುಗಡೆಯಿದ್ದ ಜನಸ್ತೋಮವನ್ನು ನೋಡಿ ದಂಗಾದೆ. ನಿಜವಾಗಿಯೂ ಹಾಡಿ ಕುಣಿಯಲು ನನ್ನಿಂದ ಸಾಧ್ಯವಾಗುತ್ತದೆಯೇ ಎಂದು ಅಂಜಿಕೊಂಡೆ. ನಾನು ಏನು ಹಾಡಬೇಕು? ಹೇಗೆ ಕುಣಿಯಬೇಕು ಎಂಬುದೇ ಮರೆತಂತಾಯಿತು. ಆಗ ನನ್ನ ಅಪ್ಪಾಜಿ ತಮ್ಮ ಕೆಲಸ ಗಳಲ್ಲಿ ಎಲ್ಲವನ್ನೂ ಮರೆತು ಧ್ಯಾನ ದಿಂದ ಇರುತ್ತಿದ್ದ ಕ್ಷಣ ಗಳನ್ನು ನೆನಪಿಸಿಕೊಂಡೆ. ಅದರಿಂದ ಸ್ಪೂರ್ತಿ ಪಡೆದು ನನ್ನ ಎದುರಿಗಿದ್ದ ಜನ ಸ್ತೋಮ ವನ್ನು ಮರೆತು ಸಂಪೂರ್ಣ ವಾಗಿ ನನ್ನ ಹಾಡಿನ ಬಗ್ಗೆ ಏಕಾಗ್ರತೆ ಯಿಂದ ಚಿಂತಿಸಿದೆ.


ನಿರೂಪಣೆ: ಸದಾಶಿವ ಶೆಣೈ

21

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನಾನು ಹಾಡಿದ್ದೇ ತಡ ಜನ ಹುಚ್ಚೆದ್ದು ಕುಣಿದರು. ನನ್ನ ಹಾಡಿಗೂ ಅಪ್ಪಾಜಿ ಹಾಡಿಗೆ ಕುಣಿದಂತೆಯೇ ಜನ ಕುಣಿಯುತ್ತಾರೆಂದು ನಾನು ಊಹಿಸಿರಲಿಲ್ಲ, ಆದರೆ ಜನರ ಪ್ರತಿಕ್ರಿಯೆ ಕಂಡು ಸಂತೋಷವಾಯಿತು. ಅದು ನನ್ನ ಮೊದಲ ಸ್ಟೇಜ್ ಶೋ.... ಆ ದಿನ.. ಆ ಕ್ಷಣ.... ನಾನು ಎಂದೆಂದಿಗೂ ಮರೆಯಲು ಸಾಧ್ಯವೇ ಇಲ್ಲ.



ಶೋ ಮುಗಿದ ನಂತರ ನಾವು ಮತ್ತು ಬಂಗಾರಪ್ಪನವರ ಕುಟುಂಬದವರು ಜೊತೆಗೇ ಊಟ ಮಾಡಿದೆವು. ಅದೊಂಥರಾ ಫ್ಯಾಮಿಲಿ ಗೆಟ್ ಟುಗೆದರ್ ಥರ ಇತ್ತು. Later on ನಾನು ಮತ್ತು ವಸಂತ್ ಕಾರ್ ಡ್ರೈವ್ ಮಾಡಿಕೊಂಡು ಮೈಸೂರಿನಿಂದ ಬೆಂಗಳೂರಿಗೆ ವಾಪಸ್ಸು ಬರುತ್ತಿದ್ದಾಗ "ನಾವೆಲ್ಲಾ ಮೈಸೂರಿಗೆ ಯಾಕೆ ಬಂದಿದ್ದು ಗೊತ್ತಾ?" ಎಂದು ವಸಂತ್ ನನ್ನನ್ನು ಪ್ರಶ್ನಿಸಿದರು. ನನಗೆ ನಿಜವಾಗಿಯೂ ಗೊತ್ತಿರಲಿಲ್ಲ, "ಯಾಕೆ?" ಅಂತ ನಾನು ಕೇಳಿದಾಗ, "ನನ್ನ ಸಹೋದರಿಯೊಬ್ಬಳು ನಿಮ್ಮ ಮನೆ ಬೆಳಗಲು ಬರುತ್ತಾಳೆ" ಎಂದು ಉತ್ತರಿಸಿದ. ನಿಜ ಹೇಳಬೇಕೆಂದರೆ ಆ ಮೂವರಲ್ಲಿ ಯಾರನ್ನು ನಾನು ಮದುವೆ ಆಗಲಿದ್ದೇನೆ ಎಂದು ವಸಂತ್‌ಗೇ ಗೊತ್ತಿರಲಿಲ್ಲ!

ಆಮೇಲೆ, ಗೀತಾಳನ್ನು ನಾನು ಒಪ್ಪಿಕೊಂಡಿದ್ದು ಗೊತ್ತಾದ ನಂತರ ವಸಂತ್ ಮೊದಲ ಬಾರಿಗೆ ನನ್ನನ್ನು "ಭಾವಾ....." ಎಂದು ಕರೆದ. ಆತ್ಮೀಯ ಸ್ನೇಹಿತನಾಗಿದ್ದ ವಸಂತ್ ನನ್ನನ್ನು ಭಾವ ಎಂದು ಕರೆದಾಗ ಒಂಥರಾ ಮುಜುಗರವಾಯಿತು. "ದಯವಿಟ್ಟು ನನ್ನನ್ನು ಭಾವ ಅಂತ ಕರೆಯಬೇಡ ವಸಂತ್. ನಾನು ನೀನು ಸ್ನೇಹಿತರಾಗಿಯೇ ಇರೋಣ" ಎಂದು ಆತನಿಗೆ ಹೇಳಿದೆ. ಆದಾದ ನಂತರ ವಸಂತ್ ನನ್ನೊಂದಿಗೆ ಸ್ನೇಹಿತನಂತೆಯೇ ಇದ್ದ, ಆದರೂ ಆಗೊಮ್ಮೆ, ಈಗೊಮ್ಮೆ ನನ್ನನ್ನು ರೇಗಿಸಲು "ಭಾವ" ಎಂದು ಕರೆಯುತ್ತಿದ್ದ.

ನನ್ನ ಮತ್ತು ಗೀತಾ ಮದುವೆಯ ಒಪ್ಪಂದ ಎರಡೂ ಕುಟುಂಬಗಳ ಸದಸ್ಯರ ಮಧ್ಯೆ ನಡೆಯಿತು. ಇದಾದ ತಕ್ಷಣ ನಾನು ಮತ್ತೆ ಮದ್ರಾಸಿಗೆ ಹೋದೆ. ಯಾಕೆಂದರೆ ಆಗ ನನ್ನ ಮೊದಲನೆ ಸಿನಿಮಾ ಶುರುವಾಗುತ್ತಿತ್ತು, ಅದಕ್ಕೆ ಬೇಕಾದ ತಯಾರಿಗಳು ಮದ್ರಾಸಿನಲ್ಲಿ ನಡೆಯುತ್ತಿದ್ದವು. ಅಲ್ಲಿ ನಾನು ಕತೆ ಮತ್ತು ಚಿತ್ರಕತೆಯನ್ನು ಕೇಳಿಸಿಕೊಂಡು ಒಪ್ಪಿಗೆ ನೀಡಬೇಕಿತ್ತು, ಹಲವು ತಿಂಗಳಲ್ಲಿ ನನ್ನ ಚೊಚ್ಚಲ ಚಿತ್ರ ಸೆಟ್ಟೇರುವುದು ಖಚಿತವಾಗಿತ್ತು, ಹೀಗಾಗಿ ಒಂದು ಕಡೆ ಮದುವೆಯ ಸಂಭ್ರಮ, ಇನ್ನೊಂದು ಕಡೆ ಹೀರೋ ಆಗುವ ಸಡಗರ.

ಮದುವೆಯ ಬಗ್ಗೆ ಎಲ್ಲರಂತೆ ನನಗೂ ನನ್ನದೇ ಆದ ಕನಸುಗಳಿದ್ದವು. ಹಾಗೆಯೇ ನನ್ನ ವೃತ್ತಿ ಜೀವನದ ಬಗ್ಗೆ ಆಶಯಗಳು ಕೂಡ ನನಗಿದ್ದವು. ನಿಜ ಹೇಳಬೇಕೆಂದರೆ, ಮದುವೆಯ ಬಗ್ಗೆ ಸಂತೋಷ, ಪ್ರಥಮ ಸಿನಿಮಾ ಬಗ್ಗೆ ಆತಂಕ .... ಎರಡೂ ಭಾವನೆಗಳು ನನ್ನನ್ನು ಒಮ್ಮೆಲೆ ಆವರಿಸಿದ್ದವು.

ಒಂದು ವೇಳೆ ಜನ ನನ್ನನ್ನು ನಾಯಕನಾಗಿ ಸ್ವೀಕರಿಸದಿದ್ದರೆ ನಾನೇನು ಮಾಡಬೇಕು? ಜನ ನನ್ನ ನಟನೆಯನ್ನು ಅಪ್ಪಾಜಿಯ ನಟನೆಗೆ ಹೋಲಿಸುವುದು ಗ್ಯಾರೆಂಟಿ, ಆದರೆ ನಾನು ಅಪ್ಪಾಜಿಯ ತರಹ ನಟಿಸಲು ಸಾಧ್ಯವಿಲ್ಲ, ಹಾಗಾದರೆ ನಾನೇನು ಮಾಡಬೇಕು? ಎಂದೆಲ್ಲ ನಾನು ತುಂಬಾ ಗಂಭೀರವಾಗಿ ಆಲೋಚಿಸಿದೆ. ಆಗಲೇ ನನಗೆ ಗೊತ್ತಾಗಿದ್ದು ಒಬ್ಬ ಜನಪ್ರಿಯ ನಟನ ಮಗನಾಗಿ ಹುಟ್ಟುವುದು ಬರೀ ವರ ಮಾತ್ರವಲ್ಲ ಶಾಪವೂ ಹೌದು ಎಂದು. ಆದರೆ ನಾನು ನಟನಾಗಿ ವಿಫಲಗೊಂಡಿದ್ದರೂ ನಾನು ಪಶ್ಚಾತ್ತಾಪ ಪಡುತ್ತಿರಲಿಲ್ಲ, ಏಕೆಂದರೆ ಡಾ. ರಾಜ್‌ಕುಮಾರ್ ಅವರ ಮಗನಾಗಿ ಹುಟ್ಟಿದ್ದೇನಲ್ಲ ಎಂಬ ಸಂತೋಷವಂತೂ ಇದ್ದೇ ಇರುತ್ತಿತ್ತು.

ವಾಸ್ತವವಾಗಿ, ನಾನು ನಾಯಕ ನಟ ಆಗಲೇಬೇಕು ಎಂದು ಹಠ ಹಿಡಿದವನಲ್ಲ, ಆದ್ದರಿಂದ, ಒಂದು ವೇಳೆ ನಾನು ನಟನಾಗಿ ಫ್ಲಾಪ್ ಆದರೆ ಯಾವುದಾದರೊಂದು ಇಂಡಸ್ಟ್ರಿ ಪ್ರಾರಂಭಿಸ ಬಹುದು ಎಂದು ನನಗೆ ನಾನೇ ಧೈರ್ಯ ಹೇಳಿಕೊಂಡೆ. ಆದರೆ ನಾನು ಗೆದ್ದೇ ಗೆಲ್ಲುತ್ತೇನೆ ಎಂಬ ಆತ್ಮವಿಶ್ವಾಸ ನನ್ನಲ್ಲಿತ್ತು.

ಆ ಸಂದರ್ಭದಲ್ಲೇ ನಾನು ಮತ್ತು ನನ್ನ ಫ್ರೆಂಡ್ಸ್ ಮದ್ರಾಸಿನಿಂದ ಮೈಸೂರಿಗೆ ದಸರಾ ನೋಡಲು ಬಂದಿದ್ದು, ಆಗಲೇ ಗೀತಾಳ ಸಮೇತ ಬಂಗಾರಪ್ಪನವರ ಕುಟುಂಬದ ಎಲ್ಲರೂ ಮೈಸೂರಿಗೆ ಬಂದಿದ್ದು, ಅಲ್ಲಿ ಏನು ನಡೆಯಿತು? ಹೇಗೆ ಎಂಜಾಯ್ ಮಾಡಿದೆ? ಎಂಬುದನ್ನು ನಿಮಗೆ ಮುಂದಿನ ವಾರ ಹೇಳುತ್ತೇನೆ. ಸದ್ಯಕ್ಕೆ ನೀವೆಲ್ಲಾ ದಸರಾಕ್ಕೆ ಹೋಗಿ ಎಂಜಾಯ್ ಮಾಡ್ಕೊಂಡು ಬನ್ನಿ.

(ಮುಂದುವರೆಯುವುದು)

ಶಾಟ್ ಕಟ್

ಎದೆಯೆತ್ತರಕೆ ಬೆಳೆದಳು!

ಅಯ್ಯಯ್ಯ... ಮಸಾಬಾ ಹುಟ್ಟಿ ಎಷ್ಟು ಉದ್ದ ಬೆಳೆದಿದ್ದಿಯಲ್ಲ...

ನಾವು ಸ್ಕೂಲ್‌ನಲ್ಲಿ ವಿವ್ ರಿಚರ್ಡ್ಸ್‌ನ ಸ್ಟ್ರೇಟ್ ಡ್ರೈವ್‌ಗಳನ್ನು ಅನುಕರಿಸಲು ತಿಣುಕಾಡುತ್ತಿದ್ದಾಗ ಈ ಮಸಾಬಾ ಇನ್ನೂ ಅಂಬೆಗಾಲಿಡುತ್ತಿತ್ತು,



ಈಗ ನೀನಾ ಗುಪ್ತಾಳ ಎದೆಯೆತ್ತರಕೆ ಬೆಳೆದು ನಿಂತಿದ್ದಾಳೆ ಈ ಕೃಷ್ಣಸುಂದರಿ... ವಿವ್ ರಿಚರ್ಡ್ಸ್ ಮತ್ತು ನಟಿ ನೀನಾ ಗುಪ್ತಾರ ಲವ್ ಇನ್ನಿಂಗ್ಸ್ ವಿಜಯದ ನಗೆ ಕಂಡಿದ್ದು ಈ ಮಸಾಬಾಳ ಮುಗುಳ್ನಗೆಯಲ್ಲಿ....

ಮಸಾಬಾ ಕ್ರೀಡೆಯತ್ತಲೋ, ಸಿನಿಮಾದತ್ತಲೋನೊ... ಆಕೆಯ ಕಣ್ಣು ಇಂಟರ್ ನ್ಯಾಷನಲ್ ಮಾಡೆಲಿಂಗ್‌ನತ್ತ!!

ಭಿನ್ನ ವಿಭಿನ್ನ geneಗಳ ಸಮಾಗಮದಿಂದ ಸೃಷ್ಟಿಗೊಂಡ ಈ ಚೆಲುವಿಗೆ ಗುಡ್‌ಲಕ್...

ಅಂದ ಕಾಲತ್ತಿಲ್ ಇಂದ ಕಾಲತ್ತಿಲ್!

ಸುರಸುಂದರಿ ಸೋಫಿಯಾ ಲಾರೆನ್‌ಗೆ ವಯಸ್ಸೇ ಆಗಲ್ವಾ?



2007ರ ಪ್ರಸಿದ್ಧ ಪಿರೆಲ್ಲಿ ಕ್ಯಾಲೆಂಡರ್‌ಗೆ ಈ ಸೋಫಿಯಾ ಲಾರೆನ್ ಕೂಡ ಒಬ್ಬ ರೂಪದರ್ಶಿ! ಅಲ್ಲೂ ಹೌದೋ ಅಲ್ಲವೋ ಎಂಬಷ್ಟು ಕಡಿಮೆ ಉಡುಗೆಯಂತೆ!

ಪಿರೆಲ್ಲಿ ಕ್ಯಾಲೆಂಡರ್‌ಗೆ ಆರ್ಡರ್ ಮಾಡ್ತೀರಾ?

ಅಂದಂತೆ ಸೋಫಿಯಜ್ಜೀಗೀಗ ವಯಸ್ಸು 72!

ಕೆಟ್ಟ ಮೇಲೆ ಬುದ್ಧಿ!

'ಗಂಡ ಹೆಂಡತಿ' ಚಿತ್ರ(?)ದ ಬಗ್ಗೆ ಏನು ಹೇಳ್ತಿರಾ? ಎಂದು ಕೇಳಿದರೆ ಈ ಹುಡುಗಿ ಗಾಬರಿ ಬಿದ್ದವಳಂತೆ ಹೇಳ್ತಾಳೆ 'ಆ ಚಿತ್ರದ ವಿಷಯ ಮಾತ್ರ ಕೇಳಲೇಬೇಡಿ.... ನನಗೆ ಮಾತೇ ಹೊರಡಲ್ಲ...'

ಇದು 'ಗಂಡ ಹೆಂಡತಿ'ಯಲ್ಲಿ ಉನ್ಮಾದದ ನಗ್ನೋಮಯ ದೃಶ್ಯಗಳಲ್ಲಿ ನಲಿದ (ನರಳಿದ!) ಸಂಜನಾ ಎಂಬ ಪೆದ್ದು ನಟಿಯ ಹೊಸ ವರಸೆ!

ಶಾಟ್‌ಕಟ್ ನಲ್ಲಿ ಆ ಸಿನಿಮಾ ಅನೌನ್ಸ್ ಆದಾಗಿನಿಂದ ನೂರು ಸಲ ಬಡಕೊಂಡೆವು; ಇದೊಂದು ಬ್ಲೂ ಫಿಲ್ಮ್ ಆಗಲಿದೆ ಎಂದು....

ಈಗಲಾದರೂ ಬುದ್ಧಿ ಬಂತಾ ಸಂಜೂ...



R.B.P. LANKESH, Kannada Weekly   Price Rs. 10/-   4-10-2006   RNI No. KARKAN2005/14648   Regd.No.KA/BG(S)/2036/2005

'ಅಕ್ಕ'ದಲ್ಲಿ ರಮ್ಯಳಿಗೆ ಪುನರ್ಜನ್ಮ?

-ಶೆಣೈ

"ಅಮೆರಿಕದಲ್ಲಿ ನಾನು ಪುನರ್ಜನ್ಮ ಪಡೆದು ಬಂದಿದ್ದೇನೆ ನಿಮಗೆ ಆಶ್ಚರ್ಯವಾಗುತ್ತಿದೆಯೇ?" ಎಂಬ ಮಾತಿನೊಂದಿಗೆ ನಮ್ಮನ್ನು ಎದುರುಗೊಂಡಿದ್ದು ಯಾರು ಗೊತ್ತೇ? ಅಪ್ಪಟ ಕನ್ನಡದ ಹುಡುಗಿ, ಮಂಡ್ಯದ ಬೆಡಗಿ ರಮ್ಯಾ! ಈಕೆ ಮೊನ್ನೆ ಅಮೆರಿಕಾದ ಮೇರಿಲ್ಯಾಂಡ್ ರಾಜ್ಯದ ಬಾಲ್ಟಿಮೋರ್‌ನಲ್ಲಿ ನಡೆದ ನಾಲ್ಕನೆಯ ವಿಶ್ವಕನ್ನಡ ಸಮ್ಮೇಳನದಲ್ಲಿ ಭಾಗವಹಿಸಲು ಬಂದಾಗ ಹೇಳಿದ ಮಾತುಗಳಿವು.

ಈ ಹುಡುಗಿ ಹೀಗೇಕೆ ಕೇಳುತ್ತಿದ್ದಾಳೆ? ಎಂದು ಅರಿವಾಗಬೇಕಾದರೆ ಕೆಲವು ಕ್ಷಣಗಳೇ ಹಿಡಿಯಿತು. ಆಮೇಲೆ ಗೊತ್ತಾಯಿತು, 'ರಮ್ಯಾ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾಳೆ' ಎಂಬ ಸುದ್ದಿ ಇತ್ತೀಚೆಗೆ ಕನ್ನಡದ ಪತ್ರಿಕೆಗಳಲ್ಲಿ ಬಂದಿದ್ದನ್ನು ಆಕೆ ಅಲ್ಲಿ ಪ್ರಸ್ತಾಪಿಸಿದ್ದಳು. ಅಂದರೆ ಇನ್ನೂ ಆ ಗಾಳಿ ಸುದ್ದಿ ಬಗ್ಗೆ ಆಕೆ ತುಂಬಾ ತಲೆ ಕೆಡಿಸಿಕೊಂಡಂತಿತ್ತು. ಅಥವಾ ಆ ಶಾಕ್‌ನಿಂದ ಆಕೆ ಇನ್ನೂ ಚೇತರಿಸಿಕೊಂಡಿರಲಿಲ್ಲವೇನೋ? ಅಥವಾ ಇದೊಂದು ರಾಷ್ಟ್ರೀಯ ದುರಂತದ ಸುದ್ದಿ ಎಂಬಂತೆ ಅದನ್ನು ಪ್ರಾಜೆಕ್ಟ್ ಮಾಡಲು ಆಕೆ ಹೊರಟ್ಟಿದ್ದಳೇ?

ಅದೇನೇ ಇರಲಿ, "ಕಳೆದ ವರ್ಷವೂ ಇದೇ ತರಹ ಗಾಳಿ ಸುದ್ದಿ ಹಬ್ಬಿಸಿದ್ದರು. ಈ ವರ್ಷವೂ ಮತ್ತೆ ನನ್ನ ಆತ್ಮಹತ್ಯೆಯ ಸುದ್ದಿ ಹಬ್ಬಿಸಿದ್ದಾರೆ. ಹೀಗೆ ಸಾವಿನ ಸುದ್ದಿ ಹಬ್ಬಿಸಿದರೆ ಆಯುಶ್ಯ ಜಾಸ್ತಿಯಾಗುತ್ತದೆಯಂತಲ್ಲವೇ?" ಎಂದು ಹೇಳುತ್ತಾ ರಮ್ಯ ಗೊಳ್ಳನೆ ನಕ್ಕಳು. "ಇಂತಹ ಸುದ್ದಿಯನ್ನು ಯಾರು ಹಬ್ಬಿಸುತ್ತಾರೆ? ಯಾಕೆ ಹಬ್ಬಿಸುತ್ತಾರೆ? ಎಂಬುದೂ ನನಗೆ ಗೊತ್ತು" ಎಂದು ರಮ್ಯಾ ಮಾರ್ಮಿಕವಾಗಿ ಹೇಳಿದಳು. "ನನ್ನ ಮಗಳು ತುಂಬಾ ಸ್ಟ್ರಾಂಗ್. ಆಕೆ ಆತ್ಮಹತ್ಯೆ ಮಾಡಿಕೊಳ್ಳುವ ಹುಡುಗಿಯೇ ಅಲ್ಲ" ಎಂದು ಆಕೆಯ ಪಕ್ಕದಲ್ಲೇ ಇದ್ದ ಆಕೆಯ ತಾಯಿ ಸೇರಿಸಿದರು. ಎಷ್ಟಾದರೂ ಮಂಡ್ಯದ ಹುಡುಗಿ ತಾನೇ? ಎಂದು ನಾವು ಸುಮ್ಮನಾದೆವು.



ಕೆಂಪು ಸೀರೆಯಲ್ಲಿ ರಾರಾಜಿಸುತ್ತಿದ್ದ ರಮ್ಯಾ ವಿಶ್ವ ಕನ್ನಡ ಸಮ್ಮೇಳನದ ಎರಡನೇ ದಿನ ಆಗಮಿಸಿದ್ದಳು. ಅದೂ ಹಲವು ತಕರಾರುಗಳನ್ನು ಮಾಡಿದ ನಂತರವೇ. "ನನ್ನ ತಾಯಿಗೆ executive class ಟಿಕೇಟ್ ಕೊಡದಿದ್ದರೆ ನಾನು ಅಮೆರಿಕಕ್ಕೆ ಬರುವುದಿಲ್ಲ" ಎಂದು ಲಂಡನ್‌ನಿಂದಲೇ ಸಮ್ಮೇಳಣದ ವ್ಯವಸ್ಥಾಪಕರಿಗೆ ಬಾಂಬ್ ಹಾಕಿದ್ದಳು. ಆನಂತರ ಆಕೆ ವಾಷಿಂಗ್‌ಟನ್‌ನ ವಿಮಾನ ನಿಲ್ದಾಣದಲ್ಲಿ ಇಳಿದಾಗ ತನ್ನನ್ನು ಸ್ವಾಗತಿಸಲು ಯಾರೂ ಇರದಿದ್ದರ ಬಗ್ಗೆಯೂ ತರಾಟೆಗೆ ತೆಗೆದುಕೊಂಡಳು.

ಕೆಲವೇ ಕೆಲವು ಸಿನಿಮಾಗಳಲ್ಲಿ ನಟಿಸಿರುವ ಈಕೆಯನ್ನು ಅಮೆರಿಕದ ಕನ್ನಡಿಗರು ಹೇಗೆ ರಿಸೀವ್ ಮಾಡುತ್ತಾರೆ ಎಂಬ ಕುತೂಹಲ ನಮಗಂತೂ ಇತ್ತು. ಆದರೆ ಆಶ್ಚರ್ಯವೆಂದರೆ ಸಮ್ಮೇಳನದ ಸಭಾಂಗಣಕ್ಕೆ ಬರಲು ಆಕೆಗೆ ಸುಮಾರು ಒಂದು ಗಂಟೆ ಸಮಯ ತಗುಲಿತು. ಅಲ್ಲಿದ್ದ ಪ್ರತಿಯೊಬ್ಬರಿಗೂ ಆಕೆಯೊಂದಿಗೆ ಫೋಟೋ, ಶೇಕ್ ಹ್ಯಾಂಡ್, ಆಟೋಗ್ರಾಫ್ ತೆಗೆಸಿಕ್ಕೊಳ್ಳುವುದರ ಬಗ್ಗೆ ಆಸಕ್ತಿ....

ಇದೆಲ್ಲದರಿಂದ ಸಹಜವಾಗಿಯೇ ಖುಷಿಗೊಂಡ ರಮ್ಯ "ಅಮೆರಿಕದಲ್ಲಿ ನನಗೆ ನಿಜವಾಗಿಯೂ ಇಷ್ಟು ದೊಡ್ಡ ಸ್ವಾಗತ ಸಿಗುತ್ತದೆ ಅಂತ ಭಾವಿಸಿರಲಿಲ್ಲ. this is realy great, you know. I am realy thrilled" ಎಂದ ಈ ಕನ್ನಡದ ಕನ್ಯೆ ವೇದಿಕೆಯಿಂದ ಒಂದು ನಿಮಿಷದ ಪುಟ್ಟ ಭಾಷಣ ಮಾಡಿ ಎಲ್ಲರ ಮನ ಗೆದ್ದಳು. ಅದೇ ಸಂದರ್ಭದಲ್ಲಿ 'ಅಮೃತಧಾರೆ' ಸಿನಿಮಾದ ಸೀಡಿಯನ್ನು ಗೃಹ ಸಚಿವ ಎಂ.ಪಿ. ಪ್ರಕಾಶ್ ಬಿಡುಗಡೆ ಮಾಡಿದರು. ಹಾಗೆ ಮಾಡುವಾಗ ರಮ್ಯಾಳನ್ನು ಯದ್ವಾ ತದ್ವಾ ಹೊಗಳಿ ಪ್ರೇಕ್ಷಕರಿಗೆ ಪರಿಚಯ ಮಾಡಿಕೊಟ್ಟರು ಪ್ರಕಾಶ್ ಸಾಹೇಬರು.

ರಮ್ಯಾ ಈ ಸಮಾರಂಭಕ್ಕೆ ಅಂದು ಲಂಡನ್‌ನಿಂದ ಹಾರಿಬಂದಿದ್ದಳು. ಹಾಗೆಯೇ ಸಮಾರಂಭಕ್ಕೆ ಹಾಜರಾದ ರಾತ್ರಿಯೇ ಮತ್ತೆ ಲಂಡನ್‌ಗೆ ವಾಪಾಸ್ಸು ಹಾರಿಹೋದಳು. ಅಂದಹಾಗೆ, ಲಂಡನ್‌ನಲ್ಲಿ ಆಕೆ 'ತನನಂ, ತನನಂ' ಚಿತ್ರದ ಹೀರೊ ಶ್ಯಾಂ ಜೊತೆ ತಮಿಳು ಚಿತ್ರವೊಂದರಲ್ಲಿ ನಟಿಸುತ್ತಿದ್ದಾಳೆ.

'ಕುಮಾರರಾಮ'ನಿಂದ ಐದು ಕೋಟಿ ಲಾಭ!



'ಗಂಡುಗಲಿ ಕುಮಾರರಾಮ' ಚಿತ್ರದಿಂದ ಪಟ್ಟಾಭಿರಾಮ್‌ಗೆ ಕನಿಷ್ಠವೆಂದರೂ ನಾಲ್ಕೈದು ಕೋಟಿ ರೂಪಾಯಿ ನಷ್ಟ ಆಗಿರಬಹುದು. ಆದರೆ ಇದೇ ಚಿತ್ರದಿಂದಾಗಿ ಕೆ.ಸಿ.ಎನ್. ಚಂದ್ರುಗೆ ಐದು ಕೋಟಿ ರೂಪಾಯಿ ಲಾಭವಾಗಿದೆ. ಹೇಗೆ ಗೊತ್ತಾ?

ಈ ಚಿತ್ರದ ಬಿಕೆಟಿ ವಲಯದ ಹಂಚಿಕೆಯನ್ನು ಚಂದ್ರು ಒಂದೂವರೆ ಕೋಟಿ ರೂಪಾಯಿಗಳಿಗೆ ಕೇಳಿದ್ದರು. ಆದರೆ ಪಟ್ಟಾಭಿರಾಮ್ ಅದಕ್ಕೆ ಒಪ್ಪಿರಲಿಲ್ಲ. ಒಂದು ವೇಳೆ ಅವರು ಒಪ್ಪಿದ್ದರೆ, ಚಂದ್ರುಗೆ ಒಂದು ಕೋಟಿ ನಷ್ಟ ಕಟ್ಟಿಟ್ಟ ಬುತ್ತಿಯಾಗಿತ್ತು. ಅದು ಒಂದು ಕೋಟಿ ಆಯಿತು, ಇನ್ನು ನಾಲ್ಕು ಕೋಟಿ ಲಾಭ ಹೇಗಾಯಿತು ಎನ್ನುತ್ತೀರಾ?

ಅದು ಆದದ್ದು ಹೀಗೆ: 'ಕುಮಾರರಾಮ'ನ ಮೊದಲ ವಾರದ ಕಲೆಕ್ಷನ್ ನೋಡಿದ ಕೂಡಲೇ ಚಂದ್ರುರವರು ದರ್ಶನ್ ನಾಯಕನಾಗಿ ನಟಿಸಬೇಕಾಗಿದ್ದ ನಾಲ್ಕು ಕೋಟಿ ರೂಪಾಯಿ ವೆಚ್ಚದ 'ಮದಕರಿ ನಾಯಕ' ಎಂಬ ಐತಿಹಾಸಿಕ ಚಿತ್ರವನ್ನು ಕೂಡಲೇ ಡ್ರಾಪ್ ಮಾಡಿದರು!

ಹಾಗೆ ಮಾಡಿದ್ದರಿಂದ ಅವರಿಗೆ ನಾಲ್ಕು ಕೋಟಿ ರೂಪಾಯಿ ಉಳಿಯಿತು. ಅದಕ್ಕೇ ಇರಬೇಕು, ಇವತ್ತು ಚಂದ್ರು ದಿನನಿತ್ಯ 'ಕುಮಾರರಾಮ'ನ ಜಪ ಮಾಡುತ್ತಿದಾರಂತೆ!

ಪ್ರೇಮ್‌ಗೆ ಮಲ್ಲಿಯಾ?



ಅದ್ದೂರಿ ಮುಹೂರ್ತದೊಂದಿಗೆ ಆರಂಭವಾದ 'ಪ್ರೀತಿ ಏಕೆ ಭೂಮಿ ಮೇಲಿದೆ?' ಸಿನಿಮಾದ ಚಿತ್ರೀಕರಣ ಈಗ ಮಂದಗತಿಯಲ್ಲಿ ಸಾಗುತ್ತಿದೆ. ಇದಕ್ಕೆ ಕಾರಣ ನಾಯಕಿ ತಮನ್ನಾ ಬಗ್ಗೆ ಯಾರಿಗೂ ಅಷ್ಟೊಂದು ಭರವಸೆ ಇಲ್ಲದಿರುವುದು.

ಅದಕ್ಕೇ ಈಗ ಚಿತ್ರದ ಐಟಂ ಸಾಂಗ್‌ಗೆ ಬುಕ್ ಆಗಿದ್ದ ಮಲ್ಲಿಕಾ ಶೆರಾವತ್ ನಾಯಕಿಯ ಪಾತ್ರವನ್ನು ವಹಿಸಲಿದ್ದಾಳೆ ಎಂದು ಸುದ್ದಿ ಕೇಳಿಬರುತ್ತಿದೆ. ಆದರೆ 'ಬಟ್ಟೆಗಳೆಂದರೆ ಅಲರ್ಜಿ' ಎಂಬ ಸಿದ್ಧಾಂತವನ್ನು ಬಲವಾಗಿ ನಂಬಿರುವ ಮಲ್ಲಿಕಾಳನ್ನು ಕನ್ನಡದವರು ಹೇಗೆ ಸ್ವೀಕರಿಸಬಹುದೆಂದು ಈಗ ಗಾಂಧಿನಗರದಲ್ಲಿ ಗಾಢವಾಗಿ ಚರ್ಚೆಯಾಗುತ್ತಿದೆ.

"ಆಕೆಗೆ ದುಬಾರಿ ಸಂಭಾವನೆ ಕೊಟ್ಟು ಕರೆ ತಂದರೆ ಖಂಡಿತಾ ವರ್ಕ್‌ಔಟ್ ಆಗುವುದಿಲ್ಲ" ಎಂಬುದು ಹಲವರ ವಾದವಾಗಿದ್ದರೆ, "ಆಕೆ ಚಿತ್ರವಿಡೀ ತುಂಡು ಬಟ್ಟೆಯಲ್ಲಿ ಕಾಣಿಸಲು ಒಪ್ಪಿಕೊಳ್ಳುವುದಿಲ್ಲ; ಸೀರೆಯಲ್ಲಿ ಅಥವಾ ಮಿಡಿ ಚೂಡಿದಾರ್‌ನಲ್ಲಿ ಪ್ರತ್ಯಕ್ಷಳಾದರೆ ಪ್ರೇಕ್ಷಕರು ಒಪ್ಪುವುದಿಲ್ಲ" ಎಂಬುದು ಕೆಲವರ ವಾದ. ನಿಜವಾಗಲೂ ನಟ-ನಿರ್ದೇಶಕ ಪ್ರೇಮ್ ಮತ್ತು ನಿರ್ಮಾಪಕ ಅಶ್ವಿನಿ ರಾಮ್‌ಪ್ರಸಾದ್‌ಗೆ ಇದೊಂದು ಬಿ-ಕ್ಕಟ್ಟಿನ ಪರಿಸ್ಥಿತಿಯೇ ಹೌದು!

ರೆಹಮಾನ್ ಆಗಮನ.....



ಕನ್ನಡ ಚಿತ್ರವೊಂದಕ್ಕೆ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಸಂಗೀತ ನೀಡುತ್ತಿದ್ದಾರೆ ಎಂಬುದು ಯಾಕೋ ಸೆನ್‌ಸೇಷನ್ ಸುದ್ದಿಯೇ ಆಗಿಲ್ಲ.

ಇದೇಕೆ ಹೀಗೆ ಎಂದು ಹುಡುಕುತ್ತಾ ಹೋದರೆ, ಆ ಚಿತ್ರದ ನಿರ್ದೇಶಕ ನಂಜುಂಡೇಗೌಡ ಮಾತ್ರ ಕನ್ನಡಿಗರಾಗಿವುದು ಕಾರಣವಿರಬಹುದೇ ಅನಿಸುತ್ತದೆ. ಏಕೆಂದರೆ ಈ ಚಿತ್ರದ ನಿರ್ಮಾಪಕರು ಮದ್ರಾಸ್‌ನಲ್ಲಿದ್ದಾರೆ. ಇದರ ಚಿತ್ರೀಕರಣವೂ ಲಂಡನ್‌ನಲ್ಲಿ ನಡೆಯಲಿದೆ. ಅದರ ನಾಯಕಿ ಕೂಡಾ ಮದ್ರಾಸ್‌ನವಳು. ಚಿತ್ರದ ಹೀರೋ 'ಅಮೃತಧಾರೆ'ಯ ಧ್ಯಾನ್.

ಒಂದು ಮೂಲದ ಪ್ರಕಾರ, ನಿರ್ದೇಶಕ ನಂಜುಂಡೇಗೌಡ ಮತ್ತು ಎ.ಆರ್. ರೆಹಮಾನ್ ಒಂದು ದಿನವೂ ಜೊತೆ ಕುಳಿತು ಚಿತ್ರದ ಬಗ್ಗೆ ಚರ್ಚೆ ಮಾಡಿದ್ದೇ ಇಲ್ಲವಂತೆ. ಬದಲಾಗಿ, ರೆಹಮಾನ್ ನೀಡಿದ ಟ್ಯೂನ್‌ಗಳನ್ನು ನಂಜುಂಡೇಗೌಡರು ತುಟಿಕ್‌ಪಿಟಿಕ್ ಎನ್ನದೇ ಬಳಸುತ್ತಿದ್ದಾರೆ.

ಇದೆಲ್ಲದರ ಹೊರತಾಗಿಯೂ, ರೆಹಮಾನ್ ಕನ್ನಡ ಚಿತ್ರಕ್ಕೆ ಸಂಗೀತ ನೀಡುತ್ತಿರುವುದು ಖಂಡಿತ ಒಂದು ಮೈಲಿಗಲ್ಲು.

ಡಬಲ್ ಮೀನಿಂಗ್ ಚಂದ್ರು ಕನ್ನಡ ಜಾಥಾ



ಇದೆಂತಹ ತಮಾಷೆ ನೋಡಿ!

ತನ್ನ ಜೀವಮಾನವಿಡೀ ದ್ವಂದಾರ್ಥ ಮತ್ತು ಅಶ್ಲೀಲ ಸಂಭಾಷಣೆಯ ಪಾತ್ರಗಳಲ್ಲೇ ಕಾಣಿಸಿಕೊಂಡು ಸಮಾಜದ ವಾತಾವರಣ ಕೆಡಿಸಿದ ಮುಖ್ಯಮಂತ್ರಿ ಚಂದ್ರುಗೆ ಈಗ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿದೆ.

ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಲು ಕನ್ನಡ ಜಾಥಾ ಎಂಬ ಕಾರ್ಯಕ್ರಮದ ನಾಯಕತ್ವವನ್ನು ಚಂದ್ರು ವಹಿಸಿಕೊಂಡಿದ್ದಾರೆ. ಕೀಳು ಅಭಿರುಚಿಯ ಪಾತ್ರಗಳಲ್ಲಿ ನಟಿಸುವಾಗ ಅವರ ಕನ್ನಡ ಪ್ರೇಮ ಎಲ್ಲಿ ಹೋಗಿತ್ತು ಎಂಬುದೇ ನಮ್ಮ ವಿನಮ್ರ ಪ್ರಶ್ನೆ. ಸಚಿವ ಸ್ಥಾನಕ್ಕೆ ಹಂಬಲಿಸಿದ್ದ ಚಂದ್ರು, ಕನಿಷ್ಠ ನಿಗಮ ಮಂಡಲಿಯ ಸ್ಥಾನವಾದರೂ ದಕ್ಕೀತೆ ಎಂದು ಕಾಯುತ್ತಿದ್ದರು. ಆದರೆ ಅವರಿಗೆ ಗೂಟದ ಕಾರ್ ಇರಲಿ, ಈಗ ಬಿಜೆಪಿ ಪಕ್ಷದಲ್ಲೇ ಯಾರೂ ಚಂದ್ರು ಬಗ್ಗೆ ಕ್ಯಾರೆ ಅನ್ನುತ್ತಿಲ್ಲ. ಅದಕ್ಕೆ ಈಗ ಅವರು ಕನ್ನಡ ಉಳಿಸಲು ಹೊರಟದ್ದಾರೆ. ಚಂದ್ರುರವರ ಅದೃಷ್ಟ ಹೇಗಿದೆ ಎಂದರೆ, ಅವರ ಕನ್ನಡ ಜಾಥಾ ಹೋದ ಕಡೆಯಲ್ಲೆಲ್ಲ ಜನರು ಡಬ್ಬಲ್ ಮೀನಿಂಗ್ ಡೈಲಾಗ್ ಹೇಳಿ ಎಂದು ಒತ್ತಾಯ ಮಾಡದಿದ್ದರೆ, ಅದೇ ಅವರ ಪುಣ್ಯ!

ರಂಗಭೂಮಿ ಸೇವೆಯಲ್ಲಿ ಮಂಡ್ಯ ರಮೇಶ್



ರಂಗಭೂಮಿಯಿಂದ ಸಿನಿಮಾಕ್ಕೆ ಬಂದು ಯಶಸ್ವಿಯಾದವರು ಮತ್ತೆ ತಿರುಗಿ ನಾಟಕಗಳತ್ತ ನೋಡಿದ್ದೇ ಅಪರೂಪ. ಬದಲಾಗಿ ಸಿನಿಮಾದಿಂದ ಖ್ಯಾತಿ, ಐಶ್ವರ್ಯ ಬಂದಂತೆಲ್ಲ ಸ್ಟುಡಿಯೋವನ್ನೋ, ಹೋಟೆಲ್‌ನ್ನೋ ಕಟ್ಟಿ ಬ್ಯುಸಿನೆಸ್ ಮಾಡುವವರೇ ಅಧಿಕ.

ಇಂತಹವರ ನಡುವೆ ಪ್ರತಿಭಾವಂತ ನಟ ಮಂಡ್ಯ ರಮೇಶ್ ಮೈಸೂರಲ್ಲಿ 'ನಟನ ರಂಗ ಮಂಟಪ' ಕಟ್ಟಿಕೊಂಡು, ಮಕ್ಕಳಿಗೆ ರಂಗ ತರಬೇತಿ ನೀಡುತ್ತಾ ಗೆಳೆಯರೊಂದಿಗೆ ರಂಗಸೇವೆಯಲ್ಲಿ ನಿರತರಾಗಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676[illegible] Fax : 26620026, E-mail :lankesh70@rediffmail.com. Printed at Rajhans Enterprises, # 134, 4th Main, Industrial Estate, Rajajinagar, Bangalore-